ಹುಲಿಗಿ ಪರಿಸರದ ಶಾಸನಗಳು ಮತ್ತು ದೇವಾಲಯಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್‌ಪದವಿಗಾಗಿ ಸಲ್ಲಿಸಿದ ಪ್ರಬಂಧ)

ಸಂಶೋಧಕರು
ಮಾಲನಬಿ

ಮಾರ್ಗದರ್ಶಕರು
ಡಾ.ಕೆ.ಜಿ.ಭಟ್‌ಸೂರಿ
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೧-೧೨

1010

ಹುಲಿಗಿ ಪರಿಸರದ ಶಾಸನಗಳು ಮತ್ತು ದೇವಾಲಯಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಪ್ರಬಂಧ)

ಸಂಶೋಧಕರು

ಮಾಲನಬಿ

ಮಾರ್ಗದರ್ಶಕರು

ಡಾ.ಕೆ.ಜಿ.ಭಟ್‌ಸೂರಿ

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೧-೧೨

ಪ್ರಮಾಣ ಪತ್ರ

'ಹುಲಿಗಿ ಪರಿಸರದ ಶಾಸನಗಳು ಮತ್ತು ದೇವಾಲಯಗಳು' ಎಂಬ ಪ್ರಬಂಧವನ್ನು ಡಾ.ಜಿ.ಭಟ್‌ಸೂರಿ, ಸಹ ಪ್ರಾಧ್ಯಪಕರು, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಈ ಪ್ರಬಂಧವು ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Malambi

ಮಾಲನಬಿ

ಸಂಶೋಧಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ

ದಿನಾಂಕ : 30/06/2012

ದೃಢೀಕರಣ ಪತ್ರ

'ಹುಲಿಗಿ ಪರಿಸರದ ಶಾಸನಗಳು ಮತ್ತು ದೇವಾಲಯಗಳು' ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಶಾಸನಶಾಸ್ತ್ರ ವಿಭಾಗದ ಎಂ.ಫಿಲ್. ಪದವಿಗಾಗಿ ಮಾಲನಬಿ ಇವರು ನನ್ನ ಮಾರ್ಗದರ್ಶನದಲ್ಲಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಕೆ.ಜಿ. ಭಟ್‌ಸೂರಿ
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ
ದಿನಾಂಕ : 30/06/2012

ಪರಿವಿಡಿ

ಸಂಕೇತ ಸೂಚಿಗಳು

01.	ಎ.ಇ.	– ಎಫಿಗ್ರಾಫಿಯಾ ಇಂಡಿಕಾ
02.	ಎಪಿಜಿಎಎಸ್	– ಆಂದ್ರಪ್ರದೇಶ ಗೌವರ್ನಮೆಂಟ ಆರ್ಕಿಯಾಲಾಜಿಕಲ್ ಸಿರೀಸ್
03.	ಎ.ಆರ್.	– ಆನ್ಯೂಯಲ್ ರಿಪೋರ್ಟ್ಸ ಆಫ್ ಇಂಡಿಯನ್ ಎಫಿಗ್ರಫಿ
04,	ಎ.ಆರ್.ಎಸ್.ಇ.ಇ.	–ಎನ್ಯುಲ್ ರ್‍ರಿಪೋರ್ಟ್ಸ ಆಫ್ ಸೌಥ್ ಇಂಡಿಯನ್ ಎಫಿಗ್ರಾಫಿ
05.	ಇ.ಕ	– ಎಫಿಗ್ರಾಫಿಯಾ ಕರ್ನಾಟಕ
06.	ಕ.ಇ.	– ಕರ್ನಾಟಕ ಇನ್ಸ್‌ಕ್ರಿಪ್‌ಶನ್ಸ್
0.7	ಕ್ವಾಜ.ಆ.ಮೈ.ಸೂ	– ಕ್ವಾರ್ಟಲೀ ಜರ್‌ನಲ್ ಆಫ್ ಮಿಥಿಕ್ ಸೂಸೈಟಿ
08.	ಮೈ ಆರಿ	– ಮೈಸೂರು ಅರ್ಕ್ಯಲಾಜಿಕಲ್ ರಿಪೋರ್ಟ್ಸ
09.	ವಿಪಿಆರ್	– ವಿಜಯನಗರ ಪ್ರೋಗ್ರೇಸಿವ್ ರಿಪೋರ್ಟ್ಸ
10.	ಶಾ.ಸಂ	– ಶಾಸನ ಸಂಖ್ಯೆ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಪೀಠಿಕೆ

ಕರ್ನಾಟಕದ ಹೃದಯ ಭಾಗದಲ್ಲಿರುವ ಕೊಪ್ಪಳ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಕನ್ನಡನಾಡಿನ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಕನ್ನಡ ನಾಡಿನ ಇತಿಹಾಸ ಹಾಗೂ ಸಂಸ್ಕೃತಿಗೆ ಕೊಡುಗೆ ನೀಡಿರುವುದರಲ್ಲಿ ಕೊಪ್ಪಳ ಜಿಲ್ಲೆ ಕೂಡ ಒಂದು. ಪ್ರಸ್ತುತ ಜಿಲ್ಲಾ ಕೇಂದ್ರವಾಗಿರುವ ಕೊಪ್ಪಳ ಅಂದು ಶಾಸನಗಳಲ್ಲಿ ಹಾಗೂ ಸಾಹಿತ್ಯದಲ್ಲಿ "ಜೈನರ ಕಾಶಿ" ಹಾಗೂ "ತಿರುಳ್ಗನ್ನಡ" ನಾಡೆಂದೇ ಕರೆಯಿಸಿಕೊಂಡಿದೆ (ಡಿ.ಎಸ್.ಅಶ್ವಥ್, ೨೦೦೧, ಪು:೩೫). ಪ್ರಸ್ತುತ ಈ ತಾಲ್ಲೂಕಿಗೆ ಒಳಪಡುವ ಮಹತ್ವಗಳಲ್ಲೊಂದಾದ 'ಶ್ರೀ ಕ್ಷೇತ್ರ ಹುಲಿಗಿ'ಯನ್ನು ಸೀಮಿತ ಮಾಡಿಕೊಂಡು ಈ ಪರಿಸರದ ಶಾಸನಗಳ ಮತ್ತು ದೇವಾಲಯಗಳ ಅಧ್ಯಯನ ಇಲ್ಲಿ ಮಾಡಲಾಗಿದೆ.

ಶ್ರೀ ಕ್ಷೇತ್ರ ಹುಲಿಗಿ ಹೊಸಪೇಟೆಯಿಂದ ೧೬.ಕಿ.ಮೀ ಹಾಗೂ ಕೊಪ್ಪಳದಿಂದ ೨೦ ಕಿ.ಮೀ ಅಂತರದಲ್ಲಿದೆ. ತುಂಗಭದ್ರ ನದಿ ಎಡದಂಡೆಯ ಮೇಲಿರುವ ಹುಲಿಗಿಯು ಪ್ರಾಚೀನ ಗ್ರಾಮಗಳಲ್ಲೊಂದಾಗಿದೆ. ಈ ಕ್ಷೇತ್ರಕ್ಕೆ 'ವ್ಯಾಘ್ರಪುರಿ' ಎಂಬ ಹೆಸರೂ ಇದೆ (ಡಾ.ಪುರುಷೋತ್ತಮ ಬಿಳಿಮಲೆ, ೧೯೯೦, ಪು:೧). ಪ್ರಾಚೀನ ಕಾಲದಲ್ಲಿ ಈ ಗ್ರಾಮವನ್ನು ಪುಲಿಗೆ, ಪುಲಿಗೆಯೂರು, ಪುಲ್ಲವಿಗೆ, ಹುಲಿಗೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು (ವೈ.ಎಸ್.ಸೋಮಶೇಖರ್‌ರವರ ಅಪ್ರಕಟಿತ ಲೇಖನ, ಕನ್ನಡ ವಿಶ್ವವಿದ್ಯಾಲಯ, ಹಂಪಿ).

ಹುಲಿಗಿ ಗ್ರಾಮದ ಸ್ಥಳ ವಿವರವನ್ನು ಶಾಸನದಲ್ಲಿ, ಮೂಡ ರಿಷ್ಯ ಮೂಕಾಚಲ, ತೆಂಕಲು ಗಂಧ ಮಾಧನಗಿರಿ, ಪಶ್ಚಿಮದಲು ನೋಡ ಶ್ರೀ ಕೂಟಂ ಬಡಗಲ್ಕಿಃಕಿನ್ದ ಎಂದು ಹೇಳಿದೆ. ಅದರನ್ವಯ ಹುಲಿಗಿಯು ರಿಷ್ಯ ಮೂಕಾಚಲ, ಗಂಧಮಾಧನಗಿರಿ, ಶ್ರೀಕೂಟ ಮತ್ತು ಕಿಷ್ಕಿಂದ ಪರ್ವತಗಳ ಮಧ್ಯ ಭಾಗದಲ್ಲಿತ್ತೆಂಬುದು

ಸ್ಪಷ್ಟ. ಹುಲಿಗಿಯು ಪ್ರಾಚೀನ ಅಗ್ರಹಾರಗಳಲ್ಲೊಂದಾಗಿದ್ದು, ಇಲ್ಲಿ ೫೩ ಬ್ರಾಹ್ಮಣ ಮಹಾಜನರು ವಾಸವಾಗಿದ್ದರು. ಅಂತೆಯೇ ತುಂಗಭದ್ರಾ ನದಿಯನ್ನು ಶಾಸನದಲ್ಲಿ ದಕ್ಷಿಣ ಗಂಗೆಯೆಂದು ಕರೆದಿರುವುದು ಗಮನಾರ್ಹ. ತುಂಗಭದ್ರ ನದಿಯನ್ನು ಉತ್ತರವಾಹಿನಿ ಎಂದು ಕರೆಯಲಾಗಿದೆ (ಶ್ರೀ ಆರ್.ಬಿ.ದೇಸಾಯಿ, ೧೮೮೫, ಪುಟ:೧). ನದಿ ದಂಡೆಯಲ್ಲಿನ ಸೋಮೇಶ್ವರ ದೇವಸ್ಥಾನ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ್ದು. ಇಲ್ಲಿನ ವಿಶೇಷತೆ ಕ್ರಿ.ಶ.೧೨ನೆಯ ಶತಮಾನದಲ್ಲಿಯೇ ಹುಲಿಗಿ ಕ್ಷೇತ್ರದಲ್ಲಿ ಬೇಸಾಯ ಚೆನ್ನಾಗಿ ನಡೆಯುತ್ತಿತ್ತೆಂಬುದಕ್ಕೆ ಹುಲಿಗಿಯಲ್ಲಿರುವ ಸೋಮೇಶ್ವರ ದೇವಸ್ಥಾನದಲ್ಲಿರುವ ಶಾಸನವೇ ಸಾಕ್ಷಿಯಾಗಿದೆ.

ಹುಲಿಗಿ ದೇವಸ್ಥಾನದ ಬಗೆಗೆ ಚಾರಿತ್ರಿಕ ಉಲ್ಲೇಖಗಳು ಹೆಚ್ಚು ಲಭ್ಯವಿಲ್ಲ. ಆದರೆ ಹುಲಿಗೆಮ್ಮ ದೇವಸ್ಥಾನದ ಪಕ್ಕದಲ್ಲಿರುವ ಸೋಮೇಶ್ವರ ಲಿಂಗದ ಬಗ್ಗೆ ಶಾಸನವೊಂದು ಇದೆ. ಅದರ ಕಾಲ ಚಾಲುಕ್ಯ ವಿಕ್ರಮ ಶಕೆ ೧೩ (ಸು.ಕ್ರಿ.ಶ.೧೩ನೆಯ ಶತಮಾನ) ಎಂದು ಹೇಳಲಾಗಿದೆ. ಈ ಶಾಸನದ ಪ್ರಕಾರ ಇಲ್ಲಿ ಮೊದಲು ಚೌಡಿಭಟ್ಟನೆಂಬ ಬ್ರಾಹ್ಮಣನಿದ್ದ, ಆತನು ಕಾಮಕಾಯನ ಗೋತ್ರಕ್ಕೆ ಸೇರಿದ್ದು, ಆತನ ಪತ್ನಿಯ ಹೆಸರು ಅಂಚಿಕಬ್ಬೆ, ಇವರಿಬ್ಬರೂ ಸೋಮೇಶ್ವರನ ಅನನ್ಯ ಭಕ್ತರಾಗಿದ್ದರು. ಜೊತೆಗೆ ಆ ಊರಿನ ಜನರಿಗೆ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಇಲ್ಲಿ ಒಮ್ಮೆ ಮಳೆ ಬೀಳದೆ ಕ್ಷಾಮವು ತಲೆದೋರಿದಾಗ ಚೌಡಿಭಟ್ಟರು ಊರಿನವರ ಸಹಾಯದಿಂದ ತುಂಗಭದ್ರ ನದಿಗೆ ಒಡ್ಡನ್ನು ಕಟ್ಟಿ ನೀರು ಊರೊಳಗೆ ಬರುವಂತೆ ವ್ಯವಸ್ಥೆ ಮಾಡಿದರು.

ನದಿಯ ನೀರು ಕೃಷಿ ಭೂಮಿಗೆ ದೊರಕುವಂತಾಗಲು ಆತ ಕಾಲುವೆಗಳನ್ನು ನಿರ್ಮಿಸುತ್ತಾನೆ. ಹೀಗೆ ಇಡೀ ಕ್ಷೇತ್ರ ಅಭಿವೃದ್ಧಿ ಹೊಂದಿತು. ಇದರಿಂದ ಸಂತೋಷಗೊಂಡ (ತ್ರೈಲೋಕ್ರಮಲ್ಲ) ಅರಸ ಚೌಡಿಭಟ್ಟನ ಸಮಾಜ ಸೇವೆಗೆ ಮೆಚ್ಚಿ ಉದಾರವಾಗಿ ಕಾಣಿಕೆ ನೀಡಿ ಗೌರವಿಸುತ್ತಾನೆ. ಈ ದೇವಾಲಯದ ಕುರಿತು ಒಂದೇ ಶಾಸನವು ದೊರಕಿದ್ದರೂ, ಈ ಕ್ಷೇತ್ರದ ಮೇಲೆ ಬೆಳಕು ಚೆಲ್ಲಿರುವುದು ಇದರ ವಿಶೇಷತೆಯಾಗಿದೆ. ಇದರಿಂದ ಚಾಲುಕ್ಯ ಆಡಳಿತಾವಧಿಗಿಂತಲೂ ಮೊದಲು ಹುಲಿಗಿ ಗ್ರಾಮದಲ್ಲಿ ಜನವಸತಿ ಇದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಭೂ ಭೌಗೋಳಿಕ ಪ್ರಭಾವ

ಕರ್ನಾಟಕದ ಉತ್ತರ ಭಾಗಕ್ಕಿರುವ ಈ ಪ್ರದೇಶ ಮೊದಲು ರಾಯಚೂರು ಜಿಲ್ಲೆಯಲ್ಲಿತ್ತು. ೧೯೯೮ರ ಜಿಲ್ಲಾ ಮರು ವಿಂಗಡಣೆಯ ಸಂದರ್ಭದಲ್ಲಿ ಕೊಪ್ಪಳವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು. ಪ್ರತ್ಯೇಕ ಅಧ್ಯಯನದ ಹುಲಿಗಿ ಗ್ರಾಮ ಕೊಪ್ಪಳ ಜಿಲ್ಲೆ ಕೊಪ್ಪಳ ತಾಲ್ಲೂಕಿಗೆ ಒಳಪಡುತ್ತದೆ. ಈ ಪರಿಸರದ ಕೆಲವು ಭಾಗ ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದೆ. ಮಾನವ ವಾಸಯೋಗ್ಯ ಪ್ರದೇಶವಾಗಿ ಅತ್ಯಂತ ಪ್ರಾಚೀನ ಕಾಲಘಟ್ಟದಿಂದಲೂ ಗುರುತಿಸಿಕೊಂಡಿರುವುದು ಈ ಪ್ರದೇಶದ ಮಹತ್ವವನ್ನು ತೋರಿಸುತ್ತದೆ. ಈ ಪರಿಸರದ ಸುತ್ತಮುತ್ತಲೂ ಶಿಲಾಯುಗದ ಪ್ರದೇಶಗಳು ಇದ್ದವು ಎನ್ನುವುದಕ್ಕೆ ಅನೇಕ ಆಧಾರಗಳು ದೊರೆತಿವೆ.

ಉದಾ: ಬಂಡಿಹರ್ಲಾಪುರ, ಶಿವಪುರಗಳಲ್ಲಿ ಶಿಲಾಯುಗ, ನವಶಿಲಾಯುಗಗಳಲ್ಲಿಯ ಗವಿ ವರ್ಣ ಚಿತ್ರಗಳು ದೊರಕಿವೆ ಮತ್ತು ಶಿವಪುರದಲ್ಲಿ ಬೂದಿದಿಬ್ಬ ದೊರೆತಿದೆ (ಕೆ.ಬಿ.ಶಿವತಾರಕ್, ೨೦೦೧, ಪು:೬೫).

ಹವಾಮಾನ

ಈ ಪ್ರದೇಶದ ರೇಖಾಂಶವು ೭೫-೭೬ ಆಗಿದೆ. ಅಕ್ಷಾಂಶವು ೧೫-೧೫ ಆಗಿದೆ. ಸಮುದ್ರ ಮಟ್ಟದಿಂದ ಈ ಪ್ರದೇಶವು ಸುಮಾರು ೫೨೩.೦೪ ಮೀಟರ್ ಎತ್ತರದಲ್ಲಿದೆ. ಬೇಸಿಗೆಯ ಇದರ ಗರಿಷ್ಠ ಸರಾಸರಿ ಉಷ್ಣತೆ ೩೯ ಡಿಗ್ರಿ ಸೆಲ್ಸಿಯಸ್‌ನಷ್ಟು ಇರುತ್ತದೆ. ಗರಿಷ್ಠ ೪೩ ಡಿಗ್ರಿ ಸೆಂಟಿಗ್ರೇಡ್‌ವರೆಗೆ ಮೇ ತಿಂಗಳಲ್ಲಿ ದಾಖಲಾಗಿದೆ. ಕನಿಷ್ಠ ತಾಪಮಾನ ಡಿಸೆಂಬರ್-ಜನವರಿ ತಿಂಗಳಲ್ಲಿ ೯ ಡಿಗ್ರಿ ಸೆಂಟಿಗ್ರೈಡ್‌ಗೆ ಇಳಿದ ದಾಖಲೆಗಳಿವೆ. ಕನಿಷ್ಠ ಸರಾಸರಿ ತಾಪಮಾನವು ೧೭.೫೦ ಆಗಿರುತ್ತದೆ. ಈ ಉಷ್ಣತಾ ಪ್ರದೇಶವು ಜನಯೋಗ್ಯವಾದ ತಾಪಮಾನ ಹೊಂದಿದೆ (ಅಶ್ವಥ್ ಡಿ., ೨೦೦೧, ಪು:೨೮-೨೯).

ಸಾರಿಗೆ

ಪ್ರಸುತ್ತ ಹುಲಿಗಿಯು ಹುಬ್ಬಳ್ಳಿ-ಗುಂತಕಲ್ಲು ರೈಲ್ವೆ ಮಾರ್ಗದಲ್ಲಿ ಹೊಸಪೇಟೆಯಿಂದ ೮ ಕಿ.ಮೀ ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ ನಂ.೧೩ನ್ನು ಕೂಡಿಕೊಳ್ಳುವ ರಾಜ್ಯ ಹೆದ್ದಾರಿ ಸ್ವಲ್ಪ ಹಾಯ್ದು ಹೋಗಿದೆ. ವ್ಯಾಪಾರ ವಾಣಿಜ್ಯ ಇತ್ಯಾದಿಗಳಿಗೆ ಇದರಿಂದ ತುಂಬಾ ಅನುಕೂಲವಾಗಿದೆ. ಜನ ಜೀವನ ದಕ್ಷಿಣ ಮಧ್ಯ ರೈಲ್ವೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಒದಗಿಸುವ ಎಲ್ಲಾ ಸೌಕರ್ಯಗಳನ್ನು ಪಡೆದುಕೊಳ್ಳುತ್ತಿದೆ (ಸೂರ್ಯನಾಥ ಯು.ಕಾಮತ್ (ಸಂ)., ೧೯೮೬, ಪು-೪೮೯).

ಮಳೆ ಮತ್ತು ಬೆಳೆ

ಮಳೆಯ ಪ್ರಮಾಣವು ಸರಾಸರಿಗಿಂತ ಕಡಿಮೆ ಇದೆ. ಇಲ್ಲಿ ನೈರುತ್ಯ ಮಾರುತಗಳು ಮಳೆ ಸುರಿಸುತ್ತವೆ. ಮಾನ್‌ಸೂನ್ ಮೇ ಕೊನೆಯ ವಾರದಿಂದ ಜೂನ್ ಎರಡನೇ ವಾರದವರೆಗೆ ಈ ಪ್ರದೇಶವನ್ನು ತಲುಪುತ್ತವೆ. ತುಂಗಭದ್ರಾ ನದಿ ಈ ಪರಿಸರದಲ್ಲಿ ಹರಿಯುತ್ತಿರುವುದರಿಂದ ಇದು ಬೆಳೆಗಳಿಗೆ ಮತ್ತು ಪರಿಸರಕ್ಕೆ ಅನುಕೂಲಕರವಾಗಿದೆ. ಮುಂಗಾರು ಮತ್ತು ಹಿಂಗಾರು ಸಾಧಾರಣವಾಗಿರುತ್ತದೆ. ತುಂಗಭದ್ರ ಅಚ್ಚುಕಟ್ಟು ಭೂಮಿಗಳು ಈ ಪರಿಸರದಲ್ಲಿ ಇರುವುದರಿಂದ ಇಲ್ಲಿ ಕಬ್ಬು ಮತ್ತು ಭತ್ತವನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಜೊತೆಗೆ ಶೇಂಗಾ, ಮೆಕ್ಕೆಜೋಳವನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ (ಸ್ಥಳೀಯ ಮಾಹಿತಿ).

ಭಾಷೆ

ಪ್ರಸ್ತುತ ಹುಲಿಗಿ ಪರಿಸರದಲ್ಲಿ ಆಡುವ ಮಾತೃಭಾಷೆ ಕನ್ನಡ ಭಾಷೆಯಾಗಿದೆ. ಹೈದರಾಬಾದ್ ನಿಜಾಮರ ಆಳ್ವಿಕೆಯ ಕಾಲಕ್ಕೆ ಈ ಭಾಷೆ ಒಳಪಟ್ಟಿದ್ದರಿಂದ ಉರ್ದುವಿನ ಛಾಪು ಪ್ರಾಪ್ತವಾಗಿದೆ. ಕೈಗಾರೀಕರಣವು ನಿಜಾಮರ ಕಾಲದಿಂದಲೂ ಈ ಪರಿಸರದಲ್ಲಿ ಇತ್ತು ಎನ್ನುವುದಕ್ಕೆ 'ಸಾಲರ್‌ಜಂಗ್ ಶುಗರ್ ಮಿಲ್ಸ್,' ತುಂಗಭದ್ರ ಫರ್ಟಿಲೈಜರ್ಸ್ ಕಾರ್ಖಾನೆಗಳು ಸಾಕ್ಷಿ. ಹಲವು ಜಾನಪದ ಕೈಗಾರಿಕೆ, ಕಲೆಗಳನ್ನು ಈ

ಪ್ರದೇಶದಲ್ಲಿ ಗುರುತಿಸಬಹುದು. ಉದಾ: ಬುಟ್ಟಿ ಹೆಣೆಯುವುದು, ಕುಂಬಾರಿಕೆ, ಕುಂಕುಮ, ಬಂಡಾರ ತಯಾರಿಸುವುದು ಮುಂತಾದವು. ವೀರಶೈವ, ಮುಸಲ್ಮಾನ್, ಹಿಂದೂ, ಜೈನ ಧರ್ಮಗಳು ಪ್ರಚಲಿತದಲ್ಲಿವೆ. ಅಲ್ಲೊಂದು ಇಲ್ಲೊಂದು ಕ್ರೈಸ್ತ ಕುಟುಂಬಗಳು ವಲಸೆ ಬಂದಿವೆ. ಬಹು ಜನಗಳ ಮಟ್ಟಿಗೆ ಇಲ್ಲಿನ 'ಶ್ರೀ ಹುಲಿಗೆಮ್ಮ'ನೇ ಆರಾಧ್ಯ ದೈವವಾಗಿದೆ.

ಅಧ್ಯಯನದ ಉದ್ದೇಶ

ಹುಲಿಗಿ ಕ್ಷೇತ್ರದಲ್ಲಿ ಶ್ರೀ ರೇಣುಕಾಂಬೆ ಹುಲಿಗೆಮ್ಮನಾಗಿ ವಾಸವಾಗಿದ್ದಾಳೆ. ಅದರ ಪೂರ್ವ ಹಿನ್ನಲೆಯನ್ನು ನೋಡಿದರೆ ಜಾನಪದ ಮತ್ತು ಸಾಹಿತ್ಯಿಕ ಹಿನ್ನಲೆಯ ದೃಷ್ಟಿಯಿಂದ ಅಧ್ಯಯನಗಳಾಗಿವೆ. ಆದರೆ ಪುರಾತತ್ವ ಆಕರಗಳು ಸಾಕಷ್ಟಿದ್ದರೂ, ಈ ಕುರಿತು ವ್ಯವಸ್ಥಿತ ಅಧ್ಯಯನ ಆಗಿಲ್ಲ. ಈ ಹಿನ್ನಲೆಯಲ್ಲಿ ಪ್ರಸ್ತುತ ಹುಲಿಗಿ ಪರಿಸರದ ಶಾಸನಗಳ, ದೇವಾಲಯಗಳ ಹಿನ್ನಲೆಯಲ್ಲಿ ಈ ಅಧ್ಯಯನ ಕೈಗೊಳ್ಳುವುದೇ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ-ಸ್ವರೂಪ

ವಿಷಯ ವಿಶ್ಲೇಷಣೆಯ ದೃಷ್ಟಿಯಿಂದ ಈ ಹುಲಿಗೆ ಪರಿಸರದ ಸುತ್ತಮುತ್ತಲಿನ ಊರುಗಳಾದ ಪೂರ್ವದಲ್ಲಿ ಹೊಸೂರು, ಪಶ್ಚಿಮದಲ್ಲಿ ಕಿಡಿದಾಳ ಹಾಗೂ ಉತ್ತರದಲ್ಲಿ ಪಂಪಾಸರೋವರ ದಕ್ಷಿಣದಲ್ಲಿ ಹಿರೇಕಾಸಿನ ಕಂಡಿವರೆಗೆ ಬರುವ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಸಹಾಯವಾಗುವ ಇತರೆಡೆಯ ಶಾಸನಗಳನ್ನು ಮತ್ತು ಸಮಕಾಲೀನ ಕೃತಿಗಳನ್ನು ಪೂರಕವಾಗಿ ಇಟ್ಟುಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

ಹುಲಿಗಿ ಪರಿಸರದಲ್ಲಿ ಕಂಡುಬಂದ ಪ್ರಾಚೀನ ದೇವಾಲಯಗಳು ಮತ್ತು ಶಿಲ್ಪಗಳು, ಶಾಸನಗಳು ಮುಂತಾದ ಕುರುಹುಗಳನ್ನು ಗುರುತಿಸಿ ಪ್ರಕಟಿತ ಹಾಗೂ ಅಪ್ರಕಟಿತ ಮಾಹಿತಿಗಳಿಂದ ವಿಷಯವನ್ನು ಒಂದೆಡೆ ಸೆರೆಹಿಡಿಯುವ ಪ್ರಯತ್ನ ಇದಾಗಿದೆ.

ಪೂರ್ವಾಧ್ಯಯನಗಳ ಸಮೀಕ್ಷೆ

ಕೊಪ್ಪಳ ಜಿಲ್ಲಾ ಶಾಸನ ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಇದರಲ್ಲಿ ಹುಲಿಗಿ ಪರಿಸರದ ಎಲ್ಲಾ ಲಭ್ಯವಿರುವ ಶಾಸನಗಳನ್ನು ಪ್ರಕಟಿಸಲಾಗಿದೆ. ಕೊಪ್ಪಳ ಜಿಲ್ಲಾ ದೇವಾಲಯಗಳ ಕೋಶ ಗ್ರಂಥದಲ್ಲಿ (ಸಂ.ಕೆ.ಎಂ.ಸುರೇಶ್, ವಾಸುದೇವ ಬಡಿಗೇರ್, ಎಸ್.ವೈ.ಸೋಮಶೇಖರ್, ೨೦೦೧) ಹುಲಿಗಿ ಪರಿಸರಕ್ಕೆ ಸಂಬಂಧಿಸಿದಂತೆ ದೇವಾಲಯಗಳ ಉಲ್ಲೇಖಗಳಿವೆ. ಶ್ರೀ.ಬಿ.ಆರ್.ದೇಸಾಯಿಯವರು 'ಶ್ರೀ ಹುಲಿಗಿ ರೇಣುಕಾಂಬಾ ಸ್ಥಳ ಚರಿತ್ರೆ' ಕುರಿತು ಕ್ಷೇತ್ರದ ಮಾಹಿತಿ ಆಧಾರಿತ ಕೃತಿಯೊಂದನ್ನು ರಚಿಸಿದ್ದಾರೆ (ಪಿ.ಬಿ.ದೇಸಾಯಿ (ಸಂ)., ಅಪ್ರಕಟಿತ ಲೇಖನ, ೧೮೮೫). ಡಾ.ಪುರುಷೋತ್ತಮ ಬಿಳಿಮಲೆಯವರು 'ಹುಲಿಗೆಮ್ಮ' ಎಂಬ ಅಧ್ಯಯನ ಯೋಜನೆಯನ್ನು ಜಾನಪದ ಹಿನ್ನಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗಿದೆ. ಕೃಷ್ಣವೇಣಿ ಆರ್., ತಮ್ಮ

ಪಿಹೆಚ್.ಡಿ ಪ್ರಬಂಧದಲ್ಲಿ ಹುಲಿಗೆಮ್ಮನ ಪ್ರಸ್ತಾವನೆ ನೀಡಿದ್ದಾರೆ. ಅಶ್ವಥ್ ಡಿ., ಅವರು ತಮ್ಮ ಪಿಹೆಚ್.ಡಿ ಪ್ರಬಂಧದಲ್ಲಿ ಹುಲಿಗಿ ಕುರಿತು ಐತಿಹಾಸಿಕವಾಗಿ ಉಲ್ಲೇಖಿಸಿದ್ದಾರೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ, ವಿಷಯ ನಿರೂಪಣೆಯಲ್ಲಿ ಸಂಶೋಧನಾ ವಿಧಿ ವಿಧಾನಗಳನ್ನು ಅನುಸರಿಸಲಾಗಿದೆ. ಪ್ರಾರಂಭದಲ್ಲಿ ಹುಲಿಗಿ ಪರಿಸರ ಅಂದರೆ ಹೊಸೂರು, ಪಂಪಾಸರೋವರ, ಹಿರೇಕಾಸಿನಕಂಡಿ ಇಲ್ಲಿನ ಶಾಸನ ಮತ್ತು ದೇವಾಲಯಗಳ ಕುರಿತು ಈಗಾಗಲೇ ಪ್ರಕಟವಾಗಿರುವ ಕೃತಿ, ಲೇಖನ, ಪ್ರಕಟಣೆಗಳು ಮತ್ತು ಪ್ರಬಂಧಗಳನ್ನು ಪರಿಶೀಲಿಸಿ ಒಟ್ಟಿಗೆ ಆಕರ ಕೃತಿಗಳ ಪಟ್ಟಿಯನ್ನು ತಯಾರಿಸುವುದು ಪ್ರಥಮ ಆದ್ಯತೆಯಾಗಿದೆ. ಹುಲಿಗಿ ಪರಿಸರದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಶಾಸನಗಳು, ದೇವಾಲಯಗಳು, ಶಿಲ್ಪ ಮತ್ತು ಸ್ಮಾರಕ ಶಿಲ್ಪಗಳ ವಿವರ ಸಂಗ್ರಹಿಸಿ ಪೂರ್ವ ಅಧ್ಯಾಯಗಳ ದಾಖಲೆಯೊಂದಿಗೆ ಅವುಗಳ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಪ್ರತಿಯೊಂದು ಪ್ರಾಚೀನ ದೇವಾಲಯದ ವಾಸ್ತು ರಚನೆಯನ್ನು ಅಧ್ಯಯನ ಮಾಡಿ ಅವುಗಳ ವಿನ್ಯಾಸ ಮತ್ತು ಮಾದರಿ ಶೈಲಿಗಳನ್ನು ಗುರುತಿಸಲಾಗಿದೆ. ಗರ್ಭಗೃಹದಿಂದ ಮುಖಮಂಟಪದವರೆಗಿನ ಒಳಭಾಗ, ಊರ್ಧ್ವಮುಖ ವಾಸ್ತು ರಚನೆಯನ್ನು, ಅಧಿಷ್ಠಾನದಿಂದ ಶಿಖರದವರೆಗಿನ ಹೊರಭಾಗವನ್ನು ಪರಿಶೀಲಿಸಿ ವಿಶ್ಲೇಷಿಸಲಾಗಿದೆ.

ಪ್ರಬಂಧದಲ್ಲಿ ದೇವಾಲಯಗಳಲ್ಲಿ ಮತ್ತು ಅವುಗಳ ಪರಿಸರದಲ್ಲಿ ಕಂಡುಬಂದ ಶಿಲ್ಪ ಮಾಧ್ಯಮ ಶೈಲಿ, ಕಾಲಮಾನ ಮತ್ತು ಪ್ರತಿಮೆಯ ಲಕ್ಷಣಗಳ ಹಿನ್ನಲೆಯನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ.

ಸ್ಮಾರಕ ಶಾಸನಗಳ ಕುರಿತು ಚರ್ಚಿಸುವಾಗ ಅವುಗಳ ಮೇಲಿರುವ ಶಾಸನ ಹಾಗೂ ಉಬ್ಬು ಶಿಲ್ಪಗಳನ್ನು ಗಣನೆಗೆ ತೆಗೆದುಕೊಂಡು ವಿಷಯ ನಿರೂಪಣೆಗೆ ಅನುಗುಣವಾಗಿ ಅವುಗಳನ್ನು ವಿವಿಧ ಬಗೆಯಲ್ಲಿ ವಿಂಗಡಿಸಿ ಪರಿಶೀಲಿಸಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತ ಮಾಹಿತಿಯನ್ನು ಮತ್ತು ಸ್ಥಳೀಯ ಶಾಸನೋಕ್ತ ದೇವಾಲಯಗಳನ್ನು ಕುರಿತು ಚರ್ಚಿಸುವಾಗ ಅವುಗಳ ಮಾಧ್ಯಮ ಮತ್ತು ಸಮಕಾಲೀನವಾಗಿ ಅವುಗಳ ಕಾಲಮಾನದ ವಿವರಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಹೀಗೆ ಮೂಲ ಮತ್ತು ಪೂರಕ ಆಕರಗಳಾದ ಶಾಸನ, ದೇವಾಲಯ, ಶಿಲ್ಪ, ಇತರೆ ಶಿಲ್ಪಗಳು ಅಥವಾ ಸ್ಮಾರಕಗಳು ಮೊದಲಾದ ವಿವರಗಳನ್ನೆಲ್ಲ ಪ್ರತ್ಯೇಕವಾದ ಪಟ್ಟಿಕೆಯಲ್ಲಿ ಸಂಗ್ರಹಿಸಿ ವಿಷಯಕ್ಕನುಗುಣವಾಗಿ ಹೊಂದಿಸಿಕೊಂಡು ಪ್ರಸ್ತುತ ಸಂಶೋಧನ ಪ್ರಬಂಧವನ್ನು ವ್ಯವಸ್ಥಿತವಾದ ರೀತಿಯಲ್ಲಿ ವಿನ್ಯಾಸಗೊಳಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ವಿಷಯ ನಿರೂಪಣೆಯ ಸಂದರ್ಭದಲ್ಲಿ ಅವಶ್ಯಕವೆನಿಸಿದ ನಕ್ಷೆಗಳು, ಛಾಯಾ ಚಿತ್ರಗಳನ್ನು ಕೊನೆಗೆ ತೋರಿಸಲಾಗಿದೆ.

ಅಧ್ಯಾಯ - ಎರಡು

ಐತಿಹಾಸಿಕ ಹಿನ್ನೆಲೆ

ಅಧ್ಯಾಯ - ಎರಡು

ಐತಿಹಾಸಿಕ ಹಿನ್ನೆಲೆ

ಪೀಠಿಕೆ

ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹು ಪ್ರಚಲಿತವಿದೆ. ಇತಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ಈ ರಾಜಕೀಯ ಇತಿಹಾಸವೇ ಪ್ರಧಾನವಾಗಿದೆ. (ಎಂ.ಚಿದಾನಂದ ಮೂರ್ತಿ, ೧೯೭೯, ಪು:೧) ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನ ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ, ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅದರ ಜೀವನ ಸಮಸ್ಯೆಗಳು ಅದರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ ಈ ಎಲ್ಲಾ ಮಾಹಿತಿಗಳನ್ನು ತಿಳಿದುಕೊಳ್ಳಲು ಶಾಸನಗಳೇ ಪ್ರಮುಖ ಆಧಾರಗಳಾಗಿವೆ.

"Inscription and History are two Face of one coin, Inscriptions are the main source of History" ಶಾಸನಗಳು ಮತ್ತು ಇತಿಹಾಸ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಅಂದರೆ ಶಾಸನಗಳಿಲ್ಲದೇ ಇತಿಹಾಸವಿಲ್ಲ ಇತಿಹಾಸವಿಲ್ಲದೇ ಶಾಸನಗಳು ಇಲ್ಲ. ಶಾಸನಗಳು ಇತಿಹಾಸದ ಮೂಲ ಆಕರಗಳಾಗಿವೆ. ನಾಡಿನ ಇತಿಹಾಸವನ್ನು ನಿರ್ಮಿಸುವಲ್ಲಿ ಶಾಸನಗಳ ಪಾತ್ರ ಹೆಚ್ಚು ಮಹತ್ವದ್ದಾಗಿದೆ.

ಪ್ರಸ್ತುತ ಹುಲಿಗಿ ಪರಿಸರಕ್ಕೆ ಸಂಬಂಧಿಸಿದಂತೆ ಶಾಸನಗಳು ಆ ಪ್ರದೇಶದ, ಆ ಗ್ರಾಮದ ಇತಿಹಾಸವನ್ನು ತಿಳಿಸಿ ಕೊಡುತ್ತವೆ. ಕಲ್ಯಾಣ ಚಾಲುಕ್ಯರ ಕಾಲಕ್ಕಿಂತಲೂ ಮುಂಚಿತವಾಗಿಯೂ ಇಲ್ಲಿ ಜನ ವಾಸವಾಗಿದ್ದು. ಇಲ್ಲಿಯೂ ಒಂದು ಪ್ರದೇಶವಿತ್ತು ಎಂದು ತಿಳಿಯುತ್ತದೆ. ಈ ಹಿನ್ನಲೆಯಲ್ಲಿ ಶಾಸನಗಳನ್ನು ಪ್ರಧಾನ ಆಕರಗಳನ್ನಾಗಿ ಬಳಸಿ ಈ ಪರಿಸರದ ರಾಜಕೀಯ ವ್ಯವಸ್ಥೆಯ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ರಾಜಕೀಯ ವ್ಯವಸ್ಥೆ

ಕಲ್ಯಾಣ ಚಾಲುಕ್ಯರು, ವಿಜನಯಗರದ ಅರಸರು, ಹೈದರಾಬಾದ್ ನಿಜಾಮರು ಇವೆರಲ್ಲರ ಆಳ್ವಿಕೆಗೆ ಹುಲಿಗಿ ಪರಿಸರ ಒಳಪಟ್ಟಿತ್ತು. ಕರ್ನಾಟಕವನ್ನಾಳಿದ ಪ್ರಮುಖ ಅರಸು ಮನೆತನವೆಂದರೆ ಕಲ್ಯಾಣ ಚಾಲುಕ್ಯರು. ಈ ವಂಶದ ಸಾಮ್ರಾಜ್ಯ ಸ್ಥಾಪಕನಾದ ಇಮ್ಮಡಿ ತೈಲಪ. ಈತನು ಕ್ರಿ.ಶ.೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ ಈ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಹೀಗೆ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಕೊಪ್ಪಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದಾಗ ಕಾಮಕಾಯನ ಗೋತ್ರದ ನಾರಾಯಣ ಭಟ್ಟೋಪಾಧ್ಯಾಯನ ಮಗ ಚಾವೇದಿಭಟ್ಟನು ಹುಲಿಗೆಯೆಂಬ ಪುರವನ್ನು ತ್ರೈಲೋಕ್ಯಮಲ್ಲನಿಂದ ಪಡೆದನು. ಹುಲಿಗಿಯ ಇನ್ನೊಂದು ಶಾಸನದಲ್ಲಿ ವಿರೂಪಾಕ್ಷ ಒಡೆಯ ಮತ್ತು ಚಂದ್ರಕಾಂತ ಒಡೆಯನನ್ನು ಹಾಗೂ ಮೂರನೇಯ ಶಾಸನ ವಾಸಪನನ್ನು ಉಲ್ಲೇಖಿಸುತ್ತದೆ. ೧೫-೧೬ನೇ ಶತಮಾನದಲ್ಲಿ 'ಮಲ್ಲಿಶೆಟ್ಟಿ' ಮತ್ತು ಆತನ ಪತ್ನಿ 'ವಿರುಪಕ್ಕ' ಎಂಬುವವರು ಸೋಮೇಶ್ವರನ ಸೇವೆಯನ್ನು ಮಾಡಿದರು ಎಂಬ ಉಲ್ಲೇಖ ಶಿವಪುರ ಬಳಿಯ ಸೋಮನಾಥ ಬೆಟ್ಟದಲ್ಲಿರುವ ಶಾಸನವೊಂದರಲ್ಲಿ ಉಲ್ಲೇಖಿಸಲಾಗಿದೆ. ತ್ರೈಲೋಕ ಮಲ್ಲನು (I ನೇ ಸೋಮೇಶ್ವರ) ದಾನ ನೀಡಿದ ಬಗ್ಗೆ ವಿಪ್ರ ಶಿವದೇವಾಲಯದಲ್ಲಿರುವ ಶಾಸನವು ಉಲ್ಲೇಖಿಸುತ್ತದೆ **(IK.III, No-79).**

ಕಲ್ಯಾಣ ಚಾಲುಕ್ಯರ ನಂತರ ಹೊಸ ಮಲೆದುರ್ಗದ ಅರಸರಾದ ಕಂಪಿಲರಾಯ ಹಾಗೂ ಆತನ ಮಗ ಕುಮಾರ ರಾಮ ಆಡಳಿತ ನಡೆಸಿದರು. ಇವರು ಕುಮ್ಮಟ ದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಆದರೆ ಈ ಪರಿಸರದಲ್ಲಿ ಯಾವುದೇ ಶಾಸನಗಳು ಈ ಕುರಿತಂತೆ ದೊರೆತಿಲ್ಲಾ **(ಹೆಚ್.ಎಸ್.ಪಾಟೀಲ್, ಪು-೩೭).**

ಕಲ್ಯಾಣದ ಚಾಲುಕ್ಯರ ನಂತರ ಈ ಪ್ರದೇಶದಲ್ಲಿ ವಿಜಯನಗರ ಅರಸರು ಆಳಿದರು.

ಭಾರತದ ವಾಯುವ್ಯ ಭಾಗದಿಂದ ಆಗಮಿಸಿದ ಮುಸ್ಲಿಂ ದಾಳಿಕೋರರು ಕ್ರಮೇಣ ಭಾರತದ ದಕ್ಷಿಣ ಭಾಗದಲ್ಲಿ ದಾಳಿ ನಡೆಸಿ ಕ್ರಿ.ಶ.೧೨೯೬ರಿಂದ ೧೩೩೬ರವರೆಗೆ ಇಲ್ಲಿನ ರಾಜ್ಯಗಳನ್ನೆಲ್ಲಾ ಬಲ ಹೀನಗೊಳಿಸಿದರು. ಈ ಅವಧಿಯಲ್ಲಿ ರಾಜಕೀಯ ಅರಾಜಕತೆ ತಲೆದೋರಿತು. ಇಂತಹ ಸಂದಿಗ್ಧ ಸಮಯದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಉದಯಿಸಿತು. ಹೊಯ್ಸಳರ ಆಡಳಿತದ ಕಾಲದಲ್ಲಿ ಅಧಿಕಾರಿಗಳಾಗಿದ್ದ ಸಂಗಮ ವಂಶದ ಸಂಗಮನ ಮಕ್ಕಳಾದ ಹರಿಹರ, ಬುಕ್ಕರಾಯ ಕ್ರಿ.ಶ.೧೩೩೬ರಲ್ಲಿ ಇಂತಹದ್ದೊಂದು ರಾಜ್ಯ ಸ್ಥಾಪಿಸಿ, ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ಕಾರಣವಾದರು. ಆರಂಭದಲ್ಲಿ ಇವರ ರಾಜಧಾನಿ ಆನೆಗೊಂದಿಯಾಗಿತ್ತು. ಆನಂತರ ಅತ್ಯಲ್ಪ ಕಾಲದಲ್ಲಿಯೇ ಪಂಪಾಪುರಿಯ ಸಮೀಪದಲ್ಲಿ ಈ ಒಂದು ಹೊಸ ಪಟ್ಟಣವನ್ನು ನಿರ್ಮಿಸಿ ಅದಕ್ಕೆ ವಿಜಯನಗರವೆಂದು ಹೆಸರಿಟ್ಟರು. ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ವಂಶಗಳು ಕ್ರಮವಾಗಿ ಆಡಳಿತ ನೆಡಸಿದವು. ಈ ಮನೆತನಗಳಿಗೆ ಸಂಬಂಧಿಸಿದ ಶಾಸನಗಳು ಹುಲಿಗಿ ಪರಿಸರದಲ್ಲಿ ದೊರೆತಿವೆ **(ಸಿದ್ಧಲಿಂಗಪ್ಪ ಕೊಟ್ನೆಕಲ್, ೨೦೧೦, ಪು:೫೩).**

ಕ್ರಿ.ಶ.೧೫೧೪ರ ಕಿಡದಾಳು ಶಾಸನ, ೧೫೧೩ರ ಬಂಡಿಹರ್ಲಾಪುರ ಶಾಸನ, ೧೫೧೫ರ ಹತ್ತೋಟಿ ಶಾಸನ, ೧೫೧೩ರ ಹೊಸೂರು ಶಾಸನಗಳೆಲ್ಲವನ್ನು ಗಮನಿಸಿದಲ್ಲಿ ಈ ಎಲ್ಲಾ ಗ್ರಾಮಗಳು ಶ್ರೀಕೃಷ್ಣದೇವರಾಯನ ಆಡಳಿತಕ್ಕೆ ಒಳಪಟ್ಟಿದ್ದವು (ಡಿ.ವಿ.ಪರಮಶಿವಮೂರ್ತಿ, ೨೦೧೦, ಪು:೩೪,೬೯).

ಹುಲಿಗಿಯ ಸೋಮೇಶ್ವರ ದೇವಾಲಯದ ನಿರ್ಮಾಪಕ ಸೋಮನಾಥನ ವಂಶಾವಳಿ

ಕಾಮಕಾಯನ ಗೋತ್ರದ ನಾರಾಯಣ ಭಟ್ಟೋಪಾಧ್ಯಾಯ
- ಚೌವೇದಿಭಟ್ಟ, ಹೆಂ.ಆಚಿಕಬ್ಬೆ
  - ನಾರಣ
  - ದ್ರೋಣಭಟ್ಟ
  - ಸೋಮನಾಥ
    - ಹೆಂ.ಮಂಚಿಕಬ್ಬೆ
  - ಮಾರಯ್ಯ
    - ಭಟ್ಟ
  - ರುದ್ರಾದಿತ

(ಕ.ವಿ.ಶಾ.ಸಂ-೨, ಕೊಪ್ಪಳಜಿಲ್ಲೆ)

ಹೈದರಾಬಾದ್ ನಿಜಾಮರ ಆಡಳಿತ

ಕ್ರಿ.ಶ.೧೭೯ರಲ್ಲಿ ಹೈದರಾಬಾದ್ ನಿಜಾಮರ ಆಳ್ವಿಕೆ ಪ್ರಾರಂಭವಾಯಿತು. ಪ್ರಸ್ತುತ ಹುಲಿಗಿಯಲ್ಲಿ ಇವರ ಕಾಲದ ಸ್ಮಾರಕ ಸ್ಥಾಪನೆಯಾಗಿತ್ತು. ಇದನ್ನು ಸ್ಥಳೀಯವಾಗಿ "ಗೋಲ್‌ಬಂಗಲೆ" ಎಂದು ಕರೆಯುತ್ತಾರೆ. ಈ ಸ್ಮಾರಕ ಎರಡು ಅಂತಸ್ತಿನಲ್ಲಿದೆ. ಮೇಲುಗಡೆ ನಿಜಾಮರ ಅಧಿಕಾರಿಗಳು ಇರುತ್ತಿದ್ದರು. ಕೆಳ ಅಂತಸ್ತಿನಲ್ಲಿ ಕೈದಿಗಳನ್ನು (ತಪ್ಪಿತಸ್ಥರು, ಅಥವಾ ಶಿಕ್ಷಿತರು) ಸೆರೆ ಹಿಡಿದು ಹಾಕಲಾಗುತ್ತಿತ್ತು ಎಂಬುದು ಸ್ಥಳೀಯರ ಅಭಿಪ್ರಾಯ.

ಸಾಮಾಜಿಕ ವ್ಯವಸ್ಥೆ

ಪ್ರತಿಯೊಂದು ಸಮಾಜವು ತನ್ನದೇ ಆದ ಒಂದು ಸಂಸ್ಕೃತಿಯನ್ನು ಹೊಂದಿರುತ್ತದೆ. ಸಮಾಜ ಜೀವನವು ಒಂದು ವ್ಯವಸ್ಥೆಯ ನೆಲೆಯಲ್ಲಿಯೇ, ಮುಂದುವರೆದಾಗ ಸಮಾಜವು ಮೌಲ್ಯಯುತವಾಗಿರುತ್ತದೆ. ಸಾಮಾಜಿಕ ವ್ಯವಸ್ಥೆಯ ಒಂದು ಚೌಕಟ್ಟು ಇದರ ಪ್ರಧಾನ ನೆಲೆ ಏಕೆಂದರೆ ಸಾಮಾಜಿಕ ಸಂಬಂಧಗಳು ಮಾನವನ ಒಟ್ಟಾರೆ ಜೀವನಕ್ಕೆ ಸಂಬಂಧಿಸಿವೆ. ಆಚಾರ ವಿಚಾರಗಳು ಸುಸಂಸ್ಕೃತ ಜೀವನದ ಸಾಮಾಜೀಕರಣ ಸಮಾಜದಲ್ಲಿಯೇ ಸಾಧ್ಯವಾಗುತ್ತದೆ. ಸಮಾಜವು ಮಾನವರೆಲ್ಲರನ್ನು ಒಟ್ಟೊಗೂಡಿಸಿ ಸಮಾನತೆಯ ಆಧಾರದ ಮೇಲೆ ನಿಲ್ಲಿಸುವ ನಿರಂತರ ಪ್ರಯತ್ನ ಮಾಡುತ್ತದೆ.

ವ್ಯಕ್ತಿಯು ರೂಪಿಸಿ ನಿರ್ಮಿಸಿ ಬೆಳೆಸಿಕೊಂಡಿರುವ ಸಾಮಾಜಿಕ ಬಾಂಧವ್ಯಗಳ ರೂಪಗಳು, ವೈವಿಧ್ಯಗಳು, ರೂಢಿ, ಪರಂಪರೆ ಹಾಗೂ ಆಚಾರ ವಿಚಾರಗಳ ನಡುವಣ ಸಂಬಂಧವನ್ನು ಸಮಾಜ ಹೊಂದಿದೆ. ಶಾಸನಗಳ ಆಧಾರಗಳಿಂದ ಪ್ರಾಚೀನ ಕಾಲದ ಸಾಮಾಜಿಕ ಸ್ಥಿತಿಗತಿಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬಹುದು.

ಸಮಾಜ ವ್ಯವಸ್ಥೆಯನ್ನು ಪ್ರಭುವರ್ಗ ಮತ್ತು ಶ್ರಮಿಕ ವರ್ಗಗಳೆಂದು ಸ್ಥೂಲವಾಗಿ ಎರಡು ಭಾಗಗಳಲ್ಲಿ ವಿಂಗಡಿಸಬಹುದು (ಸಿದ್ಧಲಿಂಗಪ್ಪ ಕೊಟ್ನೆಗಲ್, ಪು:೨೧೪, ೨೦೧೦). ಪ್ರಭುವರ್ಗವು ಪುರೋಹಿತ,

ರಾಜ ಹಾಗೂ ವಿವಿಧ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ಶ್ರಮಿಕ ವರ್ಗವು ವಿವಿಧ ವೃತ್ತಿಗಳನ್ನು ಕೈಗೊಂಡ ಜನ ಸಾಮಾನ್ಯರನ್ನು ಪ್ರತಿನಿಧಿಸುತ್ತದೆ. ಸಾಮಾಜಿಕ ಸ್ತರ ವಿನ್ಯಾಸದಲ್ಲಿ ವಿವಿಧ ಮತಗಳ ಪುರೋಹಿತರಾಗಿದ್ದು ಅವರು ಧರ್ಮ ಮತ್ತು ರಾಜ ಧರ್ಮವನ್ನು ನಿಯಂತ್ರಿಸಿದ್ದಾರೆ. ಅವರಲ್ಲಿ ಮಹಾರಾಜರು, ಸ್ಥಾನಾಚಾರ್ಯರು ಪ್ರಮುಖರಾಗಿದ್ದಾರೆ.

ಮಹಾಜನರು

ಹಿಂದೂ ಸಮಾಜದಲ್ಲಿ ಅಂದಿನ ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಹೆಚ್ಚಿನ ಗೌರವ ಹಾಗೂ ಸಾಮಾಜಿಕ ಸೌಲಭ್ಯಗಳನ್ನು ಅನುಭವಿಸುತ್ತಾ ಇತರ ಜಾತಿಗಳಿಗಿಂತ ಹೆಚ್ಚಿನ ಅಂತಸ್ತಿನವರೆಂದು ಹಾಗೂ ಅಗ್ರಸ್ಥಾನವನ್ನು ಹೊಂದಿದವರೆಂದು ಪರಿಗಣಿಸಲ್ಪಟ್ಟವರೆಂದರೆ ಮಹಾಜನರು, ಆದ್ದರಿಂದ ಇವರ ಅಂತಸ್ತು ಉನ್ನತ ಮಟ್ಟದಲ್ಲಿದ್ದು, ಅತ್ಯಂತ ಪ್ರಭಾವ ಶಾಲಿಗಳಾಗಿದ್ದರು. ಜಾತಿಗಳಲ್ಲೆಲ್ಲಾ ಬ್ರಾಹ್ಮಣ ಜಾತಿಯೇ ಉತ್ತಮವಾದುದು ಎಂಬುದು ಪಂಪನ ಹೇಳಿಕೆ. (ಪಂಪಭಾರತ, ೧೪,೪೮) ಸಾಮಾಜಿಕವಾಗಿ ಮಹಾಜನರು ಅಪರಿಮಿತವಾದ ವಲಯದಲ್ಲಿ ಪ್ರಾಧಾನ್ಯತೆಯನ್ನು ಪಡೆದಿದ್ದರು. ವಿದ್ಯಾಕ್ಷೇತ್ರದಲ್ಲಿ ಮೇಲುಗೈಯನ್ನು ಪಡೆದಿದ್ದರಿಂದ ಸಮಾಜದಲ್ಲಿ ಇವರ ಸ್ಥಾನ ಅಗ್ರಸ್ಥಾನದಲ್ಲಿತ್ತು. ಜಿಲ್ಲೆಯ ಶಾಸನಗಳು ಮಹಾಜನರನ್ನು ಅತ್ಯಂತ ಮೇಧಾವಿಗಳೆಂದು ಹಾಗೂ ಸಕಲಶಾಸ್ತ್ರ ವಿಶಾರದರೆಂದು ದಾಖಲಿಸಿವೆ. ಮಹಾಜನರು ಧಾನವನ್ನು ನೀಡಿದ್ದು ಹಾಗೂ ಸ್ವೀಕರಿಸಿದ್ದರ ಬಗ್ಗೆ ಶಾಸನಗಳು ಮಾಹಿತಿಯನ್ನು ನೀಡಿವೆ.

ಪ್ರಸ್ತುತ ಹುಲಿಗೆ ಶಾಸನವು ೫೨ ಮಹಾಜನರು ಸೇರಿ ೨೦೦ ಕಮ್ಮ ತೋಟ, ನಾಲ್ಕು ಮತ್ತರು ಹೊಲ, ಬಂದು ಹೂವಿನ ತೋಟವನ್ನು ದಾನ ಬಿಟ್ಟಿದಂತೆ ಶಾಸನಗಳು ತಿಳಿಸುತ್ತದೆ. ಕ್ರಿ.ಶ.೧೧೪೩ರ ಕುಕನೂರು ಶಾಸನ, ಮುಧೋಳ ಶಾಸನ (ಕ್ರಿ.ಶ.೧೧೫೪) ಗಳಲ್ಲಿಯೂ ಕೂಡ ಈ ಉಲ್ಲೇಖಗಳಿವೆ (ಕ.ಶಾ.ಸಂ-೨, ಕೊಪ್ಪಳ ಜಿಲ್ಲೆ).

ಸ್ಥಾನಾಚಾರ್ಯರು

ದೇವಾಲಯದ ಅತ್ಯಂತ ಪ್ರಮುಖ ವ್ಯಕ್ತಿಯೇ ಸ್ಥಾನಾಚಾರ್ಯರೆನಿಸಿ ಕೊಂಡಿದ್ದಾನೆ. ಇವರು ಯಾವುದೇ ಒಂದು ಊರಿನ ದೇವಾಲಯದ ಪ್ರಭಾವಶಾಲಿ ವ್ಯಕ್ತಿಯಾಗಿದ್ದವರು. ದೇವಾಲಯದ ಪರಿಚಾರಿಕೆಯನ್ನು ಪಾಲಿಸಿಕೊಂಡು ಬರುವವರಲ್ಲಿ ಹಿರಿಯನಾದವನು ಸ್ಥಾನಿಕನೆಸಿಕೊಂಡಿದ್ದನು. ಸನ್ಯಾಸಿಯಾಗಿ, ದೇವಸ್ಥಾನದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಮಠದಲ್ಲಿ ವಾಸಿಸುತ್ತಾ ಅದರ ಆಡಳಿತದ ಮೇಲ್ವಿಚಾರಕನಾಗಿ, ತಪಸ್ವಿಯಾಗಿ ವಿದ್ಯಾದಾನ ಮಾಡುತ್ತಿದ್ದ ಶೈವ ಸನ್ಯಾಸಿಯನ್ನು ಸ್ಥಾನಿಕ ಎಂದು ಅನೇಕ ಕಡೆಗಳಲ್ಲಿ ಕರೆದಿದೆ. ದೇವಾಲಯಗಳಿಗೆ ದತ್ತಿಗಳನ್ನು ಬಿಡುವ ಸಮಯದಲ್ಲಿ ಇವರ ಒಪ್ಪಿಗೆಯ ಅವಶ್ಯಕತೆಯೂ ಇತ್ತು. ಆದ್ದರಿಂದ ಆ ದೇವಸ್ಥಾನದ ಆಗು ಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು ಸ್ಥಾನಪತಿಗಳು ಅಥವಾ ಸ್ಥಾನಿಕರು ಎನಿಸಿಕೊಳ್ಳುತ್ತಿದ್ದರು.

ಶಾಸನಗಳು ಸ್ಥಾನಾಚಾರ್ಯರನ್ನು ಆಚಾರ್ಯರೆಂದೂ ಕರೆದಿವೆ. ಹಲವರನ್ನು ದೇವಸ್ಥಾನದ ಆಚಾರ್ಯರೆಂದು ಶಾಸನಗಳು ಕರೆದಿವೆ (ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ) (ಶಾ.ಸಂ-೧೩೯, ಪು:೧೩೬). ಕ್ರಿ.ಶ.೧೦೮೮ರ ಹುಲಿಗಿ ಶಾಸನವು ಶಿವದೇವಾಲಯದ ಆಚಾರ್ಯರಿಗೆ ಅಲ್ಲಿಯ ಮಹಾಜನರು ಸೇರಿ ದೇವರ ಪರಿಚಾರಕ ವರ್ಗಕ್ಕೆ ಸಂಬಳವಾಗಿ ಆರು ಗದ್ಯಾಣ ಹಾಗೂ ದೇವರ ನೈವೇದ್ಯಕ್ಕೆ ರಾಜಾನ್ನದ ಅನ್ನ ಒಂದು ಕೊಳಗ, ಒಂದು ಮಾನ ಹೆಸರು, ಒಂದು ಮಾನ ತುಪ್ಪವನ್ನು ಹಾಗೂ ದೇವಾಲಯದ ಜೀರ್ಣೋದ್ಧಾರದ ಕೆಲಸಕ್ಕೂ ದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ.೧೦ನೆಯ ಶತಮಾನದಲ್ಲಿ ಹುಲಿಗಿ ಸಮೀಪದ ಕೊಪ್ಪಳದ ಶಾಸನವು ಜಟಾಸಿಂಗನಂದಿ ಆಚಾರ್ಯನನ್ನು ಉಲ್ಲೇಖಿಸಿದೆ. ಈತನ ಶಿಷ್ಯರಾದ ಚಾವಯ್ಯ ಎಂಬುವನು ಈ ಆಚಾರ್ಯರ ಪಾದವನ್ನು ಶಿಲೆಯಲ್ಲಿ ಕೆತ್ತಿಸಿದಂತೆ ಮಾಹಿತಿ ನೀಡಿದೆ **(HAS XII, No-6, APGAS III RC, 7: IK, III, No-130).**

ಶ್ರಮಿಕ ವರ್ಗದವರು

ಅಕ್ಕಸಾಲಿಗಳು, ಕಂಚುಗಾರರು, ಕಮ್ಮಾರರು, ಕಲ್ಲುಕುಟಿಗ (ಶಿಲ್ಪಿ), ಬಡಗಿ, ಅಂಬಿಗರು, ಸಮಗಾರರು (ಚಪ್ಪಲಿ ಹೊಲಿಯುವವರು), ಬಜಂತ್ರಿ, ನಾಯಿಂದರರು, ಜೇಡರು (ಬಟ್ಟೆಗಳನ್ನು ನೇಯುತ್ತಿದ್ದವರು) ಮಾಲಗಾರರು (ತೋಟಗಳಲ್ಲಿ ಹೂವಿನ ಗಿಡಗಳನ್ನು ಬೆಳೆಸಿ ಆ ಹೂಗಳನ್ನು ಆಯ್ದುಕೊಂಡು ಮಾಲೆಗಳನ್ನು ಮಾಡಿ ಸಂತೆ ಪೇಟೆಗಳಲ್ಲಿ ಮಾರಾಟ ಮಾಡುವವರು ಮಾಲಗಾರರು), ಗಾಣಿಗರು ಮುಂತಾದವರು. ಈ ಎಲ್ಲಾ ವರ್ಗದವರ ಉಲ್ಲೇಖವು ಜಿಲ್ಲೆಯ ಶಾಸನ ಸಂಪುಟಗಳಲ್ಲಿ ಪ್ರಕಟವಾಗಿವೆ. **(EC.WKP 78, 68)** ಕ್ರಿ.ಶ.೧೩ನೇ ಶತಮಾನದಲ್ಲಿ ದೊರೆತ ಆನೆಗೊಂದಿಯ ತಾಮ್ರ ಶಾಸನವು ಕುಂಬಾರ ಕುಲ ಹುಟ್ಟಿನ ಬಗ್ಗೆ ಶಿವ ಪಾರ್ವತಿಯರ ವಿವಾಹದ ಜೊತೆ ಸಮೀಕರಿಸಿದ ಉಲ್ಲೇಖವಿದೆ **(VPR No-1, of 1987-88, IK III No-1).**

ಹಬ್ಬಗಳು

ಜಾತಿ ಪಂಥವನ್ನು ಮರೆತು ಹಬ್ಬ ಹರಿದಿನಗಳನ್ನು ಒಟ್ಟಾಗಿ ಆಚರಿಸುತ್ತಿದ್ದರು. ಆ ವೇಳೆಯಲ್ಲಿ ಅನೇಕ ದಾನದತ್ತಿಗಳನ್ನು ಬಿಡುವ ಪದ್ಧತಿ ರೂಢಿಯಲ್ಲಿತ್ತು. ಎಂ.ಚಿದಾನಂದ ಮೂರ್ತಿಯವರು ಅಂದು ದೇವಾಲಯಗಳಲ್ಲಿ ನಡೆಯುತ್ತಿದ್ದ ಎರಡು ಪೂಜಾ ಉತ್ಸವಗಳಾದ ಚೈತ್ರ ಮತ್ತು ಪವಿತ್ರಗಳನ್ನು ಹೆಸರಿಸುತ್ತಾ ಮಂತ್ರ ಪುಷ್ಪದವನಾರೋಪಣ ಫಲಪೂಜೆ ಕಾರ್ತಿಕ ಕೃತ್ತಿಕಾ, ದೀಪಪೂಜೆ ವಸಂತೋತ್ಸವಗಳನ್ನು ಸೇರಿಸಿಕೊಂಡರೆ ಐದು ಹಬ್ಬಗಳಾಗುತ್ತವೆ ಎಂದಿದ್ದಾರೆ **(EC.IX.No-1-60).**

ಪಾಲ್ಗುಣ, ವೈಶಾಖ, ಸಂಕ್ರಮಣ, ಶ್ರಾವಣ, ಆಶ್ವಿಜ, ಪಂಚಮಿ, ಕಾರ್ತಿಕ ಮಾಸ, ದ್ವಿತೀಯ ಶ್ರಾವಣ ಮಾರ್ಗಶಿರ, ಅಮವಾಸ್ಯೆ, ಸೂರ್ಯಗ್ರಹಣ, ದೀಪಾವಳಿ, ಯುಗಾದಿ, ಮಕರ ಸಂಕ್ರಾಂತಿ, ಫಾಲ್ಗುಣ ಮಾಸ, ನಿತ್ಯ, ಪಕ್ಷ, ಮಾಸ, ಮುಂತಾದವುಗಳು. ಇವುಗಳ ಕುರಿತು ಹುಲಿಗಿ ಪರಿಸರದ ಎರಡು ಶಾಸನಗಳಲ್ಲಿ ಉಲ್ಲೇಖಗಳಿವೆ. ಕ್ರಿ.ಶ.೧೫೧೩ರ ಬಂಡಿಹರ್ಲಾಪುರ ಶಾಸನವು ಕೃಷ್ಣದೇವರಾಯ ಮಹಾರಾಯನು ಶ್ರೀ ವಿಠಲ ದೇವರ ಅಮೃತಪಡಿ, ನೈವೇದ್ಯ, ಅಂಗರಂಗ ವೈಭೋಗ, ಫಾಲ್ಗುಣ ಮಾಸ, ನಿತ್ಯ, ಪಕ್ಷ, ಮಾಸ ಮತ್ತು ಸಂವತ್ಸರ ಉತ್ಸವಗಳಿಗೆ ನಿತ್ಯ ನೈಮಿತ್ತಕ ದೀಪಾರಾಧನೆ ಮುಂತಾದ ಪುಣ್ಯ ತಿಥಿಗಳಲ್ಲಿ ಮಾಡುವ

ಮಹಾಪೂಜೆ, ಮಹಾನೈವೇದ್ಯಕ್ಕೆಂದು ಹುಲಿಗಿಯ ಮಾಗಣೆಗೆ ಸಲ್ಲುವ ಹರಿಹರ ಪುರವನ್ನು ಸಮರ್ಪಿಸುತ್ತಾನೆ (ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಪುಟ:೧೫೪). ಕ್ರಿ.ಶ.೧೫೧೫ರ ಹತೋಟಿ ಶಾಸನವು ಕೃಷ್ಣದೇವರಾಯನು ಬಾಲಕೃಷ್ಣ ದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ ಅಂಗರಂಗ ಭೋಗ, ಚೈತ್ರ ಮಾಸದ ರಥೋತ್ಸವ, ನಿತ್ಯ, ನೈಮಿತ್ಯಕ, ದೀಪೋತ್ಸವ, ಪುಣ್ಯ ದಿನಗಳು, ದಿನ, ಪಕ್ಷ, ಮಾಸಗಳಲ್ಲಿ ನಡೆಯುವ ಉತ್ಸವಗಳ ವೆಚ್ಚಕ್ಕಾಗಿ ಹುಲಿಗಿಯ ಮಾಗಣೆಯಲ್ಲಿನ ಅತ್ತಿಮಟ್ಟಿ ಎನ್ನುವ ಗ್ರಾಮವನ್ನು ಸಮರ್ಪಿಸಿದ್ದನ್ನು ಉಲ್ಲೇಖಿಸಲಾಗಿದೆ (ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಪು:೧೫೫).

ಕಲ್ಯಾಣ ಚಾಲುಕ್ಯ ಅರಸರು ವಿಜಯನಗರದ ಅರಸರು, ಈ ಪರಿಸರದ ಅನೇಕ ಮಠ, ದೇವಸ್ಥಾನಕ್ಕೆ ದಾನ ನೀಡಿದ್ದಾರೆ ಎನ್ನುವುದನ್ನು ಈ ಪರಿಸರದಲ್ಲಿ ಸಿಗುವ ಶಾಸನಗಳಿಂದ ತಿಳಿಯಬಹುದು. ಪ್ರಸ್ತುತ ಕಿಡಿದಾಳು ಕ್ರಿ.ಶ.೧೫೧೪ರ ಶಾಸನದಲ್ಲಿ ಕೃಷ್ಣದೇವರಾಯನು ಹೊಸೂರು ಮಹಾಮಾಯಿಗೆ ಅಮೃತಪಡಿ ನೈವೇದ್ಯಕ್ಕೆಂದು ಅಂಗ, ವಂಗ, ಕಳಿಂಗ, ಗುರ್ಜ್ಜರ, ಮಗದ, ಲಾಟ, ಕರ್ನಾಟ, ಗೌಳ, ಮಾಳವ, ರೇವಣ, ಕೊಂಕಣ, ಬಡಗಣ, ಮೂಡಲ, ಪಾಂಚಾಳ, ಕೇರಳ, ಸಿಂಹಳ ಈ ದೇಶಗಳಲ್ಲದೇ ಗಿರಿದುರ್ಗ, ವನದುರ್ಗ, ಜಲದುರ್ಗಗಳನ್ನು ಹಾಗೂ ಪಡವ ನಾಡೊಳಗಣ ಕೊಪಣ ವೇಠೆಯಕೆ ಸೇರಿದ ಕಿಡಿದಾಳು ಗ್ರಾಮವನ್ನು ದಾನ ನೀಡಿದ ಮಾಹಿತಿ ಇದೆ (ಡಿ.ವಿ.ಪರಮಶಿವ ಮೂರ್ತಿ, ೨೦೧೦, ಪು:೬೯). ಹುಲಿಗಿಯ ಹತ್ತಿರದಲ್ಲಿರುವ ಶಿವಪುರದಲ್ಲಿ ದೊರೆತಶಾಸನ ಸೋಮೇಶ್ವರ ದೇವನ ದೀಪಾರಾಧನೆಗೆ ದವಸ, ಹಸುರುವಾಣಿ ಮುಂತಾದ ಹೇರುಗಳಿಗೆ ೧೦ ಹೇರಿಗೆ ೫ ಕಾಸಿನ ಲೆಕ್ಕದಲ್ಲಿ ಮಹಾನಾಡ ಸೆಟ್ಟಿ, ಪಟ್ಟಣ ಸ್ವಾಮಿಗಳು ದಾನ ನೀಡಿದ್ದನ್ನು ತಿಳಿಸುತ್ತದೆ (ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಪು:೧೫೦, ಶಾ.ಸಂ.೧೫೪).

ಕ್ರಿ.ಶ.೧೫೧೩ರ ಬಂಡಿ ಹರ್ಲಾಪುರ ಶಾಸನವೊಂದರಲ್ಲಿ ಶ್ರೀ ವಿಠಲ ದೇವರ ಅಮೃತಪಡಿ, ನೈವೇದ್ಯ, ಅಂಗರಂಗ, ವೈಭೋಗ, ಫಾಲ್ಗುಣಮಾಸ, ವೈಶಾಖದ ರಥೋತ್ಸವ ನಿತ್ಯ, ಪಕ್ಷ, ಮಾಸ ಮತ್ತು ಸಂವತ್ಸರದ ಉತ್ಸವಗಳಿಗೆ ಹುಲಿಗೆಯ ಮಾಗಾಣೆಗೆಯಲ್ಲಿನ ಹರಿಹರ ಪುರವನ್ನು ದಾನವಾಗಿ ಕೃಷ್ಣರಾಯ ಸಮರ್ಪಿಸುತ್ತಾನೆ (ಕ.ಶಾ.ಸಂ-೨, ಕೊಪ್ಪಳಜಿಲ್ಲೆ, ಪು:೧೫೪, ಶಾ.ಸಂ.೧೬೦).

ಸಮಾಜದಲ್ಲಿ ಸಂಪ್ರದಾಯ, ನಂಬಿಕೆಗಳು ಗಾಢವಾಗಿ ಬೇರೂರಿದ್ದವು. ಅಂದಿನ ಜನರು ವಿವಿಧ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಇದರಿಂದಾಗಿಯೇ ಸಾಮಾಜಿಕವಾಗಿ ಅನೇಕ ಕ್ರಾಂತಿಕಾರಿ ಬದಲಾವಣೆಗಳಾಗುತ್ತಾ ಬಂದಿವೆ. ಇದಕ್ಕೆ ಧರ್ಮವೂ ಕೂಡ ಪ್ರೇರಣೆ ನೀಡಿದೆ. ದೇವಾಲಯ, ಮಠ, ಕೆರೆಬಾವಿ, ಛತ್ರಗಳನ್ನು ನಿರ್ಮಿಸಿ ಅವುಗಳಿಗೆ ದಾನ ದತ್ತಿಗಳನ್ನು ಬಿಡುವ ಮೂಲಕ ತಮ್ಮ ಔದಾರ್ಯವನ್ನು ಮೆರೆದಿದ್ದಾರೆ. ಜೊತೆಗೆ ದೇವರ ಸೇವೆಯನ್ನು ಮಾಡಲು ಕೆಲವೊಂದು ಹೆಣ್ಣು ಮಕ್ಕಳನ್ನು ಮೀಸಲಾಗಿರಿಸುತ್ತಿದ್ದರು. ಇವರನ್ನು ದೇವದಾಸಿಯರು ಎಂದು ಕರೆಯಲಾಗುತ್ತಿತ್ತು. ದೇವದಾಸಿಯರು ಎಂದರೆ ಭಗವಂತನ ದಾಸಿಯರು, ದೇವರ ಸೇವೆಗೆ ಮೀಸಲಾದವರು ಎಂದರ್ಥ. ದೇವಸ್ಥಾನಗಳಲ್ಲಿ ಗೀತನೃತ್ಯಗಳ ಮೂಲಕ ಭಗವಂತನ ಸೇವೆಯನ್ನು ಮಾಡಿಕೊಂಡು ಬದುಕುತ್ತಿದ್ದವರು. ಇದು ಭಾರತಕ್ಕೆ ಮಾತ್ರ ವಿಶಿಷ್ಟವಾದ ಸಂಪ್ರದಾಯವಲ್ಲ.

ಪ್ರಾಚೀನ ಈಜಿಪ್ಟ್, ಸಿರಿಯಾ, ಅರೇಬಿಯಾ ಮುಂತಾದ ಮಧ್ಯಪ್ರಾಚ್ಯ ದೇಶಗಳಲ್ಲಿಯೂ ಈ ಸಂಪ್ರದಾಯವಿತ್ತಲ್ಲದೆ, ದೇವ ದಾಸಿಯರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಪುಣ್ಯಕಾರಿ ಎಂದು ಅಲ್ಲಿನ ಜನ ನಂಬಿದ್ದರು (ESS.XII, P-533).

ದ್ರಾವಿಡರಲ್ಲಿ ಕೇವಲ ಗುಡಿಯ ಕಸಗುಡಿಸಿ, ದೀಪ ಹಚ್ಚಿ, ಪೂಜೆ ಮಾಡುವವಳಿಗೆ ದೇವದಾಸಿ ಎಂದು ಕರೆಯುತ್ತಿದ್ದರು. ಆರ್ಯರು ಭಾರತಕ್ಕೆ ಬಂದ ಮೇಲೆ ಆಕೆ ಸಂಗೀತ, ನೃತ್ಯಗಳಲ್ಲಿ ಪ್ರವೀಣೆಯಾಗಿ ದೊಡ್ಡ ದೇವಾಲಯಗಳಲ್ಲಿ ಅಂಗಭೋಗ, ರಂಗಭೋಗ ನೀಡುವವಳಾಗಿ, ಸಾಹಿತ್ಯ, ಸಂಗೀತ, ನೃತ್ಯಗಳ ಸಾಂಸ್ಕೃತಿಕ ಪ್ರತಿನಿಧಿಯಾದಳು. ಆದರೆ ಈಗಾಗಲೇ ಹೆಣ್ಣು ಪೂಜಾರಿಣಿಯ ಬದಲಿಗೆ ಗಂಡು ಪೂಜಾರಿಗಳು ತಮ್ಮ ಸ್ವಾರ್ಥ ಸುಖಕ್ಕಾಗಿ, ಭೋಗ ಲಾಲಸೆಗಾಗಿ ತಾವು ಸುಖ ಪಡುವುದರ ಜೊತೆಗೆ ರಾಜ ಮಹಾರಾಜರು, ಸಾಮಂತ ಸರದಾರರು, ಶ್ರೀಮಂತರು ದೇವರ ಪ್ರತಿನಿಧಿಗಳೆಂದು ಹೇಳಿ ಅವರನ್ನು ಸೂಳೆಯರನ್ನಾಗಿ ಮಾಡುವುದರ ಮೂಲಕ ಈ ಪದ್ಧತಿಗೆ ಇದ್ದ ಗೌರವ ಹಾಗೂ ಪಾವಿತ್ರ್ಯ ಭಾವನೆಯನ್ನು ಕಳಚಿ ಹಾಕಿದರು. ಈ ಪದದ ಅರ್ಥ ವ್ಯಾಪ್ತಿಯನ್ನು ಕುಂಠಿತಗೊಳಿಸಿದರು (ಕೊತ್ಲಮ್ಮ, ೨೦೦೭, ಪುಟ:೧೩).

'ದೇವದಾಸಿ' ಪದ ಸಂಸ್ಕೃತದ್ದು, ಹಾಗೆ 'ಜೋಗತಿ' ಸಂಸ್ಕೃತದ ಸಹಯೋಗದಿಂದ ಜೋಗವಾಗಿ ಅದುವೇ 'ಜೋಗತಿ'ಯಾಗಿದೆ. ಕೊಪ್ಪಳ ಜಿಲ್ಲೆಯ ವಿಪ್ರ (ಕ್ರಿ.ಶ.೧೦೫೯) ಶಾಸನದಲ್ಲಿ "ವೇಶ್ಯವಾಟ" ಎಂಬ ಶಬ್ದದ ಉಲ್ಲೇಖ ಮಾತ್ರ ಬಂದಿದ್ದು, ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ (IK:III No-79). ಹುಲಿಗಿಯಲ್ಲಿರುವ ಶ್ರೀ ಹುಲಿಗೆಮ್ಮ ದೇವಿಯ ಹೆಸರಿನಲ್ಲಿ ಹಲವಾರು ಹೆಂಗಸರು ದೇವದಾಸಿಗಳಾಗಿದ್ದಾರೆ. ಈ ಗ್ರಾಮದಲ್ಲಿ ಮೊದಲು ಗಂಗಾಮತಸ್ಥರ ಜಾತಿಯಲ್ಲಿ ಮಾತ್ರ ದೇವದಾಸಿ ಬಿಡುವ ಪದ್ಧತಿಯಿತ್ತು. ಅವರು ವಂಶ ಪಾರಂಪರ್ಯವಾಗಿ ಮುಂದುವರೆಯಬೇಕಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಸಂಪ್ರದಾಯ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ.

ಹುಲಿಗೆಮ್ಮನ ಭಕ್ತರಲ್ಲಿ ದೀಕ್ಷೆ ತೆಗೆದುಕೊಂಡವರು ಜೋಗತಿ-ಜೋಗಪ್ಪ ಆಗುತ್ತಾರೆ. ಇವರಲ್ಲಿ ಹೆಚ್ಚಿನವರು ಸಮಾಜದ ಕೆಳವರ್ಗದಿಂದ ಬಂದವರೇ ಆಗಿದ್ದಾರೆ. ಇಲ್ಲಿ ಹೆಣ್ಣು ಮಕ್ಕಳಿಗೆ ಮುತ್ತುಕಟ್ಟಿ, ಹುಲಿಗೆಮ್ಮ ದೇವರ ಹೆಂಡತಿಯಾಗಿ ಮಾಡುವ ಕುತೂಹಲಕರ ಅಂಶವಿದೆ. ಇವರಲ್ಲಿ ಉಚ್ಚ ಜಾತಿಯ ಹೆಂಗಸರು 'ಗರತಿ ಮುತ್ತು' (ಬಿಳಿ ಮುತ್ತು) ಕಟ್ಟುತ್ತಾರೆ. ಇವರು ಹಬ್ಬ-ಹುಣ್ಣಿಮೆಗಳಲ್ಲಿ ದೇವರ ಸೇವೆ ಮಾಡಿ, ತೃಪ್ತರಾಗುತ್ತಾರೆ. ಆದರೆ ಅದೇ ಕೆಳ ಜಾತಿಯ ಹೆಂಗಸರು 'ದೇವದಾಸಿ' ಆಗುತ್ತಾರೆ. ಕೆಲವರು ಮುಂದೆ ವೇಶ್ಯಾ ಜೀವನಕ್ಕೆ ಇಳಿಯುತ್ತಾರೆ. ದೇವರಿಗೆ ಬಿಟ್ಟ ಈ ಹೆಣ್ಣು ಮಕ್ಕಳಿಗೆ ಮುಂದೆ ಲೌಕಿಕದ ಯಾವುದೇ ಗಂಡಿನೊಂದಿಗೆ ವಿವಾಹ ಇರುವುದಿಲ್ಲ (ಪುರುಷೋತ್ತಮ ಬಿಳಿಮಲೆ, ೧೯೯೯, ಪು:೨೭).

ಮನೆಯಲ್ಲಿ ಆಶ್ರಯ ಇಲ್ಲದವರು, ವಯಸ್ಸಾದ ಮುದುಕಿಯರು ಈ ಕ್ಷೇತ್ರಕ್ಕೆ ಬಂದು ಹಣೆಗೆ ಕುಂಕುಮ, ಭಂಡಾರ, ಹಚ್ಚಿಕೊಂಡು ಕೊರಳಲ್ಲಿ ಕವಡೆಯ ಹಾರಗಳನ್ನು ಹಾಕಿಕೊಂಡು ದೇವಸ್ಥಾನದ ಮುಂದೆ ಕುಳಿತು ಭಿಕ್ಷೆ ಬೇಡುತ್ತಾ, ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾರೆ. ನಿರಾಶ್ರಿತರಿಗೆ ಆಶ್ರಯತಾಣವಾಗಿದೆ ಶ್ರೀ ಕ್ಷೇತ್ರ ಹುಲಿಗಿ.

ಆರ್ಥಿಕ ವ್ಯವಸ್ಥೆ

ಪ್ರಾಚೀನ ಇತಿಹಾಸದ ಕಾಲದಿಂದಲೂ ಆರ್ಥಿಕ ವ್ಯವಸ್ಥೆ ಎಂಬುದು ಇತಿಹಾಸದ ಒಂದು ಭಾಗ. ಇದು ರಾಜರ ಆಳ್ವಿಕೆಯ ಕಾಲದಿಂದ ಹಿಡಿದು ಒಂದು ವ್ಯವಸ್ಥೆಯಾಗಿ ಆರ್ಥಿಕ ಅಭಿವೃದ್ಧಿಗೆ ಪ್ರೇರಣೆ ಶಕ್ತಿಯಾಗಿ ನಿಂತಿದೆ. ಅಂದಿನ ಕಾಲದಲ್ಲಿ ಸಮಾಜದ ಒಂದು ಪ್ರಮುಖ ಅಂಗ ಎಂದರೆ ಕೃಷಿ ಆದ್ದರಿಂದಲೇ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳು ಆರ್ಥಿಕ ವ್ಯವಸ್ಥೆಯಿಂದ ತಿಳಿಯಬಹುದು.

ಭೌಗೋಳಿಕ ಹಿನ್ನಲೆಯಲ್ಲಿ, ಬೆಟ್ಟ, ಖನಿಜ, ಕಾಡು ಮತ್ತು ವಿವಿಧ ಮಣ್ಣಿನ ಸ್ವರೂಪಗಳನ್ನೊಳಗೊಂಡ ಭೂಮಿಯನ್ನು ಕುರಿತು ಉಲ್ಲೇಖಿಸಲಾಗಿದೆ. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಎರೆಹೊಲ, ಕರಿನೆಲ ಮತ್ತು ಕೆಂಪುನೆಲ ಎಂಬ ಮೂರು ಪ್ರಕಾರದ ಭೂಮಿಯ ವಿಧಗಳನ್ನು ಉಲ್ಲೇಖಿಸಲಾಗಿದೆ (ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-III, (ಸಂ) ಸೂರ್ಯನಾಥ ಯು.ಕಾಮತ್).

ಭೂಮಿ ಊಳುವ ರೈತಾಪಿ ವರ್ಗವನ್ನು ಒಕ್ಕಲು ಮಕ್ಕಳೆಂದು ಹೆಸರಿಸಿದ್ದು, ಅವರನ್ನು ಧನದ ಧಾನ್ಯದ ಸೊಮ್ಮಿನ ಸೊಕ್ಕಿನಿಂದ ಮಾರ್ಗ್ಗಳ ದೊರೆ ಸಮ್ಮಾಳೆಂಬ ಕುಡಿಯಾಕ್ಕಲ ಮಕ್ಕಿನೊರ್ಗ್ಗಳೊಪ್ಪುಗಂ ಎಂದು ವರ್ಣಿಸಲಾಗಿದೆ (ಸಾ.ಇ.ಇ.IX-i, ೧೧೭೭, ಪುಟ:೨೯೭).

ಕೃಷಿಕಾರರನ್ನು ಶಾಸನಗಳು ಒಕ್ಕಳು ಮಕ್ಕಳೆಂದು ಕರೆದಿವೆ. ಒಕ್ಕಲಿಗ ಒಕ್ಕಿದರೆ ಬಿಕ್ಕುವುದು ಜಗವೆಲ್ಲಾ ಎಂಬ ಮಾತಿನಂತೆ ಒಕ್ಕಲಿಗ ಜನರ ಆಶ್ರಯದಾತನಾಗಿದ್ದಾನೆ. (BKI.I.ii.138, 156) ಶಾಸನಗಳಲ್ಲಿ ವ್ಯವಸಾಯದ ವಿಧಿ ವಿಧಾನಗಳನ್ನು ಕುರಿತಂತೆ ಬೆಪ್ಪಿಲೆ ಬೆದ್ದತಿ ಮತ್ತು ಗಜ್ಜಿ ಗದ್ದೆಗಳೆಂದು ಹೇಳಲಾಗಿದೆ. ನೀರು ನಿಲ್ಲುವಂತೆ ಕಟ್ಟೆಯನ್ನು ಕಟ್ಟಿ ಮಳೆಯ ನೀರನ್ನು ಸಂಗ್ರಹಿಸಿ ಭತ್ತವನ್ನು ಬೆಳೆಯುವ ತಾತ್ಕಾಲಿಕ ಗದ್ದೆಗಳು, ಕಟ್ಟೆ ಇದ್ದರೆ ಅವು ಗದ್ದೆಗಳು, ಕಟ್ಟೆ ಹೊಡೆದರೆ ಬೆದದ್ದಲು ಭೂಮಿಗಳು ಎಂಬ ಉಲ್ಲೇಖಗಳಿವೆ.

ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆ, ಬಾವಿ, ನದಿ, ಹಳ್ಳಿಗಳಿಂದ ನೀರು ಸಂಗ್ರಹಿಸುತ್ತಿದ್ದರು. ಕೆರೆ ಮತ್ತು ನಾಲೆಗಳನ್ನು ನಿರ್ಮಿಸಿದ್ದರು. ಚೌವೇದಿಭಟ್ಟನು ತುಂಗಭದ್ರಾ ನದಿಯಿಂದ ಸೀಳು ನಾಲೆಯೊಂದನ್ನು ನಿರ್ಮಿಸಿದ್ದನ್ನು ಹುಲಿಗಿ ಶಾಸನದಲ್ಲಿ ಹೇಳಲಾಗಿದೆ (ಕ.ಶಾ.ಸಂ-೨, ಕೊಪ್ಪಳ ಜಿಲ್ಲೆ). ತುಂಗಭದ್ರೆಯನ್ನು 'ಕಿಱು ದೊರೆ' ಎಂದು ಕರೆಯಲಾಗಿದೆ (EI.VI.P, 259 : EI.Xii, P-274). ಮತ್ತರು, ಖಂಡಗ, ಕೊಳ, ಗದ್ಯಾಣ ಕುಂಭ, ವೊಕ್ಕಳ, ವರಹ, ಎಕರೆ, ಹೇರಿಗೆ, ಹಿರೇಕೋಲು, ಕಾಸು, ಕಮ್ಮ, ಪಣ, ಮಾನ, ಕೈಯಗಲ ಎನ್ನುವ ಅಳತೆ ಮತ್ತು ತೂಕ ಮಾಪನಗಳು ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡಿವೆ.

'ಮಾಗಾಣಿ' ಎಂಬ ಪದ ಹುಲಿಗಿ ಪರಿಸರದಲ್ಲಿ ಬಳಕೆಯಾಗಿರುವುದನ್ನು ನೋಡಬಹುದು. 'ಮಾಗಾಣಿ' ಎಂದರೆ ಆಡಳಿತ ವಿಭಾಗ ಹೊಸೂರು 'ಮಾಗಾಣಿ', ಹುಲಿಗಿ 'ಮಾಗಾಣಿ' ಎಂದೂ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. 'ಮಾಗಾಣಿ' ಎಂಬ ಪದ ವಿಜಯನಗರಕ್ಕೆ ಸಂಬಂಧಿಸಲಾಗಿದೆ (ಕೆ.ಜಿ.ಭಟ್‌ಸೂರಿ, ಸಂಪುಟ-೯, ಪು:೩೧೭). ಹುಲಿಗಿ ಪರಿಸರ ವಿಜಯನಗರ ಕಾಲಕ್ಕೆ ಸಂಬಂಧಿಸಿತ್ತು ಎಂದು ತಿಳಿಯುವುದು. ಹುಲಿಗಿ

ಶಾಸನದಲ್ಲಿ ಗದ್ಯಾಣ, ಕೊಳಗ, ಪಣ, ಕಮ್ಮ, ಮಾನ ಎಂಬ ಅಳತೆ ಮಾಪನಗಳ ಉಲ್ಲೇಖಗಳಿವೆ. ಶಿವಪುರದ ಶಾಸನದಲ್ಲಿ ಕಾಸು, ಹೇರಿಗೆ, ಆನೆಗೊಂದಿ ಶಾಸನದಲ್ಲಿ ಖಂಡಗ,ಅಚಲಾಪುರ ಶಾಸನದಲ್ಲಿ ವರಹದ ಉಲ್ಲೇಖಗಳು ಬರುತ್ತವೆ (ಕ.ಶಾ.ಸಂ-೨, ಕೊಪ್ಪಳ ಜಿಲ್ಲೆ).

ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟಗಳೆಂದು, ಅಚ್ಚಿನ ಟಂಕ ಸಾಲೆಗಳೆಂದೂ ಕರೆಯುತ್ತಿದ್ದರು. ಹಾಗೆಯೇ ಚಲಾವಣೆಯಲ್ಲಿದ್ದ ನಾಣ್ಯವನ್ನು ಗದ್ಯಾಣ ವೆಂದು ಗುರುತಿಸಿ ಅದಕ್ಕೆ ಇನ್ನೊಂದು ಹೆಸರು ಪೊನ್ ಎಂಬುದಾಗಿಯೂ ಕರೆಯುತ್ತಿದ್ದರು. ಇದರ ತೂಕ ೯೬ ಎಂದು ಅಲ್ಟೇಕರರೂ ಸುಮಾರು ೬೩ ಗ್ರೇನು ಎಂದು ಅಪ್ಪಾದೊರೈ ಅವರು ಅಭಿಪ್ರಾಯ ಪಟ್ಟಿದ್ದಾರೆ **(Economic conditions in South India. P-710).**

೧ ಕಾಣಿ=೪ ಗದ್ಯಾಣ, ಪೊನ್-ಅರ್ಧ ಗದ್ಯಾಣ ನಾಣ್ಯಗಳಲ್ಲಿ ಅಧಿಕ ಬೆಲೆಯುಳ್ಳದ್ದು ಗದ್ಯಾಣ ಎಂಬುದು ಸ್ಪಷ್ಟ. ೧೨ನೇ ಶತಮಾನದಲ್ಲಿ ಶಿವಶರಣರ ವಚನಗಳಲ್ಲಿ ಅರ್ಧಕಾಣಿಯ ಉಲ್ಲೇಖ ಕಂಡುಬರುತ್ತದೆ.

ಕುಶಲ ಕರ್ಮಿಗಳಲ್ಲಿ ಬಡಗಿ, ಕಮ್ಮಾರ, ಶಿಲ್ಪಿ, ಕಂಚುಗಾರ, ಅಕ್ಕಸಾಲಿ, ತೆಲ್ಲಿಗ, ನೇಕಾರ, ಚಮ್ಮಾರ ವಿವಿಧ ವರ್ಗಗಳು ಉತ್ಪಾದನೆಯಲ್ಲಿ ತೊಡಗಿಕೊಂಡಿದ್ದವು. ಉತ್ಪಾದನಾ ವಸ್ತುಗಳನ್ನು ವ್ಯಾಪಾರ ವೃತ್ತಿಯಾಗಿಸಿಕೊಂಡವರನ್ನು ಸೆಟ್ಟಿಗಳೆಂದು (ಬಣಂಜಿಗ) ಕರೆಯಲಾಗಿದೆ. ಇವರನ್ನು ಬಿರುದ ಬಣಂಜಿಗ, ವೀರಬಣಂಜಿಗ, ಸ್ಥಳದ ಹಣ್ಣವಣಿಗ, ತಳರದಯ್ಯೂವರು, ವಣಿಜಸ್ವಾಮಿ, ಮಾಹೇಶ್ವರ ವರ್ತಕ, ವಿಭೂತಿ ಕುಲಜಾತಿ ಎಂದು ಶಾಸನಗಳು ಗುರುತಿಸವೆ (ಚನ್ನಬಸವ ಹಿರೇಮಠ, ಪು-೨೧೯). ಇಂತಹ ಬಣಜಿಗರು ಸ್ವಂತ ಗ್ರಾಮದಲ್ಲಿ ವ್ಯಾಪಾರ ಮಾಡುವುದಲ್ಲದೆ ಅನ್ಯಗ್ರಾಮಗಳಲ್ಲಿ ವ್ಯಾಪಾರ ಮಾಡುವುದಲ್ಲದೆ ಅನ್ಯಗ್ರಾಮಗಳಲ್ಲಿ ವ್ಯಾಪಾರಕ್ಕಾಗಿ ವಸ್ತುಗಳನ್ನು ಸಾಗಿಸಲು ಎತ್ತು, ಕುದುರೆ, ಕತ್ತೆ, ಮುಂತಾದವುಗಳನ್ನು ಬಳಸುತ್ತಿದ್ದರು. ಈ ವರ್ತಕರು ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಂಡಿದ್ದರು. ಇದರಲ್ಲಿ ಅಯ್ಯವಳೆಯನ್ನೂರ್ವರ ಸಂಘ ಪ್ರಮುಖವಾದದ್ದು. ವೀರಬಣಂಜು ಧರ್ಮಕ್ಕೆಸೇರಿದ ಮಲೆಯ ಸಿಂಗಿಸೆಟ್ಟಿ, ರೇವಣಸೆಟ್ಟಿ, ಮುಂಗಲರ ಕಲೆಯ ಬಾಚಿಸೆಟ್ಟಿ ಇತ್ಯಾದಿಗಳ ಉಲ್ಲೇಖ ಶಾಸನಗಳಲ್ಲಿವೆ (ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಶಾ.ಸಂ.೨೨, ಪು:೩೦೩).

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ತೆರಿಗೆಯ ಬಗೆಗೆ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ಭೂಮಿ ಹಾಗೂ ಇನ್ನಿತರ ವ್ಯಾಪಾರ, ವಸ್ತುಗಳ ಮೇಲೆ ಯಾವ ರೀತಿ ತೆರಿಗೆ ವಿಧಿಸಲಾಗುತ್ತಿತ್ತು ಎನ್ನುವುದನ್ನು ಶಾಸನಗಳ ಆಧಾರದಿಂದ ತಿಳಿದುಕೊಳಬಹುದು. ಭೂ ಕಂದಾಯ ಪದ್ಧತಿ ಪರಂಪರಾನುಗತವಾಗಿ ನಡೆದು ಬಂದರೂ ಸಾಗವಳಿ, ಭೂಮಿಯ ಫಲವತ್ತತೆ ಮತ್ತು ಅಳತೆಯ ಪ್ರಮಾಣಕ್ಕನುಗುಣವಾಗಿ ನಿರ್ಧರಿತವಾಗುತ್ತಿತ್ತು. ತೆರಿಗೆ ಎಂದರೆ ಕೇವಲ ಸುಂಕ ವಿಧಿಸುವ ಪದ್ಧತಿ ಎಂದಲ್ಲ ಸಂದರ್ಭಾನುಸಾರ ವಿನಾಯ್ತಿ, ಮನ್ನ, ಮುಕ್ತಗೊಳಿಸುವುದು ಒಂದು ಪದ್ಧತಿಯಾಗಿರುವುದು ಈ ಪರಿಸರದ ಶಾಸನಗಳು ಪುಷ್ಟೀಕರಿಸುತ್ತವೆ.

ಅಧ್ಯಾಯ - ಮೂರು

ಶಾಸನಗಳ ವೈವಿಧ್ಯತೆ

ಅಧ್ಯಾಯ - ಮೂರು

ಶಾಸನಗಳ ವೈವಿಧ್ಯತೆ

೩.೧.ಪೀಠಿಕೆ

ಶಾಸನ ಎಂದರೆ ರಾಜಾಜ್ಞೆ ಆದೇಶ ಎಂದರ್ಥ (ಸಿ.ಪಿ.ಕೆ, ೨೦೦೧, ಪುಟ:೨೫). ಶಾಸನಶಾಸ್ತ್ರದ ವಾಖ್ಯೆ ಶುಕ್ರನೀತಿ ಸಾರದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜಾಜ್ಞೆ ಎಂಬ ಅರ್ಥದಲ್ಲಿ ಉಪಯೋಗಿಸಿದೆ. ಶಾಸನ ಎಂಬ ಪದಕ್ಕೆ ಕಾನೂನು ಎಂಬ ಅರ್ಥವೂ... (ಬ್ರಿಟಾನಿಕಾ ವಿಶ್ವಕೋಶ, ಡಿ.ಸಿ.ಸರ್ಕಾರ್, ಸಿ.ಪಿ.ಕೆ, ೨೦೦೧, ಪುಟ:೨೫). ಇದೆ. ಈ ಅರ್ಥದಲ್ಲೇ ರಾಜ ಪ್ರಶಸ್ತಿ ಶಾಸನಗಳನ್ನು ದಾನಶಾಸನಗಳನ್ನ, ವೀರಗಲ್ಲುಗಳನ್ನ, ಮಾಸ್ತಿಗಲ್ಲುಗಳನ್ನ, ಮಹಾಸತಿಗಲ್ಲುಗಳನ್ನ, ನಿಷಧಿಗಲ್ಲುಗಳನ್ನ ಎಲ್ಲವನ್ನು ಶಾಸನ ಎಂದೇ ಪರಿಗಣಿಸಲಾಗಿದೆ.

ದಾನ ಶಾಸನಗಳು

ಧಾರ್ಮಿಕ ದತ್ತಿಯ ಉದ್ದೇಶವುಳ್ಳ ಶಾಸನಗಳು ದಾನಶಾಸನಗಳು, ಈ ಶಾಸನಗಳ ಧಾರ್ಮಿಕ ದತ್ತಿಯ ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನಗಳನ್ನು ದಾಖಲು ಮಾಡಿದೆ. ಉದಾ:- ದೇವಾಲಯದಲ್ಲಿ ನಡೆಯುವ ವಿದ್ಯಾದಾನಕ್ಕೂ, ದೇವಾಲಯದಲ್ಲಿ ಪೂಜೆ ಮಾಡುವ ಅರ್ಚಕರಿಗೂ, ನರ್ತಿಸುವ ನರ್ತಕಿಯರಿಗೂ, ವಾದ್ಯಗಾರರಿಗೂ, ವೀರಯೋಧರಿಗೂ, ವಿದ್ಯಾದಾನ ಮಾಡುವ ಗುರುಗಳಿಗೆ ಹಾಗೂ ಶಿಷ್ಯ ವೃಂದಕ್ಕೂ ಅರವಟ್ಟಿಗೆ, ಕೆರೆಬಾವಿ ಇನ್ನೂ ಮುಂತಾದ ಸಾಮಾಜಿಕ ಸೇವೆ ಮಾಡಿದ ವ್ಯಕ್ತಿಗಳಿಗೂ ಗೌರವಾರ್ಥಕವಾಗಿ ನೀಡಿದ ದಾನವನ್ನು ಇತರರ ತಿಳುವಳಿಕೆಗೋಸ್ಕರ ಶಾಸನ ರೂಪದಲ್ಲಿ ಕೆತ್ತಿಸಿ ನೆಡಿಸುತ್ತಿದ್ದರು. ಈ ಶಾಸನವು ದಾನ ಶಾಸನವಾಗಿರುತ್ತದೆ (ಆರ್.ಶೇಷಶಾಸ್ತ್ರಿ, ೨೦೦೫, ಪುಟ:೬). ದಾನವಾಗಿ ನೀಡುವ ಆರ್ಥಿಕ ಮೂಲ ಭೂಮಿಯಾಗಿರಬಹುದು, ನಗದು ರೂಪದ ಹಣವಾಗಿರಬಹುದು ಅಥವಾ ಅಗತ್ಯ ವಸ್ತುಗಳ ಪೂರೈಕೆ ಇರಬಹುದು. ಇವೆಲ್ಲವುಗಳನ್ನು ದಾನದ ಅರ್ಥದಲ್ಲಿ ಬಳಸಲಾಗಿದೆ.

ಪ್ರಸ್ತುತ ಹುಲಿಗಿ ಪರಿಸರಕ್ಕೆ ದೊರೆತ ಶಾಸನಗಳಿಗೆ ಸಂಬಂಧಿಸಿದಂತೆ ಹುಲಿಗಿಯ ಪೂರ್ವ ದಿಕ್ಕಿಗೆ ಸೋಮೇಶ್ವರ ದೇವಾಲಯದಲ್ಲಿರುವ ಒಂದು ಶಾಸನ ಇದೆ. ಇದು ದಾನಶಾಸನವಾಗಿದೆ. ವಿಕ್ರಮ ಶಕ ೧೩ನೆಯ ವಿಭವಸಂವತ್ಸರದ ಚೈತ್ರಮಾಸದ ಶುದ್ಧ ಅಕ್ಷಯ ತೃತೀಯ ಸೋಮವಾರ ಸಂಕ್ರಾಂತಿ ದಿವಸದಲ್ಲಿ ನೀಡಿದ ದಾನದ ಉಲ್ಲೇಖ ನೀಡುತ್ತದೆ. ಚಾಲುಕ್ಯ ತ್ರಿಭುವನ ಮಲ್ಲ (viನೇ ವಿಕ್ರಮಾದಿತ್ಯ)ನು ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದಾಗ ಚೌವೇದಿಭಟ್ಟನು ತುಂಗಭದ್ರಾ ನದಿಯಿಂದ ಸೀಳುನಾಲೆಯೊಂದನ್ನು ಮಾಡಿ ಊರಿನ ಜನರಿಗೆ ಕೃಷಿ ಮಾಡಲು ಸಹಾಯ ಮಾಡುತ್ತಾನೆ. ಈತನ ಸಮಾಜ ಸೇವೆಯನ್ನು ಮೆಚ್ಚಿ ಅರಸ ಭೂಮಿಯನ್ನು ದಾನ ಮಾಡಿದ್ದನ್ನ ಈ ಶಾಸನ ಉಲ್ಲೇಖಿಸುತ್ತದೆ **(EI.IX.356)**. ಶಿವಪುರ ಶಾಸನವೊಂದರಲ್ಲಿ ದಾನ ನೀಡಿದ ಉಲ್ಲೇಖ ಇದೆ. ಈ ಶಾಸನದಲ್ಲಿ ಕಾಲದ ಉಲ್ಲೇಖಿತ ಭಾಗವು ನಷ್ಟವಾಗಿದ್ದು, ಇದರ ಕಾಲ ಹೇಮಳಂಬಿ, ಆಷಾಡ, ಶು೧ ಎಂದು ಉಲ್ಲೇಖವಿದೆ. ಸೋಮೇಶ್ವರನ ದೀಪಾರಾಧನೆಗೆ ದವಸ, ಹಸುರುವಾಣಿ ಮುಂತಾದ ಹೇರುಗಳಿಗೆ ೧೦ ಹೇರಿಗೆ ಐದು ಕಾಸಿನ ಲೆಕ್ಕದಲ್ಲಿ ಮಹಾನಾಡ ಸೆಟ್ಟಿ ಪಟ್ಟಣ ಸ್ವಾಮಿಗಳು ಬಿಟ್ಟು ಕೊಡುತ್ತಾರೆ. ಹಾಗೆಯೆ ವಿಠ್ಠಲದೇವರಿಗೂ ಹತ್ತು ಹೇರಿಗೆ ಐದು ಕಾಸು ಬಿಟ್ಟು ಕೊಟ್ಟ ಉಲ್ಲೇಖವಿದೆ (ಕ.ಶಾ.ಸಂ-೨ ಕೊಜಿ.ಪು:೧೫೦-೧೫೧).

ಶಿವಪುರ ಬಳಿಯ ಸೋಮನಾಥ ಬೆಟ್ಟದಲ್ಲಿರುವ ಶಾಸನ ದಾನ ಶಾಸನವಾಗಿದೆ. ಪ್ರಸ್ತುತ ತ್ರುಟಿತಶಾಸನ ಈ ಶಾಸನದಲ್ಲಿ ಉಲ್ಲೇಖಿತ ಕಾಲವು ಶಕವರ್ಷ ೯೫೫ ವಿಜಯ, ಸೂರ್ಯಗ್ರಹಣವೆಂದಿದ್ದು, ಇದು ಕ್ರಿ.ಶ.೧೩-೧೧-೧೦೩೩, ಶನಿವಾರಕ್ಕೆ ಸಮವಾಗುತ್ತದೆ **(IK.III, No-250)**. ಶಾಸನದಲ್ಲಿ ಚಾಳುಕ್ಯ ರಾಜ ತ್ರೈಳೋಕ್ಯಮಲ್ಲನ ಉಲ್ಲೇಖವಿದ್ದು ಇವನು ಕ[ಟ್ಟ]ರ ನೆಲೆ ವೀಡಿನಿಂದ ರಾಜ್ಯಭಾರ ಮಾಡುತ್ತಿದ್ದನ್ನೆಂದು ತಿಳಿಸುತ್ತದೆ. ಇವನ ಸಾಮನ್ತನಾಗಿ ಬನವಾಸಿ ಪುರವರಾಧೀಶ್ವರ, ವೀರಮಹೇಶ್ವರ, ಕದಂಬ ಕುಳಾಭರಣ ಎಂಬ ಬಿರುದುಗಳನ್ನು ಪಡೆದ ನನ್ನಿಯದೇವ ತ್ರೈಳೋಕ್ಯಮಲ್ಲ ಆಳುತ್ತಿದ್ದನು. ಇವನ ಸಾಮಂತ ಪಂಪರಸನು ಬೆಟ್ಟದ ಸೋಮೇಶ್ವರನಿಗೆ ೫೦ ಮತ್ತರು ಭೂಮಿದಾನ ನೀಡಿರುತ್ತಾನೆ.

ಬಂಡಿಹರ್ಲಾಪುರ ಆಂಜನೇಯ ದೇವಾಲಯದ ಬಳಿ ಗದ್ದೆಯಲ್ಲಿ ದೊಡ್ಡ ಗುಂಡಿನ ಮೇಲಿರುವ ಶಾಸನವು ಸಹ ದಾನ ಶಾಸನವಾಗಿದೆ (ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಪುಟ:೧೫೪). ಕೃಷ್ಣರಾಯ ಮಹಾರಾಯನು ಶ್ರೀ ವಿಠಲದೇವರ ಅಮ್ರುತಪಡಿ, ನೈವೇದ್ಯ, ಅಂಗರಂಗ ವೈಭೋಗ, ಫಾಲ್ಗುಣ ಮಾಸ, ವೈಶಾಖದ ರಥೋತ್ಸವ, ನಿತ್ಯ, ಪಕ್ಷ, ಮಾಸ, ಮತ್ತು ಸಂವತ್ಸರದ ಉತ್ಸವಗಳಿಗೆ ನಿತ್ಯ ನೈಮಿತ್ತಿಕ ದೀಪಾರಾಧನೆ ಮುಂತಾದ ಪುಣ್ಯ ತಿಥಿಗಳಲ್ಲಿ ಮಾಡುವ ಮಹಾಪೂಜೆ, ಮಹಾನೈವೇದ್ಯಕ್ಕೆಂದು ಹುಲಿಗಿಯ ಮಾಗಣೆಗೆ ಸಲುವ ಹರಿಹರಪುರವನ್ನು ಸಮರ್ಪಿಸಿದ ವಿಷಯವನ್ನು ಈ ಶಾಸನ ದಾಖಲಿಸಿದೆ.

ಹತೋಟಿ ಹಾಳೂರಿನ ದಾರಿಯ ಪಕ್ಕದ ಮಂಟಪದಲ್ಲಿನ ಗುಂಡಿನಲ್ಲಿರುವ ಶಾಸನ ದಾನ ಶಾಸನವಾಗಿದೆ. ಶಾಸನದ ಕಾಲವು ಶಾಲಿವಾಹನ ಶಕ ೧೪೩೬ನೆಯ ಭಾವ ಸಂವತ್ಸರದ ಫಾಲ್ಗುಣ, ಶು೩, ಶನಿವಾರವೆಂದಿದ್ದು, ಇದು ಕ್ರಿ.ಶ.೧೬.೦೨.೧೫೧೫ರ ಶುಕ್ರವಾರಕ್ಕೆ (ಶನಿವಾರವಲ್ಲ) ಸರಿಹೊಂದುತ್ತದೆ (ಕ.ವಿ.ಶಾ.ಸಂ-೨, ಕೊಪ್ಪಳ

ಜಿಲ್ಲೆ, ಪು:೧೬೧). ಕೃಷ್ಣರಾಯ ಮಹಾರಾಯನು ಬಾಲಕೃಷ್ಣದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ, ಅಂಗರಂಗ ಭೋಗ, ಚೈತ್ರಮಾಸದ, ರಥೋತ್ಸವ, ನಿತ್ಯನೈಮಿತ್ಯಕ, ದೀಪೋತ್ಸವ, ಪುಣ್ಯದಿನಗಳು, ದಿನ, ಪಕ್ಷ, ಮಾಸಗಳಲ್ಲಿ ನಡೆಯುವ ಉತ್ಸವಗಳ ವೆಚ್ಚಕ್ಕಾಗಿ ಹುಲಿಗಿಯ ಮಾಗಣೆಯಲ್ಲಿನ 'ಅತ್ತಿವಟ್ಟಿ' ಗ್ರಾಮವನ್ನು ದಾನವಾಗಿ ಸಮರ್ಪಿಸಿದಂತೆ ದಾಖಲಿಸಿದೆ. ಪ್ರಸ್ತುತ ಹುಲಿಗಿ ಪರಿಸರದಲ್ಲಿನ ದಾನಶಾಸನಗಳ ದಾಖಲಾತಿ ಇದಾಗಿದೆ.

ಹುಲಿಗಿ ಪರಿಸರದ ದಾನ ಶಾಸನಗಳ ಸಾರಾಂಶ

ಶಾಸನದ ಸಂಖ್ಯೆ	:	೧
ಗ್ರಾಮ	:	ಹುಲಿಗಿ
ಸ್ಥಳ	:	ಸೋಮೇಶ್ವರ ದೇವಾಲಯದಲ್ಲಿನ ಶಾಸನ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	AR.No.B483 of 1959-60, EI.IX.356
ಕಾಲ	:	೧೦೮೮

ಚಾಳುಕ್ಯ ತ್ರಿಭುವನಮಲ್ಲ (ಆರನೆಯ ವಿಕ್ರಮಾದಿತ್ಯ)ನು ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದಾಗ ಕಾಮಕಾಯನ ಗೋತ್ರದ ನಾರಾಯಣ ಭಟ್ಟೋಪಾಧ್ಯಾಯನ ಮಗ ಚೌವೇದಿಭಟ್ಟನು ಹುಲಿಗೆಯೆಂಬ ಪುರವನ್ನು ತ್ರೈಲೋಕ್ಯಮಲ್ಲನಿಂದ ಪಡೆದನು. ಇವನು ತುಂಗಭದ್ರಾನದಿಯಿಂದ ಸೀಳುನಾಲೆಯೊಂದನ್ನು ತಂದಂತೆ ಹೇಳಿದೆ. ಈ ಚೌವೇದಿಭಟ್ಟನ ಪತ್ನಿ ಆಚ್ಚಿಕಬ್ಬೆ ಇವರಿಗೆ ನಾರಾಣಭಟ್ಟ, ದ್ರೋಣಭಟ್ಟ, ಸೋಮನಾಥ, ಮಾರಯ್ಯಭಟ್ಟ ಮತ್ತು ರುದ್ರಾದಿತ ಎಂಬ ಐವರು ಮಕ್ಕಳಾದರು. ಅವರಲ್ಲಿ ಸೋಮನಾಥನು ರುದ್ರಸದ್ಮವನ್ನು (ಶಿವದೇವಾಲಯ) ಮಾಡಿಸಿದ. ಈ ಊರಿಗೆ ಪೂರ್ವಕ್ಕೆ ರಿಷ್ಯಮೂಕಾಚಲ, ದಕ್ಷಿಣಕ್ಕೆ ಗಂಧಮಾದನ, ಪಶ್ಚಿಮಕ್ಕೆ ಶ್ರೀಕೂಟ, ಉತ್ತರಕ್ಕೆ ಕಿಷ್ಕಿಂದ ಪರ್ವತಗಳಿದ್ದು, ಇವುಗಳ ಮಧ್ಯೆ ಇರುವ ಪ್ರದೇಶದಲ್ಲಿ ಸೋಮೇಶನಿಗೆ ಪುಲಿಗೆಯೂರಿನ ಒಡೆಯನಾದ ಸೋಮನಾಥನು ದೇವಾಲಯವನ್ನು ಮಾಡಿಸಿದನೆಂದಿದೆ. ಈ ಸೋಮನಾಥನ ಪತ್ನಿ ಮಂಚಿಕಬ್ಬೆ. ಈ ದಂಪತಿಗಳಿಬ್ಬರೂ ಕೂಡಿ ತಾವು ಪ್ರತಿಷ್ಠೆ ಮಾಡಿಸಿದ ಸೋಮೇಶ್ವರ ದೇವರಿಗೆ ಊರಿನ ಪೂರ್ವಕ್ಕೆ ಗುಯ್ಯಲ ತೋಟ, ಪರಿನೀರ ತೋಟವನ್ನು ಚತುಸ್ಸೀಮಾ ಸಮೇತವಾಗಿ ದಾನನೀಡುತ್ತಾರೆ. ಇದಲ್ಲದೆ ಮನೆಗಳನ್ನು ಭೃತ್ಯ ದಾಸಿವರ್ಗ ಸಹಿತವಾಗಿ ಧಾರಾಪೂರ್ವಕವಾಗಿ ನೀಡುತ್ತಾನೆ.

ಶಾಸನದ ಸಂಖ್ಯೆ	:	೨
ಗ್ರಾಮ	:	ಶಿವಪುರ
ಸ್ಥಳ	:	ಗ್ರಾಮದ ಪಾಳುಬಸವ ದೇವಾಲಯದ ಬಳಿ ಎರಡನೆಯ ಶಾಸನ
ಲಿಪಿ ಮತ್ತು ಭಾಷೆ	:	ಕನ್ನಡ
ಕಾಲ	:	ತೃಟಿತವಾಗಿದೆ
ವರದಿ/ಪ್ರಕಟಣೆ	:	ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಶಾಸಂ.೧೫೪

ಈ ಶಾಸನದಲ್ಲಿ ಕಾಲದ ಉಲ್ಲೇಖಿತ ಭಾಗವು ನಷ್ಟವಾಗಿದ್ದು, ಹೇಮಳಂಬಿ, ಆಷಾಡ, ಶು.೧ ಎಂದು ಮಾತ್ರ ಉಲ್ಲೇಖವಿದೆ ಸೋಮೇಶ್ವರನ ದೀಪಾರಾಧನೆಗೆ ದವಸ, ಹಸುರುವಾಣಿ ಮುಂತಾದ ಹೇರುಗಳಿಗೆ ೧೦ ಹೇರಿಗೆ ಐದು ಕಾಸಿನ ಲೆಕ್ಕದಲ್ಲಿ ಮಹಾನಾಡ ಸೆಟ್ಟಿ ಪಟ್ಟಣ ಸ್ವಾಮಿಗಳು ಬಿಟ್ಟು ಕೊಡುತ್ತಾರೆ. ಹಾಗೆಯೇ ವಿಠಲದೇವರಿಗೂ ಹತ್ತು ಹೇರಿಗೆ ಐದು ಕಾಸು ಬಿಟ್ಟು ಕೊಟ್ಟ ಉಲ್ಲೇಖವಿದೆ.

ಶಾಸನದ ಸಂಖ್ಯೆ	:	೩
ಗ್ರಾಮ	:	ಶಿವಪುರ ಬಳಿ
ಸ್ಥಳ	:	ಸೋಮನಾಥ ಬೆಟ್ಟದಲ್ಲಿನ ಗವಿದೇವಾಲಯ ಬಲಭಾಗದ ಬಂಡೆಯಲ್ಲಿ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	IK.III.No.250
ಕಾಲ	:	ಕ್ರಿ.ಶ. ೧೦೫೩

ತ್ರುಟಿತ ಈ ಶಾಸನದಲ್ಲಿ ಉಲ್ಲೇಖಿತ ಕಾಲವು ಶಕವರ್ಷ ೯೫೫, ವಿಜಯ, ಸೂರ್ಯಗ್ರಹಣವೆಂದಿದ್ದು, ಇದು ಕ್ರಿ.ಶ. ೧೩.೧೧.೧೦೩೩, ಶನಿವಾರಕ್ಕೆ ಸರಿ ಹೊಂದುತ್ತದೆ. ಶಾಸನದಲ್ಲಿ ಚಾಳುಕ್ಯರಾಜ ತ್ರೈಳೋಕ್ಯಮಲ್ಲನ ಉಲ್ಲೇಖವಿದ್ದು ಇವನು ಕ[ಟ್ಟ]ರ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಂತೆ ಉಲ್ಲೇಖವಿದೆ. ಇವನ ಸಾಮನ್ತನಾಗಿ ಬನವಾಸಿಪುರವರಾಧೀಶ್ವರ, ವೀರ ಮಹೇಶ್ವರ, ಕದಂಬ ಕುಳಾಭರಣ ಎಂಬ ವಿಶೇಷಣಗಳನ್ನುಳ್ಳ ನನ್ನಿಯದೇವ ತ್ರೈಳೋಕ್ಯಮಲ್ಲ ಆಳುತ್ತಿದ್ದನು, ಇವನ ಸಾಮಂತ ಪಂಪರಸನು ಬೆಟ್ಟದ ಸೋಮೇಶ್ವರನಿಗೆ ೫೦ ಮತ್ತರು ಭೂಮಿ ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.

ಶಾಸನದ ಸಂಖ್ಯೆ	:	೪
ಗ್ರಾಮ	:	ಬಂಡಿ ಹರ್ಲಾಪುರ
ಸ್ಥಳ	:	ಆಂಜನೇಯ ದೇವಾಲಯದ ಬಳಿ ಗದ್ದೆಯಲ್ಲಿ ದೊಡ್ಡಗುಂಡಿನ ಮೇಲೆ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಶಾಸಂ.೧೬೦
ಕಾಲ	:	ಕ್ರಿ.ಶ.೧೫೧೩

ಶಾಸನದಲ್ಲಿ ಶಾಲಿವಾಹನ ಶಕ ೧೪೩೫ನೆಯ ಶ್ರೀಮುಖ ಸಂವತ್ಸರದ ಚಯಿತ್ರ, ಶು ೫ ಎಂದಿದ್ದು, ಇದು ಕ್ರಿ.ಶ. ೧೨.೩.೧೫೧೩ಕ್ಕೆ ಸರಿ ಹೊಂದುತ್ತದೆ. ಕೃಷ್ಣರಾಯ ಮಹಾರಾಯನು ಶ್ರೀ ವಿಠಲದೇವರ ಅಮ್ರುತಪಡಿ, ನೈವೇದ್ಯ ಅಂಗರಂಗ ವೈಭೋಗ, ಫಾಲ್ಗುಣ ಮಾಸ, ವೈಶಾಖದ ರಥೋತ್ಸವ, ನಿತ್ಯ, ಪಕ್ಷ, ಮಾಸ, ಮತ್ತು ಸಂವತ್ಸರದ ಉತ್ಸವಗಳಿಗೆ, ನಿತ್ಯನೈಮಿತ್ತಿಕ ದೀಪಾರಾಧನೆ, ಪುಣ್ಯತಿಥಿಗಳಲ್ಲಿ ಮಾಡುವ ಮಹಾಪೂಜೆ, ಮಹಾನೈವೇದ್ಯಕ್ಕೆಂದು ಹುಲಿಗೆಯ ಮಾಗಣೆಗೆ ಸಲುವ ಹರಿಹರಪುರವನ್ನು ಸಮರ್ಪಿಸುತ್ತಾನೆ.

ಈ ಗ್ರಾಮದ ನೀರಾರಂಬ, ಕಾಡಾರಂಬ, ತಳವಾರಿಕೆ ಸುಂಕ, ಜೋಡಿ ಬಿರಾಡ, ಸಕಲ ಸುವರ್ಣದ ಆದಾಯ, ಒತ್ತಡ ಆದಾಯ ಎಲ್ಲವನ್ನು ಅವನ ತಂದೆ ನರಸಣನಾಯಕನಿಗೂ ತಾಯಿ ನಾಗಾಜಿ ಅಮ್ಮನಿಗೂ ಪುಣ್ಯವಾಗಲಿಯೆಂದು ಆಂಗೀರಸ ಸಂವತ್ಸರದ ಪಾಲ್ಗುಣ ಬ.೩೦ ಸೋಮವಾರದಂದು (ಕ್ರಿ.ಶ.೭.೩.೧೫೧೩) ದಾನ ನೀಡಿದ ಉಲ್ಲೇಖವಿದೆ.

ಶಾಸನದ ಸಂಖ್ಯೆ : ೫

ಗ್ರಾಮ : ಹತೋಟಿ

ಸ್ಥಳ : ಹಾಳೂರಿನ ದಾರಿಯ ಪಕ್ಕದ ಮಂಟಪದಲ್ಲಿನ ಗುಂಡಿನಲ್ಲಿ

ಲಿಪಿ ಮತ್ತು ಭಾಷೆ : ಕನ್ನಡ

ಕಾಲ : ಕ್ರಿ.ಶ.೧೫೧೫

ವರದಿ/ಪ್ರಕಟಣೆ : ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಶಾಸಂ-೧೬೧

ಶಾಸನದ ಕಾಲವು ಶಾಲಿವಾಹನ ಶಕ ೧೪೩೬ನೆಯ ಭಾವ ಸಂವತ್ಸರದ ಫಾಲ್ಗುಣ, ಶು ೩, ಶನಿವಾರವೆಂದಿದ್ದು, ಇದು ಕ್ರಿ.ಶ.೧೬.೨.೧೫೧೫ರ ಶುಕ್ರವಾರಕ್ಕೆ (ಶನಿವಾರವಲ್ಲ) ಸರಿ ಹೊಂದುತ್ತದೆ. ಕೃಷ್ಣರಾಯ ಮಹಾರಾಯನು ಬಾಲಕೃಷ್ಣದೇವರ ಪ್ರತಿಷ್ಠಾ ಕಾಲದಲ್ಲಿ ದೇವರ ಅಮೃತಪಡಿ, ಅಂಗರಂಗಭೋಗ, ಚೈತ್ರಮಾಸದ ರಥೋತ್ಸವ, ನಿತ್ಯ ನೈಮಿತ್ಯಕ, ದೀಪೋತ್ಸವ, ಪುಣ್ಯದಿನಗಳು, ದಿನ, ಪಕ್ಷ, ಮಾಸಗಳಲ್ಲಿ ನಡೆಯುವ ಉತ್ಸವಗಳ ವೆಚ್ಚಕ್ಕಾಗಿ ಹುಲಿಗೆಯ ಮಾಗಣೆಯಲ್ಲಿನ ಅತ್ತಿವಟ್ಟಿ ಎನ್ನುವ ಗ್ರಾಮವನ್ನು ಸಮರ್ಪಿಸುತ್ತಾನೆ. ಈ ಗ್ರಾಮಕ್ಕೆ ಸಲುವ ನೀರಾರಂಬ, ಕಾಡಾರಂಬ, ಅಲ್ಲದೆ ಕಾಱುವ, ಖಾಲಾ ಹೊಸಹಳ್ಳಿ, ಸಣಬಿನಕಟಗೆ ಪೇಟೆ ಮುಂತಾದವುಗಳ ಉತ್ಪನ್ನವಾದ ಸುಂಕ, ತಳವಾರಿಕೆ, ಸುವರ್ಣಾದಾಯ, ಬತ್ತಾದಾಯ ಮುಂತಾದವನ್ನು ರಾಯನ ತಂದೆ ನರಸನಾಯಕನಿಗೂ, ಅವನ ತಾಯಿ ನಾಗಲಾದೇವಿ ಅಮ್ಮನಿಗೂ ಧರ್ಮವಾಗಬೇಕೆಂದು ಮೇಲೆ ಉಲ್ಲೇಖಿಸಿದ ಕಾಲದಲ್ಲಿ ಬಾಲಕೃಷ್ಣ ದೇವರ ಪ್ರತಿಷ್ಠೆ ಕಾಲದಲ್ಲಿ ದೇವರಿಗೆ ಸಮರ್ಪಿಸಿದಂತೆ ದಾಖಲಿಸಿದೆ.

ಶಾಸನದ ಸಂಖ್ಯೆ : ೬

ಗ್ರಾಮ : ಕಿಡಿದಾಳು

ಸ್ಥಳ : ಹನುಮಂತದೇವರ ಗುಡಿಯ ಮುಂದಿನ ಕಟ್ಟೆಯಲ್ಲಿ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : AR.No.B374 of 1963-64 KI.III.No126

ಕಾಲ : ಕ್ರಿ.ಶ.೧೫೧೪

ಶಾಸನೋಕ್ತ ಕಾಲವು ಶಾಲಿವಾಹನ ಶಕವರುಷ ೧೪೩೬ನೆಯ ಭಾವಸಂವತ್ಸರ, ಆಶ್ವೀಜ, ಶು.೩ ಗುರುವಾರವಾಗಿದ್ದು ಇದು ಕ್ರಿ.ಶ.೨೮.೯.೧೫೧೪ಕ್ಕೆ ಸರಿಹೊಂದುತ್ತದೆ. ಅಂಗ, ವಂಗ, ಕಳಿಂಗ, ಗುರ್ಜ್ಜರ,

ಮಗಧ, ಲಾಟ, ಕರ್ನಾಟ, ಗೌಳ, ಮಾಳವ, ರೇವಣ, ಕೊಂಕಣ, ಬಡಗಣ, ಮೂಡಣ, ಪಾಂಚಾಳ, ಕೇರಳ, ಹಮ್ಮೀರ, ಸಿಂಹಳ ಈ ದೇಶಗಳಲ್ಲದೆ ಗಿರಿದುರ್ಗ, ವನದುರ್ಗ, ಜಲದುರ್ಗಗಳನ್ನು ಗೆದ್ದ ಯೀಶ್ವರ ನರಸಿಂಹನ ಮಗನಾದ ಕೃಷ್ಣರಾಯ ಮಹಾರಾಯನು ಹೊಸೂರು ಮಹಾಮಾಯಿಯ ಅಮೃತಪಡಿ ನೈವೇದ್ಯಕ್ಕೆ ಪಡವ ನಾಡೊಳಗಣ ಕೊಪಣ ವೇಂತೆಯಕೆ ಸೇರಿದ ಕಿಡದಾಳ ಗ್ರಾಮವನ್ನು ದಾನ ನೀಡಿರುವುದು ಈ ಶಾಸನದ ವಿಷಯವಾಗಿದೆ.

ಶಾಸನದ ಸಂಖ್ಯೆ	:	೭
ಗ್ರಾಮ	:	ಸಾನಾಪುರ
ಸ್ಥಳ	:	ಪಾಳು ಬಿದ್ದ ಗ್ರಾಮದಲ್ಲಿ, ತುಂಗಭದ್ರಾ ಆಣೆಕಟ್ಟಿನ ಸಮೀಪದ ಬಂಡೆಗಲ್ಲ ಮೇಲೆ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	QJMS.VII.No-10: III. No46
ಕಾಲ	:	೧೫ನೇ ಶತಮಾನ

ಈ ಶಾಸನದ ಕಾಲ ವಿಶ್ವಾವಸು ಸಂವತ್ಸರ, ಮಾರ್ಗಸಿರ ಶು.೮ ಆಗಿದ್ದು ಸಿದ್ದದೇವರ ಪೂಜೆಗಾಗಿ, ನರಸನಾಯಕನು ಆರು ವರಹ ದಾನ ಮಾಡಿದುದನ್ನು ಈ ಶಾಸನ ಉಲ್ಲೇಖಿಸುತ್ತದೆ.

ಶಾಸನದ ಸಂಖ್ಯೆ	:	೮
ಗ್ರಾಮ	:	ಹನುಮನಹಳ್ಳಿ
ಸ್ಥಳ	:	ಸಾಣಾಪುರ - ಆನೇಗೊಂದಿ ರಸ್ತೆಯಲ್ಲಿ ಬಲಕ್ಕೆ ಗದ್ದೆ ಬೈಲಿನಲ್ಲಿರುವ ದೊಡ್ಡ ಗುಂಡಿನಲ್ಲಿ (ಪಾಂಡ್ಯಪ್ಪನ ಗದ್ದೆ)
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	QJMS.VII.No-10: III. No47
ಕಾಲ	:	ಕ್ರಿ.ಶ.೧೫೧೫

ತ್ರುಟಿತ. ಸ್ವಭಾನು ಸಂವತ್ಸರದ ಮಾರ್ಗಸಿರ ಬ ೭ ಬುಧವಾರದಂದು ಅಂಜನಾದೇವಿಯ ಮತ್ತು ಹನುಮಂತ ದೇವರ ಅಮೃತ ಪಡಿಗೆ ಭಟಮಾನ್ಯವಾಗಿ ರಾಮಾಪುರದಲ್ಲಿ ಹೊಲ ಮತ್ತು ಗದ್ದೆಯನ್ನು ಆನೆ ಗುಂದಿಯ ಹಗಿಯ ನಾಗಣ್ಣನು ಬಿಡುತ್ತಾನೆ. ಲಿಪಿ ದ್ರವ್ಯಯಿಂದ ಈ ಶಾಸನದ ಕಾಲ ಕ್ರಿ.ಶ.೧೬ನೆಯ ಶತಮಾನ.

ಶಾಸನದ ಸಂಖ್ಯೆ	:	೯
ಗ್ರಾಮ	:	ವಿಪ್ರ
ಸ್ಥಳ	:	ದೇವಘಾತದ ದೇವಿಗುಡಿಯ ಮುಂಭಾಗದಲ್ಲಿನ ಶಾಸನ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಶಾಸಂ-೧
ಕಾಲ	:	ಕ್ರಿ.ಶ.೧೦೮೭

ಶಾಸನದಲ್ಲಿ ಚಾಳುಕ್ಯ ವಿಕ್ರಮ ವರ್ಷ ೧೭ನೆಯ ಪ್ರಭವಸಂವತ್ಸರದ ಪುಷ್ಯ, ಬ.೧೩, ಆದಿತ್ಯವಾರವೆಂದಿದ್ದು ಇದು ಕ್ರಿ.ಶ.೧೭.೧.೧೯೪ಳರ ಮಂಗಳವಾರಕ್ಕೆ ಸರಿ ಹೊಂದುತ್ತದೆಯಾದರೂ ಆ ವರ್ಷ ಪ್ರಭವ ಸಂವತ್ಸರ ಬರುವುದಿಲ್ಲ. ಕ್ರಿ.ಶ.೧೦೮೭ರಲ್ಲಿ ಪ್ರಭವ ಸಂವತ್ಸರ ಎಂದಿದ್ದು, ಡಿಸೆಂಬರ್ ತಿಂಗಳ ೨೫ ಶನಿವಾರವಾಗುತ್ತದೆ. ಚಾಳುಕ್ಯ ತ್ರಿಭುವನಮಲ್ಲನು ಕಲ್ಯಾಣದಲ್ಲಿ ಆಳುತ್ತಿದ್ದಾಗ, ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದ ಅವನ ಮಾಂಡಳಿಕನಾದ ತ್ರಿಭುವನಮಲ್ಲಪಾಂಡ್ಯ ವೀರನೊಳಂಬ ಪಲ್ಲವ ಪೆರ್ಮಾನಡಿಯು ಮಲಯಾವಿ ಪಂಡಿತ ದೇವರಿಗೆ ಬಲಕುಂದೆ ಮೂನ್ನೂರು ಕಂಪಣದ ಬಳಿಯ ಬಾಡವಾದ ಇಕುಪಱವನ್ನು ಕಂಪಿಲೆಯ ಗವರೇಶ್ವರ ಸಿದ್ದೇಶ್ವರ ದೇವರಿಗಾಗಿ ಬಿಟ್ಟಿದ್ದು ಈ ಶಾಸನ ದಾಖಲಿಸುತ್ತದೆ.

ಶಾಸನದ ಸಂಖ್ಯೆ	:	೧೦
ಗ್ರಾಮ	:	ವಿಪ್ರ
ಸ್ಥಳ	:	ಶಿವದೇವಾಲಯದ ಮುಖ ಮಂಟಪದ ಎಡಗೋಡೆಯಲ್ಲಿ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	AR.No-13, 139 OF 1972-73 VPR.No.3 OF 1988-91; IK.III.No-79
ಕಾಲ	:	ಕ್ರಿ.ಶ. ೧೦೫೯

ತ್ರುಟಿತ. ಶಕವರ್ಷ ೯೮೧ನೆಯ ವಿಕಾರಿ, ಶ್ರಾವಣ, ಪುಣ್ಣಮಿ, ಬ್ರಿಹಸ್ಪತಿವಾರ, ಸೋಮಗ್ರಹಣವೆಂದಿದ್ದು, ಇದು ಕ್ರಿ.ಶ.೨೭.೭.೧೦೫೯ ಮಂಗಳವಾರ (ಗುರುವಾರವಲ್ಲ)ಕ್ಕೆ ಸರಿಹೊಂದುತ್ತದೆ. ಚಾಲುಕ್ಯ ತ್ರೈಲೋಕ್ಯಮಲ್ಲನು (Iನೇ ಸೋಮೇಶ್ವರ) ಬೆಣ್ಣೆಕಲ್ಲ ನೆಲೆವೀಡಿನಲ್ಲಿದ್ದಾಗ ವಿಪ್ರದ ಶಿವದೇವಾಲಯಕ್ಕೆ ದಾನ ನೀಡುತ್ತಾನೆ. ಚವಳೇಶ್ವರ ದೇವರಿಗೆ 'ಚಕ್ರೇಶ್ವರ ನಿಶಾನ' ನಿಮಿತ್ತವಾಗಿ 'ಮುಸುಂದೆ' ಎಂಬ ಗ್ರಾಮವನ್ನು ನೀಡುತ್ತಾನೆ. ಶಾಸನದಲ್ಲಿ ವಿಪ್ರನಾರಾಯಣ ಸ್ಥಳದ ವಿವರವಾದ ವರ್ಣನೆಯಿದೆ. ಇದು ತುಂಗಭದ್ರೆಯ ಉತ್ತರ ದಡದಲ್ಲಿನ ಕಿಷ್ಕಿಂಧ ಪರ್ವತದಲ್ಲಿದ್ದಿತು. ಇದರಲ್ಲಿ ವಾಸಿಸುವ ಯತಿಗಳ ಆಶೀರ್ವಾದ ಪಡೆದು, ಅವರೊಂದಿಗೆ ಸಮಾಲೋಚನೆ ಮಾಡುವ ಮೂವತ್ತು ದೇವತೆಗಳ ಆವಾಸಸ್ಥಾನವಾಗಿ ೩೦ ತೀರ್ಥಗಳನ್ನು ಹೊಂದಿದ್ದು ಜಗತ್ತಿನ ಪಾಪನಾಶಿಯಾಗಿ ಶುಭಕರವಾಗಿದ್ದಿತು. ಇಲ್ಲಿ ದೇವಪೂಜೆ, ನದೀಪೂಜೆ ಮಾಡಿ ದೇವರಿಗೆ ದಾನ ನೀಡುತ್ತಿದ್ದರು. ವಿಪ್ರನಾರಾಯಣದಲ್ಲಿ ಎಲೆಕಾರರು (ಪನ್ನವರ್ಣ್ಣದವರು) ಹೇರಿಗೆ ನೂರು ಎಲೆಯನ್ನು, ಅಂದಳಕ್ಕೆ ೫೦ ಎಲೆಯನ್ನು ಬಿಟ್ಟು ಶಾಸನವನ್ನು ಬರೆಯಿಸಿರುವರು ಈ ಸ್ಥಾನವು ನೈಷ್ಠಿಕ ಸ್ಥಾನವಾಗಿದ್ದು ಮೋರಖಂಡಿಯ ಜಾದಿನಮಠವಾಗಿತ್ತು.

ಶಾಸನದ ಸಂಖ್ಯೆ : ೧೧

ಗ್ರಾಮ : ಹೊಸೂರು

ಸ್ಥಳ : ಹೊಸೂರಮ್ಮ ದೇವಸ್ಥಾನದ ಬಲಗಡೆಯ ದ್ವಾರಪಾಲ ವಿಗ್ರಹದ ಪಕ್ಕದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲೆ

ಲಿಪಿ ಮತ್ತು ಭಾಷೆ : ಸಂಸ್ಕೃತ ಮತ್ತು ಕನ್ನಡ

ವರದಿ/ಪ್ರಕಟಣೆ : (ಆ್ಯರಿಸೌಇಎ), ೧೯೨೨-೨೩, ಸಂ.೧೯೨೨ರ ೬೮೮

ಕಾಲ : ಶಕ ೧. ೫,ವಿಜಯ, ಶ್ರಾವಣ ಬ.೧೦

ಮಾದಿನಾಯಕನು ಹೊಸೂರಿನ ಮಹಾಮಾಯಿ ದೇವತೆಗೆ ನೈವೇದ್ಯ ಮುಂತಾದವುಗಳಿಗೆ ಬ್ರಾಹ್ಮಣ ಚಿತವಾಡಿ ಸೀಮೆಯ ಕೆಂಪು ಗ್ರಾಮಗಳಲ್ಲಿ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಶಾಸನದ ಸಂಖ್ಯೆ : ೧೨

ಗ್ರಾಮ : ಹೊಸೂರು

ಸ್ಥಳ : ಅದೇ ದೇವಸ್ಥಾನದ ಮುಖ ಮಂಟಪದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ

ಲಿಪಿ ಮತ್ತು ಭಾಷೆ : ಸಂಸ್ಕೃತ ಮತ್ತು ಕನ್ನಡ

ವರದಿ/ಪ್ರಕಟಣೆ : ಆ್ಯರಿಸೌಇಎ, ೧೯೨೨-೨೩, ಸಂ.೧೯೨೨ರ ೬೮೯

ಕಾಲ : ಕ್ರಿ.ಶ. ೧೫೧೩ನೇ ಶತಮಾನ

ಗೌರ-ದಣಾಯಕನ ಮಗ ಬಸವಪ್ಪ ಮತ್ತು ಉಪಪ್ರಧಾನ ಸೋಮರಸರು (ಅರಸ) ಕೃಷ್ಣರಾಯನಿಗೆ ಪುಣ್ಯವಾಗಲೆಂದು ಹೊಸೂರಿನ ಏಕ್ಕನಾಥ ದೇವಿಗೆ ದಾನ ನೀಡಿದ್ದನ್ನು ದಾಖಲಿಸಿದೆ.

ಶಾಸನದ ಸಂಖ್ಯೆ : ೧೩

ಗ್ರಾಮ : ಹೊಸೂರು

ಸ್ಥಳ : ಅದೇ ದೇವಸ್ಥಾನದ ಮುಖ ಮಂಟಪದ ಕಂಬದ ಮೇಲೆ

ಲಿಪಿ ಮತ್ತು ಭಾಷೆ : ಸಂಸ್ಕೃತ ಮತ್ತು ಕನ್ನಡ

ವರದಿ/ಪ್ರಕಟಣೆ : ಆ್ಯರಿಸೌಇಎ, ೧೯೨೨-೨೩, ಸಂ೧೯೨೨ರ ೬೯೦

ಕಾಲ : ಕ್ರಿ.ಶ. ೧೬೪೩, ಜುಲೈ ೧೩

ತ್ರುಟಿತ. ಕೃಷ್ಣರಾಯನ ಕಾಲದಲ್ಲಿ ಹೊಸೂರಮ್ಮನ ದೇವಸ್ಥಾನದ ಆಸ್ಥಾನಿಕರು ಒಬ್ಬ ವ್ಯಕ್ತಿಗೆ ಮಾನ್ಯವಾಗಿ ನೀಡಿದ ಭೂಮಿ ಮತ್ತು ಹಣದ ದಾನವನ್ನು ನವೀಕರಿಸಿದ್ದನ್ನು ತಿಳಿಸುತ್ತದೆ.

ಶಾಸನದ ಸಂಖ್ಯೆ : ೧೪

ಗ್ರಾಮ : ಹೊಸೂರು

ಸ್ಥಳ : ಅದೇ ದೇವಸ್ಥಾನದ ಮುಖ ಮಂಟಪದ ಕಂಬದ ಮೇಲೆ

ಲಿಪಿ ಮತ್ತು ಭಾಷೆ : ಸಂಸ್ಕೃತ ಮತ್ತು ಕನ್ನಡ

ವರದಿ/ಪ್ರಕಟಣೆ : ಆ್ಯರಿಸೌಇಎ, ೧೯೨೨-೨೩, ಸಂ.೧೯೨೨ರ ೬೯೧

ಕಾಲ : ಕ್ರಿ.ಶ.

ಹೊಸೂರಿನ ಮಹಾಮಾಯಿ ದೇವಿಯ ದೇವಸ್ಥಾನದ ಸ್ಥಾನಿಕರು ವಿಜಯನಗರದ ಕಟಿಕಮ್ ಮಲ್ಲಯ್ಯನಿಗೆ ದೇವಿಯ ಸಿಂಹದ ರಥದ ಅಲಂಕಾರಿಕ ಚಿಲಿವಾಣ್ಯ ಕೆಲಸ ಮಾಡಿದ್ದಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಶಾಸನದ ಸಂಖ್ಯೆ	:	೧೫
ಗ್ರಾಮ	:	ಹೊಸೂರು
ಸ್ಥಳ	:	ಗ್ರಾಮದ ತುಂಗಭದ್ರ ನದಿಯ ದಂಡೆಯ ಮೇಲಿನ ಬಂಡೆಯ ಮೇಲೆ
ಲಿಪಿ ಮತ್ತು ಭಾಷೆ	:	ಸಂಸ್ಕೃತ ಮತ್ತು ಕನ್ನಡ
ವರದಿ/ಪ್ರಕಟಣೆ	:	ಎ್ಯರಿಸೌಇಎ, ೧೯೨೨-೨೩, ಸಂ.೧೯೨೨ರ ೬೯೨
ಕಾಲ	:	ಕ್ರಿ.ಶ. ೧೪೦೬ ಏಪ್ರಿಲ್ ೭ ಗುರುವಾರ

ತ್ರುಟಿತ. ಕೆಲವು ಬ್ರಾಹ್ಮಣರು ಪ್ರಸನ್ನ ರಾಮದೇವರಿಗೆ ನಂದಾದೀಪ ಉರಿಸಲು ವ್ಯವಸ್ಥೆ ಮಾಡಿದ್ದನ್ನು ತಿಳಿಸುತ್ತದೆ.

(ಎರಿಸೌಇಎ ಆ್ಯನುವಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಾಫಿ)

ವೀರಗಲ್ಲು ಶಾಸನಗಳು

ಮೂಲತಃ ಸಂಸ್ಕೃತ ಭಾಷೆಯ ಪದವಾದ ಈ 'ವೀರ' ಎಂಬುದು ಅನೇಕ ಇಂಡೋ-ಆರ್ಯನ್ ಭಾಷೆಗಳಲ್ಲಿ ಬಳಕೆಯಲ್ಲಿರುವುದಾಗಿ ತಿಳಿದುಬಂದಿದೆ. ಈ ಪದವು ವ್ಯಕ್ತಿಯ ಪರಾಕ್ರಮ, ಶಕ್ತಿ ಮುಂತಾದ ಅವನ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ (ಆರ್.ಶೇಷಾಶಾಸ್ತ್ರಿ, ೧೯೮೨, ಪು:೩೦).

ವೀರಗಲ್ಲು ವೀರರ ನೆನಪಿಗೆ ನಿಲ್ಲಿಸಿದ ಶಾಸನ. ಕರ್ನಾಟಕದಲ್ಲಿ ವೀರಗಲ್ಲುಗಳ ಸಂಖ್ಯೆ ಅಧಿಕವಾಗಿದೆ. ಇವುಗಳ ಶಿಲ್ಪವನ್ನು ಶಾಸನಸಹಿತ ಶಿಲ್ಪ ಮತ್ತು ಶಾಸನರಹಿತ ಶಿಲ್ಪವೆಂದು ಎರಡು ಭಾಗ ಮಾಡಬಹುದು. ಶಾಸನವಿರಲಿ ಇಲ್ಲದಿರಲಿ ಆ ವೀರಗಲ್ಲಿನ ಉದ್ದೇಶ ಒಂದೇ ಆಗಿರುತ್ತದೆ. ಈ ವೀರಗಲ್ಲುಗಳ ವಿಷಯ ಮತ್ತು ಅವುಗಳ ಮೇಲಿರುವ ಶಿಲ್ಪದ ಆಧಾರದಿಂದ ಹಲವು ವಿಧವಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು. ವ್ಯಕ್ತಿ ವ್ಯಕ್ತಿಗಳ ಹೋರಾಟ ಶಿಲ್ಪ, ಪ್ರಾಣಿ ಪ್ರಾಣಿಗಳ ಹೋರಾಟಶಿಲ್ಪ, ವ್ಯಕ್ತಿ ಪ್ರಾಣಿಗಳ ಹೋರಾಟ ಶಿಲ್ಪ, ಮತ್ತು ವೀರಸ್ತಂಭಗಳ ಶಿಲ್ಪ ಎಂದು ನಾಲ್ಕು ಮುಖ್ಯ ಭಾಗಗಳಲ್ಲಿ ಇಲ್ಲಿ ಚರ್ಚಿಸಲಾಗಿದೆ.

ವ್ಯಕ್ತಿ-ವ್ಯಕ್ತಿಗಳ ಹೋರಾಟ ಶಿಲ್ಪ

ವ್ಯಕ್ತಿ-ವ್ಯಕ್ತಿಯೊಡನೆ ಹೋರಾಡುತ್ತಿರುವ ಶಿಲ್ಪ ಎಂದರೆ ತನ್ನ ಪ್ರಾಣ ರಕ್ಷಣೆಗಾಗಿಯೊ ಅಥವಾ ಆಸ್ತಿ, ಸ್ತ್ರೀ ದನ-ಕರುಗಳ ರಕ್ಷಣೆಗಾಗಿಯೊ ಶತ್ರುಗಳ ಜೊತೆ ಹೋರಾಡುತ್ತಿರುವುದನ್ನು ಸೂಚಿಸುವ ಶಿಲ್ಪಗಳು. ಇವನ್ನು ಅಧ್ಯಯನದ ದೃಷ್ಟಿಯಿಂದ ತುರುಗೋಳ್ ಶಿಲ್ಪ, ಪೆಣ್ಬುಯಲ್ ಶಿಲ್ಪ, ಊರಳಿವು ಶಿಲ್ಪ, ಗಡಿಕಾಳಗ ಶಿಲ್ಪ ಮತ್ತು ಕಳ್ಳೊಡನೆ ಹೋರಾಟದ ಶಿಲ್ಪ ಎಂದು ಐದು ವಿಧವಾಗಿ ವಿಂಗಡಿಸಬಹುದು (ಡಿ.ವಿ.ಪರಮಶಿವಮೂರ್ತಿ, ೧೯೯೯, ಪುಟ:೭೭).

ತುರುಗೋಳ್ : ರನ್ನ ಕವಿಯು ತನ್ನ ಗದಾಯುದ್ಧ ಕೃತಿಯಲ್ಲಿ ಈ ಕೆಳಗಿನಂತೆ ಹೇಳುತ್ತಾನೆ.

ತುಱುಗೋಳೊಳ್ ಪೆಣ್ಬುಯ್ಯಲೊ
ಳೆಱೆವೆಸದೊಳ್ ನಂಟನೆಡಱೊಳೂರಟೆವಿನೊಳಂ
ತಱೆಸಂದು ಗಂಡುತನಮನೆ
ನೆಱಪದವಂ ಗಂಡನಲ್ಲನೆಂತುಂ ಷಂಡಂ

ಈ ಮೇಲಿನ ಪದ್ಯದ ಆಧಾರದಿಂದ ಆ ಕಾಲದಲ್ಲಿ ತುರುಗಳನ್ನು ರಕ್ಷಿಸುವುದು, ಸ್ತ್ರೀಯರ ಮಾನ ಕಾಪಾಡುವುದು, ಊರುಗಳನ್ನು ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ತಿಳಿದು ಬರುತ್ತದೆ. ಯಾವ ಕಾರಣದಿಂದಲಾದರೂ ಶತ್ರುಗಳು ದನಗಳನ್ನು ಅಪಹರಿಸಿದಾಗ ಆ ದನಗಳನ್ನು ರಕ್ಷಿಸಿಕೊಳ್ಳಲು ಪ್ರಾಣವನ್ನೂ ಲೆಕ್ಕಿಸದೆ ಹೋರಾಡುತ್ತಿದ್ದರು. ಆ ಹೋರಾಟದಲ್ಲಿ ಕೆಲವರು ಗೆದ್ದು ಹಿಂತಿರುಗಿ ಬಂದರೆ ಮತ್ತೆ ಕೆಲವರು ಸಾವನ್ನಪ್ಪುತ್ತಿದ್ದರು. ಇಂತಹ ವೀರರ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲುಗಳನ್ನು ನಾವು ಸುಲಭವಾಗಿ ಗುರುತಿಸಬಹುದು. ವೀರಗಲ್ಲುಗಳ ಹೋರಾಟದ ಹಂತದ ಶಿಲ್ಪದಲ್ಲಿ ಯಾವುದಾದರೂ ಒಂದು ಕಡೆ ಕೆಲವು ದನಗಳು ನಿಂತಿರುವಂತೆ ಚಿತ್ರಿಸಿರುತ್ತಾರೆ. ಆರಂಭ ಕಾಲದ ವೀರಗಲ್ಲುಗಳಲ್ಲಿ ವೀರನ ಸಮೀಪ ಸಣ್ಣದಾಗಿ ದನಗಳ ಚಿತ್ರವನ್ನು ಬಿಡಿಸುವ ಪದ್ಧತಿಯಿದ್ದು, ಒಂದೇ ಹಂತದಲ್ಲಿ ಶಿಲ್ಪವಿರುತ್ತಿತ್ತು. ನಂತರದ ಕಾಲದ ವೀರಗಲ್ಲುಗಳಲ್ಲಿ ಎರಡರಿಂದ ನಾಲ್ಕು ಹಂತದವರೆಗೆ ಶಿಲ್ಪವಿದ್ದು ಹೋರಾಟದ ಹಂತದಲ್ಲಿ ದನಗಳು ಸಾಲಾಗಿ ನಿಂತಿರುವಂತೆ ಬಿಡಿಸಲಾಗಿರುತ್ತದೆ.

ಬೇಗೂರಿನ ವೀರಗಲ್ಲಿನಲ್ಲಿ ವೀರನನ್ನು ಒಂದು ಚೌಕಟ್ಟಿನಲ್ಲಿ ಚಿತ್ರಿಸಿ, ದನಗಳನ್ನು ಆ ಚೌಕಟ್ಟಿನಿಂದ ಹೊರಗೆ ಬಿಡಿಸಲಾಗಿದೆ. ಇಲ್ಲಿನ ವೀರನಿಗೆ ತಲೆಯಿಂದ ಕಾಲ ಮಂಡಿಯವರೆಗೂ ಬಾಣಗಳು ಚುಚ್ಚಿರುವಂತೆ ಚಿತ್ರಿಸಲಾಗಿದ್ದು, ಆತನ ಒಂದು ಕೈಯಲ್ಲಿ ಬಿಲ್ಲು, ಮತ್ತೊಂದು ಕೈಯಲ್ಲಿ ಚೂರಿಯಿದೆ. ಸಾಲಾಗಿ ಚಿತ್ರಿಸಿರುವ ದನಗಳಲ್ಲಿ ಹಿಂದಕ್ಕೆ ತಿರುಗಿ ಹೊರಟಿವೆ. ನಗರಗೆರೆಯ ಒಂದು ವೀರಗಲ್ಲಿನಲ್ಲಿ ವೀರನನ್ನು ದೊಡ್ಡದಾಗಿ ಚಿತ್ರಿಸಿ, ಅವನ ಪಕ್ಕದಲ್ಲಿ ದನಗಳನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ವೀರನು ಕೈಯಲ್ಲಿ ಉದ್ದವಾದ ಭರ್ಜಿಯನ್ನು ಹಿಡಿದಿದ್ದು ಅವನ ಮೈಗೆಲ್ಲ ಶತ್ರುಗಳು ಪ್ರಯೋಗ ಮಾಡಿದ ಬಾಣಗಳು ನಾಟಿಕೊಂಡಿವೆ. ಹೆಡಗೇನಹಳ್ಳಿಯ ಒಂದು ವೀರಗಲ್ಲಿನ ತಳಭಾಗದ ಬಲ ಮೂಲೆಯಲ್ಲಿ ಎರಡು ದನಗಳು ಹಿಂತಿರಿಗಿ ಹೊರಟಿವೆ. ವೀರನು ಬಿಲ್ಲು ಹಾಗೂ ಚೂರಿಯನ್ನು ಹಿಡಿದು ಹೋರಾಡುತ್ತಿದ್ದಾನೆ (ಡಿ.ವಿ.ಪರಮಶಿವಮೂರ್ತಿ, ೧೯೯೯, ಪು:೭೮). ಕರ್ನಾಟಕದ ಪ್ರತಿಯೊಂದು ವೀರಗಲ್ಲುಗಳ ಪಾಠದ ಕೊನೆಯಲ್ಲಿ ನಾಂದಿ ಶ್ಲೋಕ ಇರುತ್ತದೆ. ಈ ಶ್ಲೋಕ ಈ ಕೆಳಗಿನಂತಿದೆ.

"ಜಿತೇನ ಲಭ್ಯತೇ ಲಕ್ಷ್ಮೀಮೃತೇನಾಪಿ ಸುರಾಂಗನಾ ಕ್ಷಣ ವಿಧ್ವಂಸೆ ನೀ ಕಾಯೇ ಕಾಚಿಂತಾ ಮೆರಣೇ ರಣೇ" (ಆರ್.ಶೇಷಶಾಸ್ತ್ರಿ, ೧೯೮೨, ಪುಟ:೨೭).

ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ ದೊರಕುವಳು ಸತ್ತರೆ ಸ್ವರ್ಗದಲ್ಲಿ ಸುರಾಂಗನೆಯರು ದೊರಕುವರು. ದೇಹವು ಕ್ಷಣದಲ್ಲಿ ವಿಧ್ವಂಸವಾಗುವ ವಸ್ತುವಾದ್ದರಿಂದ ರಣರಂಗದಲ್ಲಿ ಮಡಿಯುವ ವಿಷಯದಲ್ಲಿ ಚಿಂತೆ ಏಕೆ? ಈ ಭಾವನೆಗಳಿಂದ ಉತ್ತೇಜನಗೊಂಡು ಅವರು ಧೈರ್ಯದಿಂದ ರಣರಂಗದಲ್ಲಿ ಮುನ್ನುಗ್ಗಿ, ದೇಹವನ್ನು ಹುಲ್ಲಿಗಿಂತ ಕಡೆಯಾಗಿ ಎಣಿಸಿ ಹೋರಾಡಿ, ಗೆದ್ದು ಹಿಂದಕ್ಕೆ ಬರುತ್ತಿದ್ದರು ಸೋತು ಯುದ್ಧರಂಗದಲ್ಲಿ ಒರಗುತ್ತಿದ್ದರು. ಇದು ಇವರ ಧೈರ್ಯ, ದೇಶಕ್ಕಾಗಿ, ಒಡೆಯನಿಗಾಗಿ ಅವರು ತೋರಿಸಿದ ಮಹಾತ್ಯಾಗವನ್ನು ತೋರಿಸುತ್ತದೆ.

ಬೇಗೂರಿನ ಮತ್ತೊಂದು ವೀರಗಲ್ಲಿನ ಕೆಳಹಂತದಲ್ಲಿ ಎರಡು ಸಾಲು ದನಗಳ ಚಿತ್ರಣವಿದೆ. ಮೇಲಿನ ಸಾಲ್ಲಿನಲ್ಲಿ ಎರಡು ದನಗಳು, ಎರಡು ಎಮ್ಮೆಗಳಿವೆ. ಕೆಳಗಿನ ಸಾಲಿನಲ್ಲಿ ಮೂರು ದನಗಳ ಚಿತ್ರಣವಿದೆ. ಈ ಚಿತ್ರಗಳಿಂದ ಶತ್ರುಗಳು ಎಮ್ಮೆಗಳನ್ನೂ ಅಪಹರಿಸುತ್ತಿದ್ದರೆಂದು ತಿಳಿದು ಬರುತ್ತದೆ. ಮಧ್ಯದ ಹಂತವನ್ನು ಎರಡು ಭಾಗಗಳಾಗಿ ಮಾಡಿ ಒಂದೊಂದು ಭಾಗದಲ್ಲಿ ಒಬ್ಬಬ್ಬ ವೀರ ಹೋರಾಡುತ್ತಿರುವಂತಿದೆ. ಎರಡನೆ ಹಂತದಲ್ಲಿ ಇಬ್ಬರು ವೀರರೂ ಅಪ್ಸರೆಯರೊಡನೆ ಕುಳಿತಿದ್ದಾರೆ. ಮೇಲೆ ವಿವರಿಸಿದ ಯಾವ ವೀರಗಲ್ಲಿನಲ್ಲಿಯೂ ಶತ್ರುಗಳ ಚಿತ್ರಣವಿಲ್ಲ. ಕೇವಲ ವೀರರು ಮತ್ತು ದನಗಳ ಶಿಲ್ಪ ಮಾತ್ರವಿದೆ. ಹೊಸಹೊಳಲಿನ ಒಂದು ಶಾಸನ ಪಠ್ಯದಲ್ಲಿ ವೀರನು ಎಮ್ಮೆಗಳನ್ನು ಶತ್ರುಗಳಿಂದ ಬಿಡಿಸಿದ ವಿಷಯವಿದೆ. ಪ್ರಸ್ತುತ ಹುಲಿಗಿ ಪರಿಸರಸಕ್ಕೆ ಸಂಬಂಧಿಸಿದ ಕೊಪ್ಪಳ ತಾಲ್ಲೂಕಿನ ಬೂದಿಗುಂಪ ಗ್ರಾಮದಲ್ಲಿ ಎಮ್ಮೆಗಳ ಚಿತ್ರಣವಿರುವ ವೀರಗಲ್ಲೊಂದು ದೊರೆಕಿದೆ (ಡಿ.ವಿ.ಪರಮಶಿವಮೂರ್ತಿ, ೧೯೯೯, ಪುಟ:೭೯).

ವೀರನ ಪರಾಕ್ರಮವನ್ನು ಮೆಚ್ಚಿ ವೀರಗಲ್ಲುನ್ನು ನಡೆಯುವುದು, ಲೌಕಿಕ ಉದ್ದೇಶವಾಗಿದ್ದರೆ, ಮಡಿದ ವೀರನಿಗೆ ವೀರಗಲ್ಲನ್ನು ನಿಲ್ಲಿಸುವುದು ತಮ್ಮ ಕರ್ತವ್ಯ ಎಂದು ಭಾವಿಸಿ ಹಾಗೆ ವೀರಗಲ್ಲು ನಿಲ್ಲಿಸುವುದರ ಮೂಲಕ ಅವನಿಗೆ ಸ್ವರ್ಗವೋ, ಕೈಲಾಸವೋ, ವೈಕುಂಠವೋ ಪ್ರಾಪ್ತವಾಗುತ್ತದೆ ಎಂಬ ನಂಬಿಕೆಗಾಗಿ ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಇದು ಪರಾಮಾರ್ಥಿಕ ಉದ್ದೇಶವಾಗಿದೆ (ಆರ್.ಶೇಷಶಾಸ್ತ್ರಿ, ೧೯೮೨, ಪುಟ:೭).

ಎಲ್ಲಾ ಮಾಹಿತಿಗಳ ಆಧಾರದ ಮೇಲೆ ಹೇಳುವುದಾದರೆ ವೀರಗಲ್ಲು ನಿಲ್ಲಿಸುವಲ್ಲಿನ ಪ್ರಮುಖ ಉದ್ದೇಶ ವೀರನ ಪರಾಕ್ರಮವನ್ನು ಲೋಕಕ್ಕೆ ತಿಳಿಯುವಂತೆ ಮಾಡಿರುವುದರಿಂದ ಆದ್ದರಿಂದ ಅಂದಿನ ತಲೆಮಾರಿನ ಸಂಸ್ಕೃತಿಯನ್ನು ತಿಳಿಯಬಹುದು (ಆರ್.ಶೇಷಶಾಸ್ತ್ರಿ, ೧೯೮೨, ಪುಟ:೭೨). ವೀರಗಲ್ಲುಗಳ ಮಧ್ಯೆ ಪಟ್ಟಿಕೆಯಲ್ಲಿ ವೀರಗಲ್ಲನ್ನು ನಿಲ್ಲಿಸುವ ಉದ್ದೇಶ, ಸ್ಮರಣಾರ್ಥವಾಗಿ ನಿಲ್ಲಿಸಿದವನ ಹೆಸರು ಬರೆಯಲ್ಪಟ್ಟಿರುತ್ತದೆ. ಪ್ರಸ್ತುತ ಅಧ್ಯಯನ ಹುಲಿಗಿ ಪರಿಸರದ ವೀರಗಲ್ಲುಗಳ ದಾಖಲಾತಿಯನ್ನು ಇಲ್ಲಿ ಮಾಡಲಾಗಿದೆ.

ಹುಲಿಗಿ ಪರಿಸರದ ವೀರಗಲ್ಲುಗಳು

೧.	ಗ್ರಾಮ	:	ಹುಲಿಗಿ
	ಸ್ಥಳ	:	ಹುಲಿಗೆಮ್ಮ ದೇವಾಲಯದ ಸಭಾಮಂಟಪದಲ್ಲಿ
	ವರದಿ/ಪ್ರಕಟಣೆ	:	ವೈ.ಸೋಮಶೇಖರ್
	ಕಾಲ	:	೧೩ನೇ ಶತಮಾನ

ಹುಲಿಗೆಮ್ಮ ದೇವಾಲಯದ ಸಭಾಮಂಟಪದಲ್ಲಿ ಐದು ವೀರಗಲ್ಲುಗಳಿವೆ. ಇವುಗಳಲ್ಲಿ ಮೊದಲನೇ ಎರಡು ವೀರಗಲ್ಲುಗಳು ನಾಗಜೋಗಿ ಬಸವಜೋಗಿ ಎಂದು ಗುರುತಿಸುವರು. ಇವರು ಹುಲಿಗಿಯ ಅಧಿಕಾರಿಗಳಾಗಿದ್ದು, ಇಲ್ಲಿನ ಸೀಳುನಾಲೆಯನ್ನು ನಿರ್ಮಿಸುವಲ್ಲಿ ಪ್ರಮುಖ ಕಾರಣಕರ್ತರೆಂದು ಹೇಳಲಾಗುತ್ತದೆ. ಜೊತೆಗೆ ಇವರು ಶ್ರೀ ಹುಲಿಗೆಮ್ಮನ ಪರಮ ಭಕ್ತರು. ಇವರು ತಮ್ಮ ಕೈಗಳಲ್ಲಿ ಪರಶು ಮತ್ತು ಖಡ್ಗಗಳನ್ನು ಹಿಡಿದಿರುವರು.

೨. ಗ್ರಾಮ : ಹುಲಿಗಿ

ಸ್ಥಳ : ಹುಲಿಗೆಮ್ಮ ದೇವಾಲಯದ ಸಭಾಮಂಟಪದಲ್ಲಿ

ವರದಿ/ಪ್ರಕಟಣೆ : ವೈ.ಸೋಮಶೇಖರ್

ಕಾಲ : ೧೩ನೇ ಶತಮಾನ

ಹುಲಿಗೆಮ್ಮ ದೇವಾಲಯದ ಸಭಾ ಮಂಟಪದಲ್ಲಿ ಮೂರು ವೀರಗಲ್ಲುಗಳು ಜೊತೆಯಲ್ಲಿಯೇ ಇವೆ. ಇವರ ಬಗ್ಗೆ ಯಾವುದೇ ದಾಖಲು ಇಲ್ಲಾ. ಇವರು ಕೈಯಲ್ಲಿ ಪರಶು ಮತ್ತು ಖಡ್ಗಗಳನ್ನು ಹಿಡಿದಿದ್ದಾರೆ.

ಶಾಸನ ಸಂಖ್ಯೆ : (ವೀರಗಲ್ಲು ಸಂಖ್ಯೆ-೩)

೩. ಗ್ರಾಮ : ಶಿವಪುರ

ಸ್ಥಳ : ಪಾಳುಬಸವ ಮಂಟಪದ ಹತ್ತಿರ

ವರದಿ/ಪ್ರಕಟಣೆ : ಅಪ್ರಕಟಿತ

ಕಾಲ : ೧೫ನೇ ಶತಮಾನ

ಶಿವಪುರದ ಪಾಳುಬಸವ ಮಂಟಪದ ಹತ್ತಿರ ಈ ವೀರಗಲ್ಲು ಇದೆ. ಇದರ ಕಾಲ ೧೫ನೇ ಶತಮಾನ ವೀರಗಲ್ಲಿನಲ್ಲಿ ವೀರನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಗುರಾಣಿ ಹಿಡಿದಿದ್ದಾನೆ. ವೀರನು ಕಚ್ಚೆ ಪಂಜೆಯನ್ನು ಧರಿಸದ್ದು, ಕಾಲಲ್ಲಿ ಕಡಗವನ್ನು ಧರಿಸಿ ಮುಡಿಯನ್ನು ಕಟ್ಟಿದ್ದಾನೆ. ಈ ಶಿಲ್ಪದ ಬಲಬದಿಯಲ್ಲಿ ನಾಗಶಿಲ್ಪವೂ ಇದೆ. ಜನ ನಾಗಶಿಲ್ಪ ಜೊತೆಗೆ ಈ ವೀರಗಲ್ಲನ್ನು ಪೂಜೆ ಮಾಡುತ್ತಿದ್ದಾರೆ. ಎಣ್ಣೆ, ಕುಂಕುಮ, ಹೂಗಳನ್ನು ಶಿಲ್ಪದ ಮೇಲೆ ಹಾಕಿ ದೇವರೆಂದು ವೀರಗಲ್ಲನ್ನು ಪೂಜಿಸುತ್ತಾರೆ.

ಮಹಾಸತಿ ಶಾಸನಗಳು

ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯೂ ಕೂಡ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದಳು (ಡಿ.ವಿ.ಪರಮಶಿವಮೂರ್ತಿ, ೧೯೯೯, ಪುಟ:೧೩೮). ಇದು ಅವಳ ಪತಿಭಕ್ತಿಯನ್ನು ತೋರಿಸುವ ಆಚರಣೆಯಾದರೂ ಇದರ ಹಿಂದೆ ಸಾಮಾಜಿಕ ಕಟ್ಟಳೆಗಳು, ಸಂಪ್ರದಾಯಗಳು, ಶೋಷಣೆಯ ಅಂಶಗಳು ಬಲವಾದ ಪ್ರೇರಣೆಯನ್ನು ನೀಡುತ್ತಿದ್ದವು. ಗಂಡನ ಹಿಂದೆಯೇ ಸತಿ ಹೋಗದವಳಿಗೆ ಸಮಾಜದಲ್ಲಿ ಅಷ್ಟಾಗಿ ಗೌರವವಿರಲಿಲ್ಲ. ಅಲ್ಲದೇ ಪ್ರಾಚೀನ ಕಾಲದಲ್ಲಿ ಪತಿಯಿಲ್ಲದೆ ಸತಿಗೆ ಬದುಕು ಹಾಗೂ ರಕ್ಷಣೆಗೆ

ಅನ್ಯಮಾರ್ಗವಿಲ್ಲದೆ ಈ ರೀತಿ ಆಚರಣೆಯನ್ನು ಅನಿವಾರ್ಯವಾಗಿಯಾದರೂ ಆಚರಿಸಬೇಕಾಗಿತ್ತು. ಕರ್ನಾಟಕದ ಮಹಿಳೆಯರು ಈ ಪದ್ಧತಿಯನ್ನು ನಿರಾಕರಿಸಿದ್ದ ಬಗ್ಗೆ ಶಾಸನಗಳಲ್ಲಿ ಎಲ್ಲೂ ಉಲ್ಲೇಖ ದೊರೆಯುವುದಿಲ್ಲ.

ಮಹಾಸತಿ ಶಾಸನ ಶಿಲ್ಪಗಳನ್ನು ಅಧ್ಯಯನ ಮಾಡಲು ಹೊರಟಾಗ ಈ ಆಚರಣೆಯ ಒಳಿತು ಕೆಡುಕುಗಳ ಬಗ್ಗೆ ವಿವೇಚಿಸುವುದು ಎರಡನೆಯ ಮಾತಾಗುತ್ತದೆ. ಅಧ್ಯಯನದ ದೃಷ್ಟಿಯಿಂದ ಮಹಾಸತಿಶಿಲ್ಪಗಳನ್ನು ಮುಖ್ಯವಾಗಿ ಎರಡು ಭಾಗ ಮಾಡಿಕೊಳ್ಳಬಹುದು. ಒಂದು ಸಹಗಮನಶಿಲ್ಪ ಮತ್ತೊಂದು ಅನುಗಮನಶಿಲ್ಪ (ಡಿ.ವಿ.ಪರಶಿವಮೂರ್ತಿ, ೧೯೯೯, ಪುಟ:೧೩೮).

ಸಹಗಮನಶಿಲ್ಪ

ಪತಿಯು ಮಡಿದಾಗ ಅವನ ಶವದ ಜೊತೆಯಲ್ಲಿಯೇ ಬಿದ್ದು ಅಥವಾ ಸಮಾದಿಯಲ್ಲಿ ಹುಗಿಸಿಕೊಂಡು ಪ್ರಾಣ ಬಿಡುತ್ತಿದ್ದ ಆಚರಣೆಯು ಸಹಗಮನವೆನಿಸುತ್ತದೆ. ಈ ರೀತಿಯ ಘಟನೆಗಳನ್ನು ತಿಳಿಸುವ ಶಾಸನ ಶಿಲ್ಪಗಳು ನಮಗೆ ಹೆಚ್ಚು ದೊರೆಯುವುದಿಲ್ಲಾ ಮಾಸ್ತಿಕಲ್ಲುಗಳ ಅಧ್ಯಯನದಲ್ಲಿ ನಮಗೆ ತೊಡಕಾಗುವ ಅಂಶವೆಂದರೆ ಬಹುತೇಕ ಮಾಸ್ತಿಕಲ್ಲುಗಳಲ್ಲಿ ಬರಹವಿಲ್ಲದಿರುವ ಅಂಶವೆ. ಇದರಿಂದಾಗಿ ಆ ಶಾಸನ ಶಿಲ್ಪವು ಅನುಗಮನವೆ ಅಥವಾ ಸಹಗಮನವೆ ಎಂದು ನಿರ್ಧರಿಸಲಾಗುವುದಿಲ್ಲ. ಶಿಲ್ಪದಲ್ಲಿ ಪತಿಯ ಜೊತೆ ಸಾಯುತ್ತಿರುವ ವಿವರಣೆ ಇದ್ದಲ್ಲಿ ಮಾತ್ರ, ಆ ಶಾಸನಗಳು ಸಹಗಮನ ಶಿಲ್ಪಗಳು ಎಂದು ಗುರುತಿಸಬಹುದು. ಹೀಗಾಗಿ ಈ ವಿಭಾಗದಲ್ಲಿ ಸಹಗಮನವೆನ್ನಲು ಸಾಕ್ಷಿಯಿರುವ ಶಾಸನಪಾಠ ಮತ್ತು ಶಿಲ್ಪವನ್ನು ಮಾತ್ರ ಗಮನಿಸಲಾಗಿದೆ.

ಐದು ಮತ್ತು ಆರನೆಯ ಶತಮಾನದ ಕವಡಿ ಗ್ರಾಮದ ಶಾಸನ ಬಹುಶಃ ಕದಂಬ ರವಿವರ್ಮನ ರಾಣಿಯ ಸಹಗಮನವನ್ನು ಸೂಚಿಸುತ್ತಿದ್ದು ಇದು ನಮ್ಮ ನಾಡಿನಲ್ಲಿ ಈ ಪದ್ಧತಿಯನ್ನು ಕುರಿತು ಪ್ರಥಮ ದಾಖಲೆಯಾಗಿದೆ. ಕಳ್ಳರು ಊರನ್ನು ಸೂರೆಗೊಳ್ಳುವಾಗ ಹೋರಾಡಿ ಮಡಿದ ಯೇಚಗೌಡರ ಹೆಂಡತಿ ಸಹಗಮನ ಮಾಡುತ್ತಾಳೆ. ರಾಮಗವುಡ ಮತ್ತು ಬೊಮ್ಮಕ್ಕ, ಭಯಿರಗವುಡ ಮತ್ತು ಬಯಿರಗವುಡಿ, ಬೊಮ್ಮಂಣ ಮತ್ತು ನಾಗಾಯಿ, ನಾಗಂಣನಾಯಕ ಮತ್ತು ಅವನ ಹೆಂಡತಿ, ನಾಗಮ್ಮ ಮತ್ತು ಅವಳ ಪತಿ ಹಾಗೂ ಮತ್ತಿಬ್ಬರು ಸಹಗಮನವನ್ನು ಕೈಗೊಂಡ ಉಲ್ಲೇಖಗಳಿವೆ.

ಸಸ್ಸಾಪುರದ ಮಾಸ್ತಿಶಿಲ್ಪದಲ್ಲಿ ಅಪರೂಪದ ಸಹಗಮನ ಚಿತ್ರವಿದೆ. ಮಾಸ್ತಿ ಶಿಲೆಯ ತಳಭಾಗದಲ್ಲಿ ನಾಲ್ಕು ಯಾಳಿಯ ಮುಖಗಳನ್ನು ಚಿತ್ರಿಸಲಾಗಿದೆ. ಅದರ ಮೇಲೆ ವೃತ್ತಾಕಾರದ ಸಮಾಧಿ ಗುಂಡಿಯಲ್ಲಿ ಮಡಿದ ವೀರ ಮತ್ತು ಅವನ ಹೆಂಡತಿ ಮಲಗಿದ್ದಾರೆ. ಇಲ್ಲಿ ಸತಿಯು ಮಲಗಿದ್ದಲ್ಲಿಯೇ ತನ್ನ ಬಲಗೈಯನ್ನು ಮೇಲೆತ್ತಿ ಜನರನ್ನು ಹರಸುತ್ತಿರುವಳು. ಸಮಾಧಿಯ ಮೇಲ್ಭಾಗದಲ್ಲಿ ಕಂಬದಿಂದ ಹೊರಟ ತೋಳನ್ನು ಬಿಡಿಸಲಾಗಿದೆ. ಕಂಬದ ಹಿಂಭಾಗದಲ್ಲಿ ಕುದುರೆಯ ಮೇಲಿರುವ ವೀರನನ್ನು, ಅವನನ್ನು ಇರಿಯುತ್ತಿರುವ

ಇಬ್ಬರು ಶತ್ರುಗಳನ್ನು ಬಿಡಿಸಲಾಗಿದೆ. ನಂತರದ ಹಂತದಲ್ಲಿ ಶಿವಲಿಂಗ ಮತ್ತು ಭಕ್ತಿಯಿಂದ ಕುಳಿತ ಸತಿ ಪತಿಯನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಮತ್ತೊಂದು ವೈಶಿಷ್ಟವೆಂದರೆ ವೀರನ ಕುದುರೆಯ ಶಿಲ್ಪದ ಕೆಳಭಾಗದಲ್ಲಿ ಚೌಕಟ್ಟನ್ನು ಬಿಡಿಸುವುದರ ಮೂಲಕ ಕೋಟೆಯನ್ನು ಚಿತ್ರಿಸಲಾಗಿದೆ. ಅದರ ಮುಂದೆ ವ್ಯಕ್ತಿಯೊಬ್ಬ ನಿಂತಿರುವಂತಿದೆ. ಕೋಟೆಕಾಳಗದಲ್ಲಿ ಮಡಿದ ಪತಿಯ ಜೊತೆಯಲ್ಲಿಯೇ ಅವನ ಹೆಂಡತಿಯೂ ಸಮಾಧಿಮರಣ ಹೊಂದಿದ ಘಟನೆಯನ್ನು ಈ ಶಾಸನಶಿಲ್ಪ ಬಹು ಸಮರ್ಥವಾಗಿ ತಿಳಿಸುತ್ತಿದೆ.

ಅನುಗಮನ ಶಾಸನ ಶಿಲ್ಪ

ಶಾಸನ ಶಿಲ್ಪಗಳಲ್ಲಿ ಸಹಗಮನವನ್ನು ಸೂಚಿಸುವ ಶಿಲ್ಪವಾಗಲೀ, ಅಥವಾ ಪಾಠವಾಗಲಿ, ಇಲ್ಲದಿದ್ದ ಪಕ್ಷದಲ್ಲಿ ಇಂತಹ ಶಾಸನ ಶಿಲ್ಪಗಳನ್ನು ಅನುಗಮನ ಶಿಲ್ಪಗಳು ಎಂದು ಭಾವಿಸಿ ಈ ಉಪವಿಭಾಗದಲ್ಲಿ ಚರ್ಚಿಸಲಾಗಿದೆ. ಅನುಗಮನವೆಂದರೆ ದೂರದಲ್ಲೆಲ್ಲೋ ತನ್ನ ಪತಿ ಮಡಿದ ವಾರ್ತೆಯನ್ನು ಕೇಳಿದ ನಂತರ ಸತಿಯು ಮಹಾಸತಿಯಾಗುವುದು. ಅನುಗಮನ ಶಾಸನಶಿಲ್ಪಗಳನ್ನು ಪೂರ್ವ ಸತಿಶಿಲ್ಪ, ಪೂರ್ವಸತಿ ಮತ್ತು ಇತರರ ಶಿಲ್ಪ, ಇಬ್ಬರು ಸತಿಯರ ಪೂರ್ಣಶಿಲ್ಪ ಮತ್ತು ಇತರರ ಶಿಲ್ಪ, ವೀರಮಾಸ್ತಿಶಿಲ್ಪ, ಹಂತಗಳಿರುವ ವೀರಮಾಸ್ತಿಶಿಲ್ಪ, ಒಕ್ಕೈ ಮಾಸ್ತಿಶಿಲ್ಪ, ಇಕ್ಕೈ ಮಾಸ್ತಿಶಿಲ್ಪ, ಬಹುಕೈ ಮಾಸ್ತಿಶಿಲ್ಪ ಎಂದು ಹಲವು ರೀತಿಯಾಗಿ ವಿಭಾಗಿಸಲಾಗಿದೆ.

ಪೂರ್ಣಸತಿಶಿಲ್ಪ

ಪೂರ್ಣ ಸತಿಶಿಲ್ಪವೆಂದರೆ ಶಾಸನ ಫಲಕದಲ್ಲಿ ಕೇವಲ ಮಹಿಳೆಯೊಬ್ಬಳ ಚಿತ್ರ ಮಾತ್ರ ಇರುತ್ತದೆ. ಇಲ್ಲಿ ಬೇರೆ ಇನ್ನ್ಯಾರ ಶಿಲ್ಪವೂ ಇರುವುದಿಲ್ಲ. ಹೀಗಾಗಿ ಇದು ನೋಡಲು ದೇವತೆಯ ಮೂರ್ತಿಯಂತೆ ಕಾಣುತ್ತದೆ. ಆದರೆ ಎಡಕೈಯಲ್ಲಿ ಕಮಂಡಲ ಹಿಡಿದು ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿರುವ ಭಂಗಿಯಲ್ಲಿರುತ್ತದೆ.

ಅಬ್ಬಲೂರಿನ ಕೆರೆಯ ಬಳಿ ಈ ರೀತಿಯ ಶಿಲ್ಪವಿದೆ. ಇದರ ಕಾಲ ಕ್ರಿ.ಶ.ಸು.೧೧ನೇ ಶತಮಾನವಾಗಿದ್ದು, ನಾಲ್ಕು ಅಡಿ ಎತ್ತರವಿದೆ. ನೆಟ್ಟಗೆ ನಿಂತಿರುವ ಮಹಾಸತಿಯು ಎಡಗೈಯಲ್ಲಿ ಕಮಂಡಲವನ್ನು ಹಿಡಿದಿದ್ದು, ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿದ್ದಾಳೆ. ಬಲಗೈಯ ಹೆಬ್ಬೆರಳ ನಡುವೆ ಒಂದು ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಕಿವಿಗೆ ದೊಡ್ಡ ರಿಂಗುಗಳನ್ನು, ಹಣೆಸರ, ಕಂಠಿಹಾರ, ಕೊರಳ ಹಾರಗಳನ್ನು ಧರಿಸಿದ್ದಾಳೆ. ಕೊರಳಹಾರ ಬಹಳ ಕಲಾತ್ಮಕವಾಗಿದೆ. ಸೀರೆಯ ನೆರಿಗೆಯು ಸೊಂಟದ ಸುತ್ತಲೂ ಹೂವಿನಂತೆ ಹರಡಿದೆ.

ಕ್ರಿ.ಶ.೧೨ನೇ ಶತಮಾನದ ಹಿರೇ ಅಣಜಿಯ ಒಂದು ಮಾಸ್ತಿಕಲ್ಲು ಬಹಳ ಸುಂದರವಾಗಿದ್ದು, ಸತಿಯು ಹರಸುತ್ತಿರುವ ಕೈ ಸಾಮಾನ್ಯಕ್ಕಿಂತ ಹೆಚ್ಚಾಗಿ ಹಿಂದಕ್ಕೆ ಮಡಚಿಕೊಂಡಿದೆ. ಇದಕ್ಕೆ ಕಾರಣ ಸತಿಯ ಕೈಯನ್ನು ಕೆತ್ತಲು ಸರಿಯಾದ ಸ್ಥಳವಿಲ್ಲದೆ ಶಿಲ್ಪಿ ಈ ರೀತಿ ಮಾಡಿರಬಹುದು. ಕೈಯ ಹೆಬ್ಬೆರಳ ನಡುವೆ ನಿಂಬೆಹಣ್ಣು ಹಿಡಿದಿದ್ದಾಳೆ. ಎಡಕೈಯಲ್ಲಿ ಕಮಂಡಲವಿದೆ. ಕುತ್ತಿಗೆಗೆ ಕಂಠೀಹಾರ ಮತ್ತು ಕೊರಳಿಗೆ ಪದಕ ಹಾರವನ್ನು ಧರಿಸಿದ್ದು, ನಡುವಿಗೆ ದಾವಣಿಯನ್ನು ಮುಡಿದಿರುವಂತೆ ಚಿತ್ರಿಸಲಾಗಿದೆ.

ಹಿರೇಕೋಗಲೂರು ಗ್ರಾಮದ ಮಾಸ್ತಿ ಶಿಲ್ಪದಲ್ಲಿರುವ ಸತಿಯು ಬಹಳ ಸಣ್ಣದಾದ ನಡುವನ್ನು ಹೊಂದಿದ್ದು, ಎದೆ, ಕೊರಳ ತುಂಬ ಆಭರಣಗಳನ್ನು ಧರಿಸಿ ಕೇದಗೆಗರಿಗಳಿಂದ ಅಲಂಕರಿಸಿದ ಕೇಶಗಂಟನ್ನು ಹಾಕಿಕೊಂಡಿದ್ದಾಳೆ. ಸೀರೆಯ ನೆರಿಗೆ ಪಾದದವರೆಗೂ ತೆರೆತೆರೆಯಾಗಿ ಹರಡಿದೆ. ಮಾಸ್ತಿಯ ಕುಂಕುಳ ಭಾಗದಲ್ಲಿ ಎರಡು ರಂಧ್ರಗಳನ್ನು ಮಾಡಲಾಗಿದ್ದು, ಇದಕ್ಕೆ ಕಾರಣ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಸ್ಥಳೀಯರು ಹಬ್ಬ ಹರಿದಿನಗಳಲ್ಲಿ ಮಹಾಸತಿ ಶಿಲ್ಪಕ್ಕೆ ಹೂವಿನಹಾರವನ್ನು ಹಾಕಲು ಅಥವಾ ಸೀರೆ ಇನ್ನಿತರ ಬಟ್ಟೆಯನ್ನು ತೊಡಿಸಲು ಸುಲಭವಾಗಲಿ ಎಂದು ಈ ರೀತಿ ರಂಧ್ರ ಮಾಡಿರಬಹುದು.

ಒಕ್ಕೈ ಮಾಸ್ತಿ ಶಾಸನ

ಕೆಲವು ಶಾಸನಗಳಲ್ಲಿ ಮಹಾಸತಿಯ ಘಟನೆಯನ್ನು ತಿಳಿಸಲು ಸಾಂಕೇತಿಕವಾಗಿ ಕಂಬದಿಂದ ಹೊರಟ ಕೈಯನ್ನು ಚಿತ್ರಿಸಿರುತ್ತಾರೆ. ಇದನ್ನು ತೋಳು ಗೈ, ವ್ಯಾಸನ ತೋಳು, ಒಕ್ಕೈ ಮಾಸ್ತಿ ಮುಂತಾಗಿ ಕರೆಯುತ್ತಾರೆ. ಮಹಾಸತಿಯು ಬೆಂಕಿಯ ಕೊಂಡಕ್ಕೆ ಬೀಳುವಾಗ ಎಲ್ಲರಿಗೂ ತನ್ನ ಬಲಗೈಯನ್ನು ಎತ್ತಿ ಹರಸುತ್ತಿದ್ದಳು. ಅವಳ ಸಾವಿನ ನಂತರ ಅವಳು ಹರಸಿದ ಕೈಯ ರೂಪವನ್ನು ಶಿಲೆಗಳ ಮೇಲೆ ಕೆತ್ತಿ ಅವಳ ಸ್ಮಾರಕವಾಗಿ ನಿಲ್ಲಿಸುತ್ತಿದ್ದರು (ಡಿ.ವಿ.ಪರಮಶಿವಮೂರ್ತಿ, ೧೯೯೯, ಪುಟ:೧೫೭).

ಇಕ್ಕೈಯಿ ಮಾಸ್ತಿ ಶಾಸನ

ಕೆಲವೊಮ್ಮೆ ಮಹಾಸತಿಯರನ್ನು ವೀರನೊಡನೆ ಒಬ್ಬರಿಗಿಂತ ಹೆಚ್ಚು ಸ್ತ್ರೀಯರು ಸಹಗಮನ ಮಾಡಿದ್ದಾರೆ. ಅಷ್ಟು ಜನ ಸ್ತ್ರೀಯರನ್ನು ತನ್ನ ಪತಿಯ ಬಲಗಡೆ ನಿಂತು ಎಡಗೈಯನ್ನು ಎತ್ತಿಸಿರುವ ಚಿತ್ರ ಒಟ್ಟಾರೆ ಮೌಲ್ಯಗಳಿಗೆ ಪಣ ತೊಟ್ಟು ಬದ್ಧರಾಗಿರೆಂಬುದು ಇದು ಪ್ರತಿಬಿಂಬಿಸುತ್ತದೆ (ಚಿದಾನಂದ ಮೂರ್ತಿ ಎಂ., ೧೯೮೪, ಪುಟ:೭೮). ಪ್ರಸ್ತುತ ಹುಲಿಗಿ ಪರಿಸರದ ವೀರಮಹಾಸತಿಗಲ್ಲುಗಳ ದಾಖಲಾತಿ ಇಲ್ಲಿದೆ.

೧.	ಗ್ರಾಮ	:	ಹುಲಿಗಿ
	ಸ್ಥಳ	:	ಸೋಮೇಶ್ವರ ದೇವಾಲಯದ ಆವರಣ
	ವರದಿ/ಪ್ರಕಟಣೆ	:	ವೈ.ಸೋಮಶೇಖರ್
	ಕಾಲ	:	೧೩ನೇ ಶತಮಾನ

ಈ ವೀರಮಾಸ್ತಿಗಲ್ಲು ಐದುವರೆ ಅಡಿಗಳೆತ್ತರದ ಬಂಡೆ ಗಲ್ಲಿನಲ್ಲಿ ಕಡೆಯಲಾಗಿದ್ದು, ಇವುಗಳ ಶಿಲ್ಪ ರಚನೆಯ ಹಿನ್ನಲೆಯಲ್ಲಿ ಒಂದೇ ಕಾಲದಲ್ಲಿ ಕಡೆದವುಗಳಾಗಿವೆ. ಈ ವೀರ ಮಾಸ್ತಿಗಲ್ಲಿನಲ್ಲಿ ದಂಪತಿಗಳಿಬ್ಬರು ನಿಂತಿರುವರು. ವೀರನು ಕೈ ಮುಗಿದು ನಿಂತಿದ್ದಾರೆ, ವೀರನ ಪತ್ನಿಯು ಬಲಗೈಯನ್ನು ಮೇಲಕ್ಕೆ ಎತ್ತಿದ್ದು, ಎಡಗೈಯನ್ನು ಇಳಿ ಬಿಟ್ಟಿರುವಳು ಇವಳು ಮುಡಿಯನ್ನು ಕಟ್ಟಿ,ಮೈ ತುಂಬಾ ನೆರಿಗೆಯುಳ್ಳ ಸೀರೆಯನ್ನು ಉಟ್ಟಿರುವಳು. ಕಿವಿಯಲ್ಲಿ ಕರ್ಣಕುಂಡಲಗಳು, ಕೈಬಳೆ, ತೋಳ್ಬಂದಿ, ಕಾಲ್ಕಡಗ ಹಾಗೂ ಕೊರಳಲ್ಲಿ ಮಾಂಗಲ್ಯವನ್ನು ಧರಿಸಿರುವಳು ವೀರನು ಕಚ್ಚೆ ಪಂಚೆಯನ್ನು ಧರಿಸಿದ್ದು ಕೊರಳಲ್ಲಿ ಹಾರವನ್ನು ಕಾಲಲ್ಲಿ

ಕಡಗವನ್ನು ಧರಿಸಿ ಕೈ ಮುಗಿದು ನಿಂತಿದ್ದಾನೆ. ಇವರಿಬ್ಬರ ಮೇಲ್ಭಾಗದ ಪಟ್ಟಿಕೆಯಲ್ಲಿ ಚಂದ್ರ, ಸೂರ್ಯ ಹಾಗೂ ಮಧ್ಯದಲ್ಲಿ ದೇವಾಲಯದ ಶಿಖರ ಭಾಗವನ್ನು ಕಡೆದಿರುವರು.

೨. ಗ್ರಾಮ : ಹುಲಿಗಿ

ಸ್ಥಳ : ಸೋಮೇಶ್ವರ ದೇವಾಲಯದ ಆವರಣ

ವರದಿ/ಪ್ರಕಟಣೆ : ವೈ.ಸೋಮಶೇಖರ್

ಕಾಲ : ೧೩ನೇ ಶತಮಾನ

ಸೋಮೇಶ್ವರ ದೇವಾಲಯದ ಆವರಣದಲ್ಲಿ ಎರಡನೇಯ ವೀರಗಲ್ಲು ಇದೆ. ಇದರಲ್ಲಿ ದಂಪತಿಗಳಿಬ್ಬರು ನಿಂತ ಭಂಗಿಯಲ್ಲಿದೆ. ವೀರನು ಕೈ ಮುಗಿದು ನಿಂತಿದ್ದರೆ, ವೀರನ ಪತ್ನಿಯು ಬಲಗೈಯನ್ನು ಮೇಲಕ್ಕೆ ಎತ್ತಿದ್ದು, ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಮುಡಿಯನ್ನು ಕಟ್ಟಿ, ಮೊಳಕಾಲಿನವರೆಗೆ ನರಿಗೆಯುಳ್ಳ ಸೀರೆಯನ್ನು ತೊಟ್ಟಿದ್ದಾಳೆ.. ಕಿವಿಯಲ್ಲಿ ಕರ್ಣಕುಂಡಲಗಳು, ಕೈಬಳೆ, ತೋಳ್ಬಂದಿ, ಕಾಲ್ಗಡಗ ಹಾಗೂ ಕೊರಳಲ್ಲಿ ಮಾಂಗಲ್ಯವನ್ನು ಧರಿಸಿದ್ದಾಳೆ ವೀರನು ಕಚ್ಚೆ ಪಂಜೆಯನ್ನು ಧರಿಸಿದ್ದು ಕೊರಳಲ್ಲಿ ಹಾರವನ್ನು ಕಾಲಲ್ಲಿ ಕಡಗವನ್ನು ಧರಿಸಿ ಕೈ ಮುಗಿದು ನಿಂತಿದ್ದಾನೆ. ಇವರಿಬ್ಬರ ಮೇಲ್ಭಾಗದ ಪಟ್ಟಿಕೆಯಲ್ಲಿ ಚಂದ್ರ, ಸೂರ್ಯ ಹಾಗೂ ಮಧ್ಯದಲ್ಲಿ ಶಿವಲಿಂಗವಿದೆ.

೩. ಗ್ರಾಮ : ಅಗಳಕೇರಿ

ಸ್ಥಳ : ಲೋಕೋಪಯೋಗಿ ಇಲಾಖೆಯ ಆವರಣದಲ್ಲಿ

ವರದಿ/ಪ್ರಕಟಣೆ : ಅಪ್ರಕಟಿತ

ಕಾಲ : ೧೬ನೇ ಶತಮಾನ

ಹುಲಿಗಿ ಗ್ರಾಮದ ವಾಯುವ್ಯ ದಿಕ್ಕಿನಲ್ಲಿರುವ ಒಂದು ಹಳ್ಳಿ ಅಗಳಕೇರಿ. ಈ ಗ್ರಾಮದಲ್ಲಿಯೂ ಐತಿಹಾಸಿಕ ಪುರಾವೆಗಳಿವೆ, ಶಾಸನಗಳೂ ದೊರೆತಿವೆ. ಜೊತೆಗೆ ಇಲ್ಲಿ ವೀರಮಹಾಸತಿ ಕಲ್ಲನ್ನು ನಿಲ್ಲಿಸಲಾಗಿದೆ. ಇದರ ಕಾಲ ಕ್ರಿ.ಶ.ಸುಮಾರು ೧೬ನೇ ಶತಮಾನ. ಈ ಶಿಲ್ಪವನ್ನು ಐದುವರೆ ಅಡಿಗಳೆತ್ತರದ ಬಂಡೆಗಲ್ಲಿನಲ್ಲಿ ಕಡೆಯಲಾಗಿದೆ. ಈ ವೀರ ಮಾಸ್ತಿಗಲ್ಲಿನಲ್ಲಿ ದಂಪತಿಗಳಿಬ್ಬರೂ ನಿಂತಿರುವರು. ವೀರನ ಬಲಗೈಯಲ್ಲಿ ಖಡ್ಗ ಇದೆ. ಎಡಗೈ ಮಹಿಳೆಯ ಕೈ ಮೇಲಿದ್ದು, ಪಂಚೆಯನ್ನು ಧರಿಸಿದ್ದಾನೆ. ಕೊರಳಲ್ಲಿ ಹಾರ, ಕಾಲಿಗೆ ಕಡಗ, ವೃತ್ತಾಕಾರದ ಕಿವಿಯೋಲೆ ಧರಿಸಿ, ಮುಡಿ ಕಟ್ಟಿದ್ದಾನೆ. ವೀರನ ಪತ್ನಿಯು ಬಲಗೈಯನ್ನು ಮೇಲಕ್ಕೆ ಎತ್ತಿದ್ದು, ಎಡಗೈಯನ್ನು ಇಳಿಬಿಟ್ಟು, ನಿಂಬೆ ಹಣ್ಣನ್ನು ಕೈಯಲ್ಲಿ ಹಿಡಿದಿರುವುದು ಮಹಾಸತಿಯ ಸಂಕೇತ. ಇವಳು ಮುಡಿಯನ್ನು ಕಟ್ಟಿ, ಮೈ ತುಂಬಾ ನೆರಿಗೆಯುಳ್ಳ ಸೀರೆಯನ್ನು ಉಟ್ಟಿರುವಳು ಕಿವಿಯಲ್ಲಿ ಕರ್ಣಕುಂಡಲ, ಕೈಬಳೆ, ತೋಳ್ಬಂದಿ, ಕಾಲ್ಕಡಗ ಹಾಗೂ ಕೊರಳಲ್ಲಿ ಕಂಠಹಾರ ಧರಿಸಿದ್ದಾಳೆ. ಶಿಲ್ಪದ ಮೇಲ್ಭಾಗದಲ್ಲಿ ಛಾಮರವಿದೆ.

ಇತರೆ ಶಾಸನಗಳು

ಶಾಸನದ ಸಂಖ್ಯೆ : ೧

ಗ್ರಾಮ : ಹುಲಿಗಿ

ಸ್ಥಳ : ನದಿ ದಡದ ಬಂಡೆ ಮೇಲೆ ರೈಲ್ವೆ ಬ್ರಿಡ್ಜ್ ಕೆಳಗೆ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : AR.No-B, 485 of 1959-60 :IK.III. No-247

ಕಾಲ : ೧೩ನೆಯ ಶತಮಾನ

ವಿರೂಪಾಕ್ಷ ಒಡೆಯ ಮತ್ತು ಚಂದ್ರಕಾಂತ ಒಡೆಯನನ್ನು ಈ ಶಾಸನ ಉಲ್ಲೇಖಿಸಿದೆ.

ಶಾಸನದ ಸಂಖ್ಯೆ : ೨

ಗ್ರಾಮ : ಹುಲಿಗಿ

ಸ್ಥಳ : ನದಿ ದಡದ ಬಂಡೆ ಮೇಲೆ ರೈಲ್ವೆ ಬ್ರಿಡ್ಜ್ ಕೆಳಗೆ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : AR.No-B, 484 of 1959-60:IK.III. No-246

ಕಾಲ : ೧೩ನೆಯ ಶತಮಾನ

ವಾಸಪನನ್ನು ಹೆಸರನ್ನು ದಾಖಲಿಸಿದೆ.

ಶಾಸನದ ಸಂಖ್ಯೆ : ೩

ಗ್ರಾಮ : ಶಿವಪುರ

ಸ್ಥಳ : ಮಾರ್ಕಂಡೇಶ್ವರ ದೇವಾಲಯದ ಬಳಿ ನದಿಯ ಬಂಡೆಯಲ್ಲಿನ ಪಾದಗಳ ಬಳಿ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ,

ಕಾಲ : ಕ್ರಿ.ಶ.೧೬ನೇ ಶತಮಾನ

ಈ ಪಾದವನ್ನು ಕಾಶಿವಿಶ್ವನಾಥನ ರುದ್ರಶ್ರೀ ಪಾದವೆಂದು ಕರೆಯಲಾಗಿದೆ.

ಶಾಸನದ ಸಂಖ್ಯೆ : ೪

ಗ್ರಾಮ : ಶಿವಪುರ

ಸ್ಥಳ : ಮಾರ್ಕಂಡೇಶ್ವರ ದೇವಾಲಯದ ಬಳಿ ನದಿಯ ಬಂಡೆಯಲ್ಲಿನ ಪಾದಗಳ ಬಳಿ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ,

ಕಾಲ : ಕ್ರಿ.ಶ.೧೬ನೇ ಶತಮಾನ

ಈ ಸ್ಥಾನದಲ್ಲಿ ಒಂದು ಗಾಯಿತ್ರಿ ಮಂತ್ರ ಮಾಡಿದರೆ ಕೋಟಿಫಲವೆಂದು ಹೇಳಿದೆ. ಕ್ರಿ.ಶ.೧೬ನೇ ಶತಮಾನದ ಲಿಪಿ.

ಶಾಸನದ ಸಂಖ್ಯೆ	:	೫
ಗ್ರಾಮ	:	ಶಿವಪುರ
ಸ್ಥಳ	:	ಗ್ರಾಮದ ಪಾಳು ಬಸವ ದೇವಾಲಯದ ಬಳಿ ದಂಡೆಯ ಮೇಲೆ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ
ಕಾಲ	:	ಕ್ರಿ.ಶ.೧೬ನೇ ಶತಮಾನ

ತ್ರುಟಿತ ವಿಠಲದೇವರ ಹೆಸರು ಹಾಗೂ ಕೆಲವು ಸುಂಕಗಳನ್ನು ಬಿಟ್ಟ ವಿವರ ಈ ಶಾಸನದಲ್ಲಿದೆ.

ಶಾಸನದ ಸಂಖ್ಯೆ	:	೬
ಗ್ರಾಮ	:	ಶಿವಪುರ
ಸ್ಥಳ	:	ಇದರ ಪಕ್ಕದ ಬಂಡೆಯ ಮೇಲಿನ ಶಾಸನ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ
ಕಾಲ	:	ಕ್ರಿ.ಶ.

ತ್ರುಟಿತ ಶಿವಪುರದ ಉಲ್ಲೇಖವಿದೆ.

ಶಾಸನದ ಸಂಖ್ಯೆ	:	೭
ಗ್ರಾಮ	:	ಶಿವಪುರ ಬಳಿ
ಸ್ಥಳ	:	ಶಿವಪುರದ ಬಳಿಯ ಸೋಮನಾಥನ ಬೆಟ್ಟಕ್ಕೆ ಹತ್ತುವ ಮೆಟ್ಟಿಲ ಎಡ ಭಾಗದಲ್ಲಿ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	IK.III.No-254
ಕಾಲ	:	ಕ್ರಿ.ಶ. ೧೫-೧೬ನೇ ಶತಮಾನ

ಮಲ್ಲಿಸೆಟ್ಟಿ ಹೆಂಡತಿ ವಿರುಪಕ್ಕ ಎಂಬುವವಳು ಸೋಮೇಶ್ವರನ ಸೇವೆಯನ್ನು ಮಾಡಿದ್ದನ್ನು ದಾಖಲಿಸಿದೆ. ಇದು ಕ್ರಿಶ.೧೫-೧೬ನೆಯ ಶತಮಾನಕ್ಕೆ ಸೇರಿದೆ.

ಶಾಸನದ ಸಂಖ್ಯೆ : ೮

ಗ್ರಾಮ : ಶಿವಪುರ ಬಳಿ

ಸ್ಥಳ : ಬೆಟ್ಟದ ಮೇಲೆ ಸೋಮನಾಥ ಗುಡಿಯ ಎದುರು ಬಂಡೆಯಲ್ಲಿ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : IK.III.No-251

ಕಾಲ : ಕ್ರಿ.ಶ. ೧೩ನೇ ಶತಮಾನ

ಮಾದವಭಟ್ಟರ ಕುಲಸ್ವಾಮಿ ಸೋಮೇಶ್ವರ ಎಂದು ದಾಖಲಿಸಿದೆ.

ಶಾಸನದ ಸಂಖ್ಯೆ : ೯

ಗ್ರಾಮ : ಶಿವಪುರ

ಸ್ಥಳ : ಮೇಲಿನ ಶಾಸನದ ಎದುರು ಬಂಡೆಯ ಮೇಲೆ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ

ಕಾಲ : ತ್ರುಟಿತವಾಗಿದೆ

ತ್ರುಟಿತ ವಿವರಗಳು ಅಸ್ಪಷ್ಟ.

ಶಾಸನದ ಸಂಖ್ಯೆ : ೧೦

ಗ್ರಾಮ : ಹಿರೇ ಕಾಸನಕಂಡಿ

ಸ್ಥಳ : ರುದ್ರಪ್ಪ ಹುಚ್ಚಪ್ಪನ ಜಮೀನಿನಲ್ಲಿ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ

ಕಾಲ : ನಮೂದಿಸಿಲ್ಲಾ

ಈ ಭೂಮಿಯನ್ನು ಗೌಡರ ಸರ್ವಮಾನ್ಯವೆಂದು ತಿಳಿಸುತ್ತದೆ.

ಶಾಸನದ ಸಂಖ್ಯೆ : ೧೧

ಗ್ರಾಮ : ಅಗಳಕೇರಿ

ಸ್ಥಳ : ಲೋಕೋಪಯೋಗಿ ಇಲಾಖೆಯ ಕ್ಯಾಂಪಿನಲ್ಲಿರುವ ಕಂಬದಲ್ಲಿ

ಲಿಪಿ ಮತ್ತು ಭಾಷೆ : ಕನ್ನಡ

ವರದಿ/ಪ್ರಕಟಣೆ : AR.No-B, 405 of 1964-65; IK.III.No-80

ಕಾಲ : ನಮೂದಿಸಿಲ್ಲಾ

ಕಾಲ ನಮೂದಿತವಲ್ಲದ ಈ ಶಾಸನದಲ್ಲಿ ಗಂಗಾ ಪಂಡಿತರು ಊರ ತಳವಾರಿಕೆ, ನಾಡ ತಳವಾರಿಕೆ ಮತ್ತು ಸತ್ತಿಗೆ ಮಾನ್ಯವಾಗಿ ಆರುಗುಳ ಮಾನ್ಯವನ್ನು ನೀಡಿದ್ದಾರೆಂಬುದನ್ನು ಉಲ್ಲೇಖಿಸಿವೆ.

ಶಾಸನದ ಸಂಖ್ಯೆ	:	೧೨
ಗ್ರಾಮ	:	ಅಗಳಕೇರಿ
ಸ್ಥಳ	:	ಊರಿನ ಉತ್ತರಕ್ಕೆ ಮಂಗಳಪ್ಪನ ಗದ್ದೆಯ ಕಾಲುವೆಯಲ್ಲಿ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	ಕ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ
ಕಾಲ	:	೧೬ನೇ ಶತಮಾನ

ಈ ಶಾಸನದ ಕಾಲ ಕ್ರಿ.ಶ.೧೬ನೆಯ ಶತಮಾನವಾಗಿದ್ದು, ಹುಚಮಲಿನಾಯಕನು ಊರ ತಳವಾರಿಕೆಯನ್ನು ಯಾರೋ ಒಬ್ಬನಿಗೆ ನೀಡಿದ ವಿಷಯವನ್ನು ಉಲ್ಲೇಖಿಸಿದೆ. ಯಾರಿಗೆ ನೀಡಿದನೆಂದು ತಿಳಿಸಿಲ್ಲ.

ಶಾಸನದ ಸಂಖ್ಯೆ	:	೧೩
ಗ್ರಾಮ	:	ಪಂಪಾಸರೋವರ
ಸ್ಥಳ	:	ಪಂಪಾ ಸರೋವರದ ಮೆಟ್ಟಿಲಿಗೆ ಸೇರಿಸಲಾಗಿರುವ ಕಲ್ಲಿನಲ್ಲಿ
ಲಿಪಿ ಮತ್ತು ಭಾಷೆ	:	ಕನ್ನಡ
ವರದಿ/ಪ್ರಕಟಣೆ	:	QJMS.VII.No-1:IK.III.No-45
ಕಾಲ	:	ಕ್ರಿ.ಶ. ೯೮೮

ತ್ರುಟಿತ ಶಕವರ್ಷ ೯೧೦ನೆಯ ಸರ್ವಧಾರಿ, ಮಾರ್ಗಸಿರ, ಸು.೧ ಎಂದಿದ್ದು ಇದು ಕ್ರಿ.ಶ.೧೩.೧೧.೯೮೮ಕ್ಕೆ ಸರಿಹೊಂದುತ್ತದೆ. ಚಾಲುಕ್ಯಾಭರಣ ಶ್ರೀಮದಾಹವಮಲ್ಲದೇವನು ತುಂಗಭದ್ರಾ ತಡಿಯ ಪಂಪೆಯ ಬೀಡಿನಲ್ಲಿದ್ದಂತೆ ಶಾಸನ ತಿಳಿಸುತ್ತದೆ. ಉಳಿದ ವಿವರಗಳು ನಷ್ಟವಾಗಿದೆ.

ಅಧ್ಯಾಯ - ನಾಲ್ಕು

ದೇವಾಲಯಗಳ ವಾಸ್ತುಶಿಲ್ಪ

ಅಧ್ಯಾಯ - ನಾಲ್ಕು

ದೇವಾಲಯಗಳ ವಾಸ್ತುಶಿಲ್ಪ

೪.೧.ಪೀಠಿಕೆ

ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆಯಾಗಿ ನಿಲ್ಲಬೇಕೆಂದೂ, ಒಂದು ಸುರಕ್ಷಿತ ಗೂಡಿನಲ್ಲಿ ವಾಸಿಸಬೇಕೆಂದೂ ಎಂದಿನಿಂದ ಬಯಸಿದನೋ, ಅಂದಿನಿಂದ ತನಗಾಗಿ 'ಮನೆ'ಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ ಸುತ್ತನ್ನು ಗೋಡೆ, ಅದರ ಮೇಲೆ ವಿವಿಧ ಆಕಾರದ ಮುಚ್ಚಿಗೆ, ಮುಂಭಾಗದಲ್ಲಿ ಬಾಗಿಲು, ಅದರ ಮೇಲೆ ಗಾಳಿ ಬೆಳಕು ಬರಲು ಕಮಾನೂ ತೆರವು ಹೀಗೆ ಅವನ ಮನೆ ರೂಪಗೊಂಡಿತ್ತು (ಕೂ.ಸ.ಅರ್ಪಣ, ೧೯೯೯, ಪು:೧).

ಮಾನವ ಮೊದಲು ಹೆಬ್ಬಂಡೆಗಳ ಅಡಿಯಲ್ಲಿ ಕೊಂಚ ಜಾಗವನ್ನಾರಿಸಿದನು. ನಂತರ ಹೆಬ್ಬಂಡೆಗಳ ಅಡಿಯಲ್ಲಿಕೊಂಚ ವಿಶಾಲವಾದ ಸುರಕ್ಷಿತವೆನಿಸುವ ಆಹಾರಾದಿಗಳಿಗೆ ಹತ್ತಿರವೆನಿಸುವ ಜಾಗಕ್ಕೆ ಧಾವಿಸಿದನು ಈ ಗುಹೆಯೇ ಮನೆಯ ಕಲ್ಪನೆಯನ್ನು ಮೂಲವೆನಿಸಿತು. ತದನಂತರ ಮನೆಯ ಸ್ವತಂತ್ರ ಕಲ್ಪನೆ ಗರಿಗೆದರಿದಾಗ ಗುಹೆಯೊಂದಿಗೆ ಕಟ್ಟಡಗಳ ನಿರ್ಮಾಣವೂ ಮೂಡಿಬಂತು.

"ನಿವಾಸಾತ್ ಸರ್ವಭೂತಾನಾಂ ವಾಸ್ತು ರೀತಿ ಶಬ್ದಿತಃ" (ಎಂ.ಎನ್.ಪ್ರಭಾಕರ್, ೨೦೦೦, ಪು:೧).

ಇದು ವಾಸ್ತುಶಿಲ್ಪದ ಪ್ರಾಥಮಿಕ ಹೆಜ್ಜೆ

ಸುತ್ತಲಿರುವ ಪ್ರಕೃತಿಯು ತನ್ನ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸಿರುವುದನ್ನು ಗುರುತಿಸಿದಾಗ ಮಾನವನಿಗೆ ಅದರ ಬಗ್ಗೆ ಗೌರವ, ಭಯ, ಭಕ್ತಿಗಳು ಮೂಡುವುದು ಸಹಜ. ಈ ದೃಷ್ಟಿಯಿಂದ ಪ್ರಕೃತಿಯ ಎಲ್ಲ ವಸ್ತುಗಳೂ ಅವನಿಗೆ ಪೂಜಾರ್ಹವಾದವು ಎಂದೆನಿಸಿತು. ಈ ಕಾರಣದಿಂದ ಗಿಡ, ಮರ, ನದಿ ಇತ್ಯಾದಿಗಳು ಅವನಿಗೆ ಪೂಜನೀಯವಾದುವಲ್ಲದೆ, ಪೂಜಾಸ್ಥಾನಗಳಾದವು. ಈ ಎಲ್ಲ ಸೃಷ್ಟಿಯ ಹಿನ್ನಲೆಯಾಗಿ

ನಿಂತು ತನ್ನನ್ನು ನಡೆಸುತ್ತಿರುವ ಯಾವುದೇ ಒಂದು ಅನಂತ ಶಕ್ತಿ ಇದೆ ಎಂಬ ಅರಿವು ಮೂಡತೊಡಗಿತು. ಆ ಶಕ್ತಿಗೆ ಒಂದು ರೂಪ ಕೊಡಲು ಯತ್ನಿಸಿದನು. ಆ ರೂಪಕ್ಕೆ ಅಥವಾ ಸಂಕೇತಕ್ಕೆ ರಕ್ಷಣಾರ್ಥವಾಗಿ ಪ್ರತ್ಯೇಕ ಆಲಯವನ್ನು ಕಟ್ಟಲು ಆರಂಭಿಸಿದ. ಇದು ದೇವಾಲಯ ರಚನೆಗೆ ನಾಂದಿಯಾಯಿತು (ಕೂ.ಸ.ಅರ್ಪಣ, ೧೯೯೯, ಪು:೧).

ದೇವಾಲಯ ಎಂದರೆ ಇದು ದೇವರ ಆಲಯ. ಆಲಯ ಎಂದರೆ ಕಟ್ಟಡ ಎಂದರ್ಥ. ದೇವರು ಇರುವ ಸ್ಥಾನ ಧಾರ್ಮಿಕ ಶ್ರದ್ಧೆಯ ಪ್ರತೀಕ (ರಾಮಚಂದ್ರರಾವ್ ಎಸ್., ೧೯೯೪, ಪುಟ:೧). ನಾಡಿನ ನಾಡಿಯನ್ನು ಹಿಡಿದು ಇದೊಂದು ಸಾಂಸ್ಕೃತಿಕ ಕೇಂದ್ರ. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕ (ಚಿದಾನಂದ ಮೂರ್ತಿ ಎಂ., ೧೯೭೯, ಪುಟ:೧೫-೧೬). ಪ್ರತಿಮೆಗಳ ಕಲ್ಪನೆ ಹುಟ್ಟಿದಾಗ ಪ್ರತಿಮೆಗೆ ರಕ್ಷಣೆ ನೀಡಿದ ಆಲಯ ಇದು (ಗೋಪಾಲರಾವ್ ಎಚ್.ಎಸ್., ೧೯೯೩, ಪು:೨೯). ದೇವಾಲಯದ ವಾಸ್ತುಕೃತಿ ಅಥವಾ ಆರ್ಕಿಟೆಕ್ಚರ್ ಎಂಬ ಆಂಗ್ಲ ಶಬ್ದ ತಾಂತ್ರಿಕತೆಯ ದೃಷ್ಟಿಯಿಂದ ಗಾತ್ರದ ದೃಷ್ಟಿಯಿಂದ ಸಣ್ಣದು ಇರಬಹುದು ದೊಡ್ಡದು ಇರಬಹುದು. ಕಲ್ಲಿನ ಮರದಿಂದ ನಿರ್ಮಿತಿಯೂ ಆಗಿರಬಹುದು. ಒಟ್ಟಾರೆ ಇದೊಂದು ವಾಸ್ತುಕೃತಿ (ಶಿವರಾಮ ಕಾರಂತ, ೯೭೪, ಪು:೨೯).

ವಾಸ್ತು ರಚನೆಯಲ್ಲಿ ಅಂದು ಇಂದು ಉಳಿದಿರುವುದು ಗುಡಿಗೋಪುರಗಳೇ! ಒಟ್ಟಾರೆ ಇದೊಂದು ಸಾಂಸ್ಕೃತಿಕ ಸಂಪತ್ತು. ವಾಸ್ತು ಗ್ರಂಥಗಳಲ್ಲಿ ದೇವಾಲಯದ ರಚನೆಯೇ ವಾಸ್ತುಶಾಸ್ತ್ರ. ಇದೇ ವಾಸ್ತು ವಿದ್ಯೆ (ಪ್ರಭಾಕರ ಎಂ.ಎನ್., ೨೦೦೦, ಪು:೩).

ದೇವಾಲಯ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಯಾಗಿ

ದೇವಾಲಯ ಇದು ದೇವರ ಆಲಯ. ಮೂಲತಃ ಇದು ಪೂಜಾಗೃಹವಾದರೂ ಹಲವಾರು ರೀತಿಯ ಪೂಜೆ, ಪುನಸ್ಕಾರಗಳು, ಹಬ್ಬಗಳು, ಜಾತ್ರೆಗಳು, ಸಮಾಜದ ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿವೆ. ದೇವಾಲಯಗಳು ಜನರ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಹಳ ಮಹತ್ವದ ಪಾತ್ರ ವಹಿಸಿವೆ (ಮಹಾಲಿಂಗಮ್ ಟಿ.ವಿ., ೧೯೬೫, ಪು:೩೭೨). ಹಿಂದಿನ ದಿನಗಳಲ್ಲಿ ದಾನ ನೀಡುವುದು ಬದುಕಿನ ಭಾಗವಾಗಿತ್ತು. ಸಮಾಜದಲ್ಲಿ ದಾನಕ್ಕೆ ಮೊದಲಿನಿಂದಲೂ ವಿಶೇಷವಾದ ಪ್ರಾಧಾನ್ಯತೆ ಇದೆ. ಅನ್ನದಾನ, ವಿದ್ಯಾದಾನ, ಭೂದಾನ, ವಸ್ತ್ರದಾನ, ಉದಕದಾನ, ಗೋದಾನ ಇತ್ಯಾದಿ ದಾನಗಳು ಇಲ್ಲಿ ಬಹಳ ಪ್ರಮುಖವಾದವು. ಈಗಲೂ ಕೂಡ ಹಲವಾರು ದೇವಾಲಯಗಳು, ಮಠಗಳು, ಉದಾಹರಣೆಗೆ ಧರ್ಮಸ್ಥಳ ಮಂಜುನಾಥ ದೇವಾಲಯ, ಸುತ್ತೂರು ಮಠ, ಸಿದ್ಧಗಂಗಾಮಠ, ಶೃಂಗೇರಿಯ ಶಾರದಾಂಬ ದೇವಾಲಯಗಳು ಇಂತಹ ಕೆಲವು ಸಮಾಜ ಕಾರ್ಯಗಳನ್ನು ಈಗಲೂ ಮಾಡುತ್ತಲೇ ಇವೆ.

ಪ್ರಾರಂಭದ ಹಂತದಲ್ಲಿ ನಿರ್ಮಿಸಿದ ದೇವಾಲಯಗಳು ಈಗ ಉಳಿದಿಲ್ಲವಾದರೂ ಅಂದು ರಾಜರು ಅಥವಾ ಮಾಂಡಲಿಕ ಅರಸರುಗಳು ಬಿಟ್ಟ ದಾನದ ವಿಷಯಗಳನ್ನು ಶಾಸನಗಳು ತಿಳಿಸುತ್ತವೆ. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳು, ಕೆಲವೊಮ್ಮೆ ವ್ಯಕ್ತಿಯ ಹೆಸರನ್ನು ಉದಾಹರಣೆಗೆ 'ಈಶ್ವರ'

ಎಂಬ ಪದ 'ಭಟ್ಟಾರಕ' ಎಂಬ ಪದ ಸೇರಿಸಿ ದೇವರನ್ನು ಪ್ರತಿಷ್ಠಾಪಿಸಿದ ಸಂಗತಿಯು ಶಾಸನದಲ್ಲಿದೆ (K.I.Vol-1, p-47) ವ್ಯಕ್ತಿಯ ಹೆಸರಿನಲ್ಲಿ ಕಟ್ಟಿಸಿದ ದೇವಾಲಯ ಉಳಿದರೂ ದೇವತೆಗಳ ಹೆಸರು ಮಾತ್ರ ಮಾರ್ಪಾಟಾದವು (ಎಂ.ಚಿದಾನಂದ ಮೂರ್ತಿ, ೧೯೭೫, ಪು:೧೯೪).

ಒಬ್ಬ ವ್ಯಕ್ತಿ ದೇವಾಲಯವೊಂದನ್ನು ನಿರ್ಮಿಸಬೇಕೆಂದು ಬಯಕೆ ಮಾಡಿ ದೇವಾಲವೊಂದನ್ನು ಕಟ್ಟಿದರೆ ಸಾಲದು. ಅದರ ಪೂಜೆ ಪುನಸ್ಕಾರಗಳು ನಡೆಯುತ್ತಾ ಊರ್ಜಿತವಾಗಬೇಕಾಗುತ್ತದೆ. ಆದ ಕಾರಣ ದೇವಾಲಯವನ್ನು ಕಟ್ಟಿಸಿದ ವ್ಯಕ್ತಿಯೇ ಸಮೃದ್ಧವಾಗಿ ದಾನ ಬಿಡುತ್ತಿದ್ದನು. ಒಂದು ದೇವಾಲಯ ನಿರ್ಮಾಣವಾದ ಮೇಲೆ ಅಲ್ಲಿ ಹತ್ತಾರು ಜನರು ಸೇರಿ ಹತ್ತಾರು ಗ್ರಾಮಗಳನ್ನು ದತ್ತಿ ಬಿಡುತ್ತಿದ್ದರು. ದೇವಾಲಯದ ಈ ಆಸ್ತಿಯೇ ದೇವಭೋಗ ಇಂತಹ ದಾನವನ್ನು ಬಿಡುವಾಗ ದಾನದ ಉದ್ದೇಶವು ಶಾಸನಗಳಲ್ಲಿ ಬರೆಯಲ್ಪಡುತ್ತಿತ್ತು (E.C.9, No-1, p-60).

ಉದಾಹರಣೆಗಾಗಿ ಧೂಪ ದೀಪ, ಗಂಧ ನೈವೇಧ್ಯ, ಗೀತ, ನೃತ್ಯೋಪಹಾರ, ಖಂಡಸ್ಫುಟಿತ ಜೀರ್ಣೋದ್ಧಾರಾದಿಯ ತೇನಾಂ ವಿದ್ಯಾರ್ಥಿನಾ, ಚ ಸತ್ರ ನಿಮಿತ್ತಂ (K.I.Vol-1, p-85). ಎಂದು ಶಾಸನಗಳು ದಾಖಲಿಸುತ್ತವೆ.

ದೇವಾಲಯಗಳು ವಿದ್ಯಾ ಕೇಂದ್ರಗಳು ಹೌದು, ಮೊದ ಮೊದಲು ಮಠಗಳೇ ವಿದ್ಯಾ ಕೇಂದ್ರಗಳಾಗಿದ್ದವು. ವಿದ್ಯೆಯನ್ನು ಕಲಿಯಲು ಪ್ರಾರಂಭ ಹಂತದಲ್ಲಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾ ಸ್ಥಾನಗಳು ಹೆಚ್ಚು ಮಹತ್ವ ಪಡೆದಿವೆ. ದೇವಾಲಯಗಳು ಬೆಳೆಯುತ್ತಾ ಮಠದ ಜೊತೆಗೆ ಸೇರಿ ವಿದ್ಯಾದಾನಕ್ಕೆ ಆದ್ಯತೆ ನೀಡತೊಡಗಿದವು. ಈ ದಿಸೆಯಲ್ಲಿ ಕರ್ನಾಟಕದ ಪ್ರಮುಖ ವಿದ್ಯಾ ಕೇಂದ್ರಗಳಾದ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿ, ಬಳ್ಳಾರಿ ಜಿಲ್ಲೆಯ ಸಾಲೋಟಗಿ ಮತ್ತು ಗುಲ್ಬರ್ಗ ಜಿಲ್ಲೆಯ ನಾಗವಿ ಪ್ರಮುಖ ಕೇಂದ್ರಗಳಾಗಿದ್ದವು.

ದೇವಾಲಯಗಳು ನ್ಯಾಯಸ್ಥಾನವೂ ಹೌದು. ಏಕೆಂದರೆ ದೇವರ ಹೆಸರಿನಲ್ಲಿ ದೇವರ ಎದುರಿನಲ್ಲಿ ನಿಂತು ಮಾತನ್ನು ನುಡಿದರೆ ಅದನ್ನು ಪರಿಪಾಲಿಸಬೇಕಾಗುತ್ತದೆ. ಇದಕ್ಕೊಂದು ನಿರ್ಬಂಧವಿರುತ್ತದೆ ಎಂಬುದು ಮನಸ್ಸಿನಲ್ಲಿ ಬೇರೂರಿರುವ ಭಾವನೆ (ಎಂ.ಚಿದಾನಂದ ಮೂರ್ತಿ, ೧೯೭೫, ಪು:೨೧೬,) (SII.IX.i.p.169). ಹೀಗಾಗಿ ದೇವಾಲಯಗಳು ನ್ಯಾಯವಾಗಿ ಒಂದಲ್ಲ ಒಂದು ರೀತಿಯಿಂದ ಮಹತ್ವ ಪಡೆದಿವೆ. ಇದಕ್ಕೆ ಪ್ರಮುಖ ಉದಾಹರಣೆ ಹುಲಿಗಿಯ ಶ್ರೀಸೋಮೇಶ್ವರ ದೇವಾಲಯ ದೇವರ ಮುಂದೆ ತಾವು ಮಾಡಿದ ತಪ್ಪುಗಳನ್ನೆಲ್ಲಾ ಒಪ್ಪಿಕೊಂಡು, ತಪ್ಪಿಗೆ ಶಿಕ್ಷೆ, ಪಶ್ಚಾತಾಪ ಮಾಡಿಕೊಳ್ಳುವರು. ಇದಕ್ಕಾಗಿ ಹರಕೆ ಹೊತ್ತುಕೊಳ್ಳುವ ಪದ್ಧತಿಯನ್ನು ಈಗಲೂ ಕಾಣುತ್ತೇವೆ.

ದೇವಾಲಯಗಳ ವರ್ಗೀಕರಣ

ದೇವಾಲಯಗಳ ವರ್ಗೀಕರಣದಲ್ಲಿ ಕರ್ನಾಟಕದ ಪಾತ್ರ ಬಲು ದೊಡ್ಡದು. ದೇವಾಲಯಗಳ ವಾಸ್ತು ಶೈಲಿಗಳಲ್ಲಿ ಪ್ರಮುಖವಾಗಿ ಮೂರು ವಿಧಾನಗಳನ್ನು ಕಾಣುತ್ತೇವೆ. ದ್ರಾವಿಡ, ನಾಗರ, ಮತ್ತು ವೇಸರ. ಈ ಮಾತನ್ನು ಕರ್ನಾಟಕದಲ್ಲಿ ದೊರೆತ ಶಾಸನಗಳೂ ಪುಷ್ಟೀಕರಿಸುತ್ತವೆ (ರೈಸ್ ಬಿ.ಎಲ್., ೧೯೦೯, ಪು:೧೨೪).

ದ್ರಾವಿಡ ಎಂಬ ಪದ ದಾಕ್ಷಿಣಾತ್ಯ ನಾಗರ ಎಂಬ ಪದ ಔತ್ತರೇಯ ಸಂಪ್ರದಾಯಗಳಿಗೆ ಖಚಿತವಾದ ದಿಕ್ಕನ್ನು ತೋರಿಸುವಂತಿದೆ. ಅಂದರೆ ದಕ್ಷಿಣ ಭಾರತದ ದೇವಾಲಯ ಹೆಚ್ಚಿನ ಮಟ್ಟಿಗೆ ದ್ರಾವಿಡ ಶೈಲಿ, ಉತ್ತರ ಭಾರತದ ದೇವಾಲಯಗಳು ಹೆಚ್ಚಿನ ಮಟ್ಟಿಗೆ ನಾಗರ ಶೈಲಿಯಲ್ಲಿವೆ. ದಿಕ್ಕಿಗೆ ಸಂಬಂಧಿಸಿದಂತೆ ಇದಕ್ಕೆ ಅಪವಾದವೂ ಉಂಟು. ಉದಾಹರಣೆಗಾಗಿ ಐಹೊಳೆಯಲ್ಲಿ ದ್ರಾವಿಡ ನಾಗರ ಮತ್ತು ವೇಸರ ಶೈಲಿಯ ಮೂರು ಪ್ರಕಾರದ ದೇವಾಲಯಗಳನ್ನು ಕಾಣಬಹುದು. ಅದಕ್ಕೆ ಐಹೊಳೆಯನ್ನು ಭಾರತೀಯ ದೇವಾಲಯಗಳ ವಾಸ್ತುಶಿಲ್ಪದ ತೊಟ್ಟಿಲು ಎಂದೇ ಕರೆಯಲಾಗಿದೆ. ವೇಸರ ಶೈಲಿ ಎಂಬುದು ಉತ್ತರ ಮತ್ತು ದಕ್ಷಿಣ ಭಾರತದ ಮಿಶ್ರಿತ ರಚನೆಯಾಗಿದೆ. ದ್ರಾವಿಡ ಶೈಲಿಯ ಶಿಖರಗಳು ಅಷ್ಟ ಕೋನಾಕೃತಿ ಅಥವಾ ಆರು ಕೋನಾಕೃತಿಯಲ್ಲಿದ್ದರೆ ನಾಗರ ಶೈಲಿ ಚಚ್ಚೌಕ ಅಥವಾ ಆಯತಾ ಕೋನಾಕೃತಿಯಾಗಿದೆ. ವೇಸರ ಶೈಲಿ ಎಂಬುದು ಇವೆರಡರ ಮಿಶ್ರಿತ ಶೈಲಿ ಅಥವಾ ಇದರ ಆಕೃತಿ ವೃತ್ತ ಅಥವಾ ಗಜಪ್ರಷ್ಟಾಕೃತಿ. ವರ್ಗೀಕರಣ ಮಾಡುವಾಗ ತಳವಿನ್ಯಾಸವೇ ಮುಖ್ಯವಾಗಿದ್ದರೂ ಇಲ್ಲಿ ಶಿಖರ ವಿನ್ಯಾಸವೇ ಪ್ರಧಾನ. ದ್ರಾವಿಡ, ನಾಗರ, ವೇಸರ ಶೈಲಿಯ ಹೊರತಾಗಿ ಉಳಿದ ಶೈಲಿಗಳು ಇನ್ನೂ ಕೆಲವು ಹುಟ್ಟಿಕೊಂಡಿವೆ. ಭೂಮಿಜ ಶೈಲಿ, ಈ ಶೈಲಿಯ ದೇವಾಲಯವನ್ನು ಕರ್ನಾಟಕದ ನುಗ್ಗಿಹಳ್ಳಿಯಲ್ಲಿ ಕಾಣಬಹುದು. ಆದರೆ ಕೆಲವೊಂದು ಪ್ರದೇಶಗಳಲ್ಲಿ ಪ್ರಾದೇಶಿಕ ಲಕ್ಷಣಗಳನ್ನು ಮೈಗೂಡಿಸಿಕೊಂಡು ದೇವಾಲಯಗಳ ರಚನೆಯಾಯಿತು. ಹೀಗಾಗಿ ದೇವಾಲಯಗಳ ರಚನೆಗಳಲ್ಲಿ ಪ್ರಾದೇಶಿಕ ಪ್ರಭಾವವನ್ನು ಕಾಣಬಹುದು. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ದೇವಾಲಯಗಳ ರಚನೆಯಾಯಿತು. ಒಂದೊಂದು ಪ್ರಮುಖ ರಾಜವಂಶದ ದೇವಾಲಯಗಳು,ಒಂದೊಂದು ಪ್ರದೇಶದಲ್ಲಿ ಕೇಂದ್ರೀಕೃತವಾಗಿವೆ. ಉದಾಹರಣೆಗೆ ಕದಂಬರ ಕಾಲದ ದೇವಾಲಯಗಳು ಬನವಾಸಿಯಲ್ಲಿ, ಹಾಸನದ ಹಲ್ಮಿಡಿಯಲ್ಲಿ, ಬಾದಾಮಿ ಚಾಲುಕ್ಯರ ದೇವಾಲಯಗಳು, ಐಹೊಳೆ, ಬಾದಾಮಿ, ಪಟ್ಟದಕಲ್ಲು, ರಾಷ್ಟ್ರಕೂಟರ ದೇವಾಲಯಗಳು ಎಲ್ಲೋರ, ಶಿರ್ವಾಳ, ಕೂಕನೂರುಗಳಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಗದಗ, ಲಕ್ಕುಂಡಿ, ಕುರುವತ್ತಿ, ಹುಲಿಗಿ, ಸೋಮನಾಥ ಬೆಟ್ಟ, ಶಿವಪುರಗಳಲ್ಲಿ ಇವೆ. ಹೀಗೆ ಬೇರೆ ಬೇರೆ ಕಾಲದ ದೇವಾಲಯಗಳನ್ನು ಬಿಡಿ ಬಿಡಿಯಾಗಿ ಕರ್ನಾಟಕದ ಬೇರೆ ಬೇರೆಪ್ರದೇಶಗಳಲ್ಲಿ ಕಾಣುತ್ತೇವೆ. ಭೂಮಿಜ ಶೈಲಿ ಪ್ರಾದೇಶಿಕ ಶೈಲಿಗಳನ್ನು ಮೈಗೂಡಿಸಿಕೊಂಡ ಶೈಲಿ, ದೇವಾಲಯದ ರಚನೆ ಕಾಲದಿಂದ ಕಾಲಕ್ಕೆ ರಚನಾತ್ಮಕವಾಗಿ ನಿರ್ದಿಷ್ಟಗೊಳ್ಳುತ್ತಾ ತನ್ನದೇ ಆದ ಶೈಲಿಯನ್ನು ರೂಢಿಸಿಕೊಂಡಿತು. ಈ ಪ್ರಬೇಧ ಹೀಗೆ ಪ್ರತಿಯೊಂದು ಪ್ರದೇಶದ ದೇವಾಲಯಗಳು ವಾಸ್ತುಶಿಲ್ಪಕ್ಕೆ ವೈಶಿಷ್ಟ ಪೂರ್ಣವಾದ ಕೊಡುಗೆಯನ್ನು ನೀಡಿವೆ (ಕೂ.ಸ.ಅರ್ಪಣ, ೧೯೯೯, ಪುಟ:೬-೧೦). ಈ ಒಂದು ಹಿನ್ನಲೆಯಲ್ಲಿ ಪ್ರಸ್ತುತ ಪರಿಸರದ ದೇವಾಲಯಗಳಿಗೆ ಹುಲಿಗಿ ಪರಿಸರಕ್ಕೆ ಸೀಮಿತವಾಗಿರಿಸಿಕೊಂಡು ದೇವಾಲಯಗಳ ಪ್ರಸ್ತಾವನೆಯನ್ನು ಇಲ್ಲಿ ನೀಡಲಾಗಿದೆ.

ಶೈವ ದೇವಾಲಯಗಳು

ಹುಲಿಗಿ ಪರಿಸರ ಅಂದರೆ ಹೊಸೂರು, ಕಿಡಿದಾಳು, ಪಂಪಾಸರೋವರ ಹಾಗೂ ಹಿರೇಕಾಸಿನಕಂಡಿಗಳಲ್ಲಿರುವ ವಿವಿಧ ಕಾಲಮಾನದ ಶೈವ ದೇವಾಲಯಗಳ ವಾಸ್ತು ಲಕ್ಷಣಗಳು ಈ ಕೆಳಗಿನಂತಿವೆ.

೧.	ಗ್ರಾಮ	:	ಹುಲಿಗಿ
	ಹೆಸರು	:	ಸೋಮೇಶ್ವರ ದೇವಾಲಯ
	ಸ್ಥಳ	:	ಗ್ರಾಮದ ಪೂರ್ವಕ್ಕೆ
	ಕಾಲ	:	ಕ್ರಿ.ಶ.೧೦೮೮
	ರಾಜವಂಶ	:	ಕಲ್ಯಾಣ ಚಾಲುಕ್ಯ
	ದಿಕ್ಕು	:	ಪೂರ್ವ
	ಮಾಧ್ಯಮ	:	ಕಣಶಿಲೆ
	ಸ್ಥಿತಿ	:	ಮಾಧ್ಯಮ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪುಟ-೭೭

ಉತ್ತರದ ಅಧಿಷ್ಠಾನದ ಮೇಲೆ ನಿರ್ಮಿಸಿರುವ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ತೆರೆದ ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳದಲ್ಲಿ ಸಪ್ತಮಾತೃಕೆಯರ ಶಿಲ್ಪ ಪಟ್ಟಿಕೆಯಿದೆ. ಸಭಾ ಮಂಟಪದಲ್ಲಿ ಶಿಲಾಶಾಸನವನ್ನು ನಿಲ್ಲಿಸಲಾಗಿದೆ.ಗರ್ಭಗೃಹವು ಚಚ್ಚೌಕವಾಗಿದ್ದು, ಬಾಗಿಲುವಾಡವು ಸರಳ ಕೆತ್ತನೆಯಲ್ಲಿದೆ. ಅಂತರಾಳದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿರುವರು. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಹಾಗೂ ಪಕ್ಕದಲ್ಲಿ ಇಳಿಬಿದ್ದಂತಿರುವ ಪದ್ಮದ ಮೊಗ್ಗುಗಳು ಮತ್ತು ಅರೆಗಂಬಗಳಿವೆ. ಅಂತರಾಳದ ಪಾರ್ಶ್ವಗಳಲ್ಲಿ ಜಾಲಂಧ್ರಗಳನ್ನು ಬೆಳಕಿಗೆಂದು ಜೋಡಿಸಲಾಗಿದೆ. ಸಭಾಮಂಟಪವು ಒಂಬತ್ತು ಅಂಕಣಗಳಿಂದ ಕೂಡಿದೆ. ಇದರ ನಾಲ್ಕು ಕಂಬಗಳು ಚಚ್ಚೌಕ, ಅಷ್ಟ ಮುಖಗಳಲ್ಲಿದ್ದು, ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ಸಭಾಮಂಟಪದ ಸುತ್ತಲೂ ಭಕ್ತರು ವಿಶ್ರಮಿಸಲು ಅನುವಾಗುವಂತೆ ಕಕ್ಷಾಸನಗಳನ್ನು ನಿರ್ಮಿಸಲಾಗಿದೆ. ತೆರೆದ ಸಭಾಮಂಟಪವು ಇದಾಗಿರುವುದರಿಂದ ಮಳೆಯ ನೀರು ಒಳಭಾಗಕ್ಕೆ ಬೀಳದಿರಲು ಕಪೋತಗಳನ್ನು ಮುಂಚಾಚುವಂತೆ ರಚಿಸಿರುವರು.

ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಮಾದರಿಯ ಶಿಖರವಿದೆ. ಇದಕ್ಕೆ ಹೊಂದಿಕೊಂಡ ಸುಕನಾಸಿಯಲ್ಲಿ ಕೀರ್ತಿಮುಖದ ಅಲಂಕರಣೆಯಿದೆ. ಈ ದೇವಾಲಯದ ಶಾಸನವು ಕ್ರಿ.ಶ.೧೦೮೮ಕ್ಕೆ ಸೇರಿದ್ದು,ಆರನೆಯ ವಿಕ್ರಮಾದಿತ್ಯನ ಕಾಲದಾಗಿದೆ. ಚೌವೇದಿಭಟ್ಟನೆಂಬುವನು ಹುಲಿಗೆಯನ್ನು ವಿಕ್ರಮಾದಿತ್ಯನಿಂದ ದಾನವಾಗಿ ಪಡೆದಿದ್ದನು. ಇವನ ಮಗ ಸೋಮನಾಥನು ಶಿವದೇವಾಲಯ ಅಂದರೆ ಪ್ರಸ್ತುತ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿ ಹರಿನೀರ ತೋಟ ಮತ್ತು ಮನೆಗಳನ್ನು ದಾನ ನೀಡಿದನು. ಶಾಸನಗಳಲ್ಲಿ ಹುಲಿಗೆ, ಪುಲಿಗೆ, ಪುಲ್ಲವಿಗೆ ಎಂಬ ಹೆಸರುಗಳಿಂದ ಹುಲಿಗಿ ಗ್ರಾಮವನ್ನು ಕರೆಯಲಾಗಿದೆ. ಶಾಸನದಲ್ಲಿ ತುಂಗಭದ್ರಾ ನದಿಯನ್ನು 'ದಕ್ಷಿಣ ಗಂಗೆ' ಎಂದಿದೆ. ಇದರಲ್ಲಿ ಋಷ್ಯಾಮುಕ, ಗಂಧಮಾಧನ, ಶ್ರೀಕೂಟ, ಕಿಷ್ಕಿಂದ ಪರ್ವತಗಳ ಉಲ್ಲೇಖವಿದೆ (ಕ.ವಿ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ, ಪುಟ-೧೪೫).

ಈ ದೇವಾಲಯದ ಮುಂದೆ ದಕ್ಷಿಣಾಭಿಮುಖವಾಗಿರವ ಮತ್ತೊಂದು ಚಿಕ್ಕದಾದ ಗರ್ಭಗೃಹವಿದೆ. ಇದರಲ್ಲಿ ಮೂಷಕ ಪೀಠದ ಮೇಲೆ ಕುಳಿತಿರುವ ಗಣೇಶನ ವಿಗ್ರವಿದೆ.

೨.	ಗ್ರಾಮ	:	ಹುಲಿಗಿ
	ಹೆಸರು	:	ಈಶ್ವರ ದೇವಾಲಯ
	ಸ್ಥಳ	:	ಸೋಮೇಶ್ವರ ದೇಗುಲದ ದಕ್ಷಿಣಕ್ಕೆ
	ಕಾಲ	:	ಕ್ರಿ.ಶ.ಸು.೧೨-೧೩ನೆಯ ಶತಮಾನ
	ರಾಜವಂಶ	:	ಕಲ್ಯಾಣ ಚಾಲುಕ್ಯ
	ದಿಕ್ಕು	:	ಪೂರ್ವ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಣಶಿಲೆ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪುಟ-೭೮

ಗರ್ಭಗೃಹ, ಅಂತರಾಳ ಹಾಗೂ ತೆರೆದ ಸಭಾಮಂಟಪಗಳಿಂದ ಕೂಡಿದ ದೇವಾಲಯವಿದು. ಗರ್ಭಗೃಹದಲ್ಲಿ ಎತ್ತರದ ಪೀಠವಿದೆ. ಆದರೆ ಶಿವಲಿಂಗದ ಮೇಲ್ಭಾಗ ಉಳಿದಿಲ್ಲ. ಇದರ ಬಾಗಿಲುವಾಡವು ಸಾದಾ ಕೆತ್ತನೆಯಿಂದ ಕೂಡಿದೆ. ಅಂತರಾಳದ ಪ್ರವೇಶ ದ್ವಾರವು ಕೂಡ ಸರಳವಾಗಿದೆ. ತೆರೆದ ಸಭಾಮಂಟಪವು ಒಂಭತ್ತು ಅಂಕಣಗಳಿಂದ ಕೂಡಿದ್ದು ಇದರಲ್ಲಿ ಒಟ್ಟು ೧೨ ಕಂಬಗಳಿವೆ. ಈ ಕಂಬಗಳು ಚಚ್ಚೌಕ, ಅಷ್ಟಮುಖ ಹಾಗೂ ಹದಿನಾರು ಪಟ್ಟಿಕೆಗಳಿಂದ ಕೂಡವೆ. ಮೇಲ್ಭಾಗದಲ್ಲಿ ಫಲಕ ಮತ್ತು ಬೋಧಿಗೆಗಳಿವೆ. ಗರ್ಭಗೃಹದ ಮೇಲೆ ಇದ್ದ ಶಿಖರ ಭಾಗ ಈಗ ಇರುವುದಿಲ್ಲ. ಸಭಾಮಂಟಪದ ಸುತ್ತಲೂ ಭಕ್ತರು, ಕುಳಿತು ವಿಶ್ರಮಿಸಿಕೊಳ್ಳಲು ಕಕ್ಷಾಸನವನ್ನು ರಚಿಸಲಾಗಿದೆ. ಸಭಾ ಮಂಟಪದ ಮೇಲ್ಭಾಗದಲ್ಲಿ ಮುಂಚಾಚಿದ ಚಜ್ಜಾ ಭಾಗವಿದೆ. ದೇಗುಲಕ್ಕೆ ಬಳಸಿದ ಶಿಲೆ ಕಣಶಿಲೆಯಾಗಿದೆ.

೩.	ಗ್ರಾಮ	:	ಹುಲಿಗಿ
	ಹೆಸರು	:	ಈಶ್ವರ ದೇವಾಲಯ
	ಸ್ಥಳ	:	ಸೋಮೇಶ್ವರ ದೇಗುಲದ ದಕ್ಷಿಣಕ್ಕೆ
	ಕಾಲ	:	ಕ್ರಿ.ಶ.ಸು.೧೨-೧೩ನೆಯ ಶತಮಾನ
	ರಾಜವಂಶ	:	ಕಲ್ಯಾಣ ಚಾಲುಕ್ಯ
	ದಿಕ್ಕು	:	ಪೂರ್ವ
	ಮಾಧ್ಯಮ	:	ಕಣಶಿಲೆ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪು:೭೯

ಗರ್ಭಗೃಹ, ಅಂತರಾಳಗಳು ಇದರ ಮುಖ್ಯ ಭಾಗಗಳು. ಹಿಂದೆ ಇದ್ದ ಸಂಪೂರ್ಣ ದೇವಾಲಯವು ಈಗ ಭಗ್ನಗೊಂಡಿರುವುದನ್ನು ಕಾಣಬಹುದು. ಗರ್ಭಗೃಹದ ಭುವನೇಶ್ವರಿಯಲ್ಲಿ ಪದ್ಮವನ್ನು ಕಡೆಯಲಾಗಿದೆ.

ಬಾಗಿಲುವಾಡವು ಸರಳವಾದ ಕೆತ್ತನೆಯಲ್ಲಿದೆ. ಅಂತರಾಳದಲ್ಲಿ ಒಂದು ಭುವನೇಶ್ವರಿಯಿದ್ದು, ಇದರಲ್ಲಿ ಪದ್ಮದ ಅಲಂಕರಣೇಯಿದೆ. ದೇಗುಲಕ್ಕೆ ಕಣಶಿಲೆಯನ್ನು ಬಳಸಿದ್ದು ಉತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ.

೩.	ಗ್ರಾಮ	:	ಪಂಪಾಸರೋವರ
	ಹೆಸರು	:	ಈಶ್ವರ ದೇವಾಲಯ
	ಸ್ಥಳ	:	ತುಂಗಭದ್ರಾನದಿ ಎಡದಂಡೆ
	ಕಾಲ	:	ಕ್ರಿ.ಶ.೧೬ ನೆಯ ಶತಮಾನ
	ರಾಜವಂಶ	:	ವಿಜಯನಗರ
	ದಿಕ್ಕು	:	ಪೂರ್ವ
	ಸ್ಥಿತಿ	:	ಮಾಧ್ಯಮ
	ಮಾಧ್ಯಮ	:	ಕಣಶಿಲೆ

ಈ ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪಗಳಿಂದ ಕೂಡಿದೆ. ಎತ್ತರದ ಜಗತಿಯ ಮೇಲಿರುವ ಗರ್ಭಗೃಹದ ಪ್ರವೇಶದ್ವಾರವು ಸಾದಾ ಕೆತ್ತನೆಯಲ್ಲಿದೆ. ಒಳಗೆ ಶಿವಲಿಂಗ, ಮುಖಮಂಟಪದಲ್ಲಿ ಚೌಕಾಕಾರದ ಮೂರು ಕಂಬಂಗಳು, ನಂದಿ, ಮಹಿಷಾ ಮರ್ದಿನಿ, ವೀರಭದ್ರ, ಭೈರವ ಮತ್ತಿತರ ಶಿಲ್ಪಗಳಿವೆ. ಮೇಲೇರಲು ಸೋಪಾನಗಳಿವೆ. ಜೀರ್ಣೋದ್ಧಾರಗೊಳಿಸಿರುವ ಈ ದೇವಾಲಯ ಮೊದಲಿನ ಮೂಲ ರೂಪ ಕಳೆದುಕೊಂಡಿದೆ.

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪು-೧೨೦

ಗರ್ಭಗೃಹ, ಅಂತರಾಳಗಳು ಒಳಗೊಂಡಿವೆ ಭಾಗಗಳು ಹಿಂದೆ ಇದ್ದ ದೇವಾಲಯವು ಈಗ ಭಗ್ನಗೊಂಡಿರುವುದನ್ನು ಕಾಣಬಹುದು. ಚಚ್ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದನ್ನು ಕಪ್ಪುಶಿಲೆಯಲ್ಲಿ ಕಡೆಯಲಾಗಿದೆ. ಗರ್ಭಗೃಹದ ಭುವನೇಶ್ವರಿಯಲ್ಲಿ ಪದ್ಮವನ್ನು ಕಡೆಯಲಾಗಿದೆ. ಬಾಗಿಲುವಾಡವು ಸರಳವಾದ ಕೆತ್ತನೆಯಲ್ಲಿದೆ. ಅಂತರಾಳದಲ್ಲಿ ಒಂದು ಭುವನೇಶ್ವರಿಯಿದ್ದು, ಇದರಲ್ಲಿ ಪದ್ಮದ ಅಲಂಕರಣೆಯಿದೆ. ದೇಗುಲಕ್ಕೆ ಕಣಶಿಲೆಯನ್ನು ಬಳಸಿದ್ದು ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ.

೪.	ಗ್ರಾಮ	:	ಅಂಜನಾದ್ರಿ
	ಹೆಸರು	:	ಪಂಪಾಪತಿ ದೇವಾಲಯ
	ಸ್ಥಳ	:	ಪರ್ವತದ ಪೂರ್ವ
	ಕಾಲ	:	ಕ್ರಿ.ಶ.ಸು.೧೨ ನೆಯ ಶತಮಾನ
	ರಾಜವಂಶ	:	ಕಲ್ಯಾಣ ಚಾಳುಕ್ಯ
	ದಿಕ್ಕು	:	ಪೂರ್ವ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪು-೮೫

ಹನುಮನ ಹಳ್ಳಿಯಿಂದ ಒಂದು ಕಿ.ಮೀ.ಅಂತರದಲ್ಲಿ ತುಂಗಭದ್ರಾ ನದಿಯ ಕಾಲುವೆಯಿದೆ. ಇದರ ಎಡಬದಿಯ ವಿಶಾಲ ಬಂಡೆಗಲ್ಲಿನ ಮೇಲೆ ಈ ಗುಡಿ ಕಟ್ಟಲಾಗಿದೆ. ಗರ್ಭಗೃಹ ಅರ್ಧಮಂಟಪ, ಸಭಾ ಮಂಟಪಗಳನ್ನು ಹೊಂದಿರುವ ದೇವಾಲಯವಿದು. ಗರ್ಭಗೃಹದಲ್ಲಿ ಶಿವಲಿಂಗ, ಅರ್ಧಮಂಟಪದಲ್ಲಿ ನಂದಿ ಶಿಲ್ಪಗಳಿವೆ. ಚಚ್ಚೌಕ, ಅಷ್ಟ ಮತ್ತು ಹದಿನಾರು ಮುಖಗಳು, ವೃತ್ತಾಕಾರ, ಮೇಲ್ಭಾಗದಲ್ಲಿ ಚೌಕಾಕಾರದ ಮುಚ್ಚಳ ಹಾಗೂ ಬೋಧಿಗೆಗಳಿಂದ ಕೂಡಿದ ನಾಲ್ಕು ಕಂಬಗಳು ಸಭಾಮಂಟಪದಲ್ಲಿವೆ. ಒಳಗಡೆ ಕುಳಿತು ವಿಶ್ರಮಿಸಲು ಅನುಕೂಲವಾಗುವಂತೆ ಸುತ್ತಲೂ ಕಕ್ಷಾಸನವನ್ನು ರಚಿಸಲಾಗಿದೆ. ಸಭಾಮಂಟಪದ ಪ್ರವೇಶದ್ವಾರ ಸಾದಾ ಕೆತ್ತನೆಯಿಂದ ಕೂಡಿದ್ದು, ಇದರಲ್ಲಿ ಅರೆಗಂಬಗಳು, ಮುಂಚಾಚಿದ ಪಟ್ಟಿಕೆ, ಎರಡೂ ಬದಿಗೆ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದೆ.

೫.	ಗ್ರಾಮ	:	ಹೊಸೂರು
	ಹೆಸರು	:	ಬಸವಣ್ಣ ದೇವಾಲಯ
	ಸ್ಥಳ	:	ತುಂಗಭದ್ರಾನದಿ ಎಡದಂಡೆ
	ಕಾಲ	:	ಕ್ರಿ.ಶ.೧೬ ನೆಯ ಶತಮಾನ
	ರಾಜವಂಶ	:	ವಿಜಯನಗರ
	ದಿಕ್ಕು	:	ಪೂರ್ವ
	ಸ್ಥಿತಿ	:	ಮಾಧ್ಯಮ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪು-೧೩೧

ಎತ್ತರದ ಜಗತಿಯ ಮೇಲೆ ನಿರ್ಮಾಣವಾದ ಈ ದೇವಾಲಯವು ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ಕೂಡಿದೆ. ಸಭಾಮಂಟಪದ ಮಧ್ಯ ಹನ್ನೆರಡು ಚೌಕಾಕಾರದ ಕಂಬಗಳು, ಉಬ್ಬುಶಿಲ್ಪ ಮತ್ತು ಪುಷ್ಪ ಬೋದಿಗೆಗಳಿಂದ ಕೂಡಿವೆ. ಸಭಾಮಂಟಪದ ಪ್ರವೇಶಕ್ಕೆ ಸೋಪಾನಗಳನ್ನು ಜೋಡಿಸಿದ್ದು, ಅದರ ಇಕ್ಕೆಲಗಳಲ್ಲಿರುವ ಎರಡು ಕಂಬಗಳಿಗೆ ಸಿಂಹ ಮತ್ತು ಉಪಕಂಬಗಳನ್ನು ಸೇರಿಸಲಾಗಿದೆ.

ಗರ್ಭಗೃಹದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ನಂದಿಗಳು, ಲಲಾಟಬಿಂಬದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ದ್ರಾವಿಡ ಮಾದರಿಯ ಶಿಖರವನ್ನೊಳಗೊಂಡಿದೆ.

೬.	ಗ್ರಾಮ	:	ಹೊಸೂರು
	ಹೆಸರು	:	ಈಶ್ವರ ದೇವಾಲಯ
	ಸ್ಥಳ	:	ತುಂಗಭದ್ರಾನದಿ ಬಲದಂಡೆ
	ಕಾಲ	:	ಕ್ರಿ.ಶ.ಸು.೧೫ ನೆಯ ಶತಮಾನ
	ರಾಜವಂಶ	:	ವಿಜಯನಗರ
	ದಿಕ್ಕು	:	ಪೂರ್ವ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪು-೧೩೩

ಈ ದೇವಾಲಯವು ಗರ್ಭಗೃಹ, ಅಂತರಾಳ, ತೆರೆದ ಸಭಾಮಂಟಪಗಳಿಂದ ಕೂಡಿದೆ. ಸಭಾಮಂಟಪದ ಪ್ರವೇಶದ ಇಕ್ಕೆಲಗಳಲ್ಲಿ ಎರಡು, ಮಧ್ಯ ನಾಲ್ಕು, ಒಟ್ಟು ಆರು ಚೌಕಾಕಾರದ ಕಂಬಗಳಿವೆ. ಗರ್ಭಗೃಹ, ಅಂತರಾಳದ ಪ್ರವೇಶದ್ವಾರಗಳು ಸಾದಾ ಕೆತ್ತನೆಯಿಂದ ಕೂಡಿವೆ. ದೇವಾಲಯದಲ್ಲಿ ನಂದಿ ಮತ್ತು ಪಾಣಿಪೀಠಗಳಿರುವುದರಿಂದ ಇದು ಈಶ್ವರ ದೇವಾಲಯವಾಗಿರುವ ಸಾಧ್ಯತೆ ಇದೆ. ಗರ್ಭಗೃಹದ ಮೇಲೆ ಹಾಳಾದ ಅವಸ್ಥೆಯಲ್ಲಿರುವ ದ್ರಾವಿಡ ಮಾದರಿಯ ಶಿಖರವನ್ನು ಗಾರೆ, ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ.

೭.	ಗ್ರಾಮ	:	ಹೊಸೂರು
	ಹೆಸರು	:	ಈಶ್ವರ ದೇವಾಲಯ
	ಸ್ಥಳ	:	ತುಂಗಭದ್ರಾನದಿ ಎಡದಂಡೆ
	ಕಾಲ	:	ಕ್ರಿ.ಶ.೧೫ ನೆಯ ಶತಮಾನ
	ರಾಜವಂಶ	:	ವಿಜಯನಗರ
	ದಿಕ್ಕು	:	ಪೂರ್ವ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪು-೧೩೩

ಈ ದೇವಾಲಯವು ವಿಶಾಲವಾದ ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹಗಳಿಂದ ಕೂಡಿದೆ. ಸಭಾಮಂಟಪದ ಮುಂದೆ ಮೂರು ಹಂತಗಳಲ್ಲಿ ದೇವಾಲಯವನ್ನು ವಿಸ್ತರಿಸಲಾಗಿದೆ. ಮುಖಮಂಟಪದ ಪ್ರವೇಶದ ಇಕ್ಕೆಲಗಳಲ್ಲಿ ಉಬ್ಬುಶಿಲ್ಪಗಳಿಂದ ಕೂಡಿದ ಚೌಕಾಕಾರದ ಎರಡು ಕಂಬಗಳಿದ್ದು, ಮೇಲ್ಛಾವಣಿ ಇಳಿಜಾರಾಗಿದೆ. ಸಭಾಮಂಟಪದ ಮಧ್ಯ, ಎರಡು ಸಾಲುಗಳಲ್ಲಿ ಒಟ್ಟು ಎಂಟು ಕಂಬಗಳಿವೆ. ಗರ್ಭಗೃಹದ ಪ್ರವೇಶದ್ವಾರ ಸಾದಾ ಕೆತ್ತನೆಯಿಂದ ಕೂಡಿದೆ. ಗರ್ಭಗೃಹದಲ್ಲಿ ಹಾಳಾದ ಈಶ್ವರ ಪೀಠ, ಸಭಾಮಂಟಪದಲ್ಲಿ ನಂದಿ ಶಿಲ್ಪವಿದೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ತ್ರಿತಲಗಳಿಂದ ಕೂಡಿದ ಹಾಳಾದ ಪಾಳುಬಿದ್ದಿರುವ ಶಿಖರವಿದೆ.

೮.	ಗ್ರಾಮ	:	ಹೊಸೂರು
	ಹೆಸರು	:	ಈಶ್ವರ ದೇವಾಲಯ
	ಸ್ಥಳ	:	ತುಂಗಭದ್ರಾನದಿ ಎಡದಂಡೆ
	ಕಾಲ	:	ಕ್ರಿ.ಶ.೧೭ ನೆಯ ಶತಮಾನ
	ರಾಜವಂಶ	:	ವಿಜಯನಗರೋತ್ತರ
	ದಿಕ್ಕು	:	ಪೂರ್ವ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪು-೧೩೪

ಈ ದೇವಾಲಯವು ತೆರೆದ ಸಭಾಮಂಟಪ ಮತ್ತು ಗರ್ಭಗೃಹಗಳಿಂದ ಕೂಡಿದೆ. ಸಭಾಮಂಟಪದ ಪ್ರವೇಶದ ಇಕ್ಕೆಲಗಳಲ್ಲಿ ಚೌಕಾಕಾರದ ಎರಡು ಕಂಬಗಳಿವೆ. ಗರ್ಭಗೃಹದ ಪ್ರವೇಶದ್ವಾರ ಸಾದಾ ಕೆತ್ತನೆಯಲ್ಲಿದ್ದು, ಎಡಭಾಗದಲ್ಲಿ ಗಚ್ಚಿನಿಂದ ನಿರ್ಮಿಸಿದ ದ್ವಾರಪಾಲಕ ವಿಗ್ರಹವಿದೆ. ಸಭಾ ಮಂಟಪದಲ್ಲಿ ಹಾಳಾದ ಪಾನವಟ್ಟವಿದೆ.

ಹುಲಿಗಿ ಪರಿಸರದಲ್ಲಿ ಶೈವ ಧರ್ಮ ಹೆಚ್ಚು ಪ್ರಬಲವಾಗಿತ್ತು ಎನ್ನುವುದಕ್ಕೆ ಕೆಲವು ಪ್ರಚಲಿತ ನಂಬಿಕೆ ಮತ್ತು ಆಚರಣೆಗಳನ್ನು ದೃಷ್ಟಿ ಗಮನಿಸಬಹುದು.

ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದ ಶಿಖರ ದರ್ಶನವು ಬಹಳ ಮುಖ್ಯವಾದದ್ದು. ಶ್ರೀವಿರೂಪಾಕ್ಷ ದೇವಾಲಯಕ್ಕೆ ಐದು ಕಳಸ ಐದು ಶಿಖರಗಳಿದ್ದು ಈ ಕಳಸ ಶಿಖರ ದರ್ಶನ ಪಡೆಯುವಲ್ಲಿ ಪಾಲಿಸಲಾಗುವ ಕ್ರಮ ಮತ್ತು ಮಾರ್ಗವು ಈ ಕೆಳಗಿನಂತಿದೆ.

ದೇವಾಲಯದ ರಾಯಗೋಪುರದಿಂದ ಒಳಗೆ ಹೋದಾಗ ಗೋಪುರದ ಪಕ್ಕದಲ್ಲಿ ಸೂರ್ಯ ಗುಡಿಯ ಹತ್ತಿರ 'ಪಂಚಶಿಖರ' ಎಂದು ಹಾಸುಗಲ್ಲಿನ ಮೇಲೆ ಬರೆದಿರುವ ಸ್ಥಳದಿಂದ ದೇವಾಲಯದ ಗೋಪುರ ನೋಡಿದರೆ ಪಂಚಕಳಸ ಮತ್ತು ಪಂಚ ಶಿಖರದ ದರ್ಶನದ ಪಡೆಯಬಹುದು ಹಾಗೂ ಆ ಸ್ಥಳ ಮತ್ತು ವೀಕ್ಷಣೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಪಂಚಕಳಸ ಮತ್ತು ಪಂಚ ಶಿಖರ ದರ್ಶನವಾಗುವುದಿಲ್ಲಾ ಎಂಬುದು ಗಮನಾರ್ಹ ಅಂಶ ಇಲ್ಲಿನ ಅಧಿ ದೇವತೆ ವಿರೂಪಾಕ್ಷನು ಪಂಚಮುಖಗಳಿಂದ ದರ್ಶನ ನೀಡುತ್ತಿದ್ದಾನೆಂಬುದು ಇಲ್ಲಿಯ ಸ್ಥಳೀಯರ ನಂಬಿಕೆ. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ಸ್ಥಳದಿಂದ ಸೋಮನಾಥೇಶ್ವರ ಹುಲಿಗಿ, ಮಾತಂಗೇಶ್ವರ ಶಿವಪುರ, ವಾಣಿಭದ್ರೇಶ್ವರ ಬುಕ್ಕಸಾಗರ, ಜಂಬುನಾಥೇಶ್ವರ ಹೊಸಪೇಟೆ, ಕಿನ್ನರೇಶ್ವರ ಈ ಐದು ಕ್ಷೇತ್ರಗಳ ದರ್ಶನ ಭಾಗ್ಯವು ಈ ಪಂಚ ಕಳಸ ಶಿಖರ ದರ್ಶನದಿಂದ ದೊರಕುತ್ತದೆ ಎಂಬ ಪ್ರತೀತಿ ಇಲ್ಲಿದೆ ಶಿವರಾತ್ರಿಯ ಸಂದರ್ಭದಲ್ಲಿ ಪಂಚಕ್ಷೇತ್ರಗಳ ದರ್ಶನ ಪಡೆದು ಶ್ರೀ ವಿರೂಪಾಕ್ಷನ ದರ್ಶನ ಪಡೆದರೆ ಅಧಿಕ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಸ್ಥಳೀಯ ನಂಬಿಕೆ (ಪಿ.ಎಸ್.ವಾಸುದೇವನ್, ೨೦೧೦ ಪು:೨೪೧).

ವೈಷ್ಣವ ದೇವಾಲಯಗಳು

೧.	ಗ್ರಾಮ	:	ಹುಲಿಗಿ
	ಹೆಸರು	:	ಸುಬ್ರಹ್ಮಣ್ಯ ದೇವಾಲಯ
	ಸ್ಥಳ	:	ಸೋಮೇಶ್ವರ ದೇವಾಲಯದ ಆವರಣ
	ಕಾಲ	:	ಕ್ರಿ.ಶ.೧೨-೧೩ ನೇ ಶತಮಾನ
	ರಾಜವಂಶ	:	ಕಲ್ಯಾಣ ಚಾಲುಕ್ಯ
	ದಿಕ್ಕು	:	ಪೂರ್ವ
	ಸ್ಥಿತಿ	:	ಕನಿಷ್ಠ

ಪ್ರಕಟಣೆ : ವೈ.ಸೋಮಶೇಖರರವರ ಅಪ್ರಕಟಿತ ಲೇಖನ.

ಈ ದೇವಾಲಯ ಗರ್ಭಗೃಹ ಮತ್ತು ಅಂತರಾಳಗಳನ್ನು ಒಳಗೊಂಡ ಚಿಕ್ಕ ದೇವಾಲಯಯ ಈ ದೇವಾಲಯವು ಉಪಾನ, ಜಗತಿ, ಕಂಠ, ತ್ರಿಪಟ್ಟ ಕುಮುದ ಮತ್ತು ಕಪೋತಗಳಿಂದ ಕೂಡಿದ ಅಧಿಷ್ಠಾನದ ಮೇಲೆ ಸರಳವಾದ ಭಿತ್ತಿಯಿದೆ. ಕಪೋತ ಭಾಗವು ಮುಂಚಾಚಿರುವುದಿಲ್ಲ. ಗರ್ಭಗೃಹದ ಮೇಲಿನ ಶಿಖರವು ದ್ರಾವಿಡ ಶೈಲಿಯದಾಗಿದ್ದು ಗ್ರೀವ ಮತ್ತು ಶಿಖರವನ್ನೊಳಗೊಂಡಿದೆ.

೨. ಗ್ರಾಮ : ಹುಲಿಗಿ

ಹೆಸರು : ಗಣೇಶ

ಸ್ಥಳ : ಸೋಮೇಶ್ವರ ದೇವಾಲಯದ ಆವರಣ

ಕಾಲ : ಜೀರ್ಣೋದ್ಧಾರ ಮಾಡಲಾಗಿದೆ. ಕ್ರಿ.ಶ.೧೩ ನೇ ಶತಮಾನ

ರಾಜವಂಶ : ಕಲ್ಯಾಣ ಚಾಲುಕ್ಯ

ದಿಕ್ಕು : ಪೂರ್ವ

ಪ್ರಕಟಣೆ : ಎಸ್.ವೈ.ಸೋಮಶೇಖರರವರ ಅಪ್ರಕಟಿತ ಲೇಖನ.

ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳು ಹಾಗೂ ಸಭಾಮಂಟಪದಲ್ಲಿ ಕಕ್ಷಾಸನ ಮತ್ತು ಗರ್ಭಗೃಹದಲ್ಲಿ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದಲ್ಲಿ ೧೨ ಕಂಬಗಳಿವೆ. ಇವು ಚಚ್ಚೌಕ ಪೀಠದ ಮೇಲೆ ಪಾದವು ಚಚ್ಚೌಕವಾಗಿದ್ದು, ಮೇಲ್ಭಾಗ ನಾಲ್ಕು, ಎಂಟು ಮತ್ತು ಹದಿನಾರು ಮುಖಗಳಲ್ಲಿದ್ದು, ಮೇಲೆ ವೃತ್ತಾಕಾರದ ಘಟ, ಚಚ್ಚೌಕ ಫಲಕ ಹಾಗೂ ಬೋದಿಗೆಗಳು ಇವೆ. ದೇವಾಲಯವನ್ನು ಒರಭಾಗ ಉಪಾನ, ಜಗತಿ, ಕಂಠ ಮತ್ತು ಕಪೋತಗಳಿಂದ ಕೂಡಿದ ಅಧಿಷ್ಠಾನದ ಮೇಲೆ ಸರಳವಾದ ಭಿತ್ತಿಯಿದ್ದು ಮೇಲ್ಭಾಗದ ಕಪೋತವು ಸ್ವಲ್ಪ ಮುಂಚಾಚಿದೆ. ತೆರೆದ ಸಭಾಮಂಟಪ ಮುಂಚಾಚಿರುವುದನ್ನು ಕಾಣಬಹುದು.

೩. ಗ್ರಾಮ : ಆನೆಗೊಂದಿ

ಹೆಸರು : ಗವಿರಂಗನಾಥ ದೇವಾಲಯ

ಸ್ಥಳ : ಆನೆಗೊಂದಿ ಸಾಣಾಪುರ ರಸ್ತೆಯಲ್ಲಿ

ಕಾಲ : ಕ್ರಿ.ಶ.೧೬ ನೇ ಶತಮಾನ

ರಾಜವಂಶ : ವಿಜಯನಗರ

ದಿಕ್ಕು : ಉತ್ತರ

ಸ್ಥಿತಿ : ಮಧ್ಯಮ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪುಟ-೮೫

ಈ ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಸಭಾಮಂಟಪ ಒಳಗೊಂಡಿವೆ. ಗರ್ಭಗೃಹದ ಪ್ರವೇಶದ್ವಾರದ ಶಾಖೆಗಳಲ್ಲಿ ಕುಂಭಗಳು ಅವುಗಳ ಮೇಲೆ ಅರ್ಧಕಂಬಗಳು, ಲಲಾಟಬಿಂಬದಲ್ಲಿ ಪದ್ಮಗಳಿವೆ. ಹುಟ್ಟು ಬಂಡೆಯಲ್ಲಿ ಕೆತ್ತಲ್ಪಟ್ಟಿರುವ ಭಕ್ತನ ಶಿಲ್ಪವೊಂದು ಗರ್ಭಗೃಹದ ಮಧ್ಯದಲ್ಲಿದೆ. ಶಿಲ್ಪ ರಹಿತವಾಗಿರುವ ಈ ದೇವಾಲಯ ಗವಿಯಲ್ಲಿರುವುದರಿಂದ ಇದನ್ನು ಗವಿರಂಗನಾಥನೆಂದು ಕರೆಯುವುದು ಸ್ಥಳೀಯವಾಡಿಕೆ.

ತೆರೆದ ಸಭಾಮಂಟಪದಲ್ಲಿ ಎರಡು ಮೂಲೆಕಂಬಗಳು, ಎರಡು ಅರ್ಧಕಂಬಗಳು ಹಾಗೂ ಎರಡು ಕಂಬಗಳಿವೆ. ಚೌಕಾಕಾರವಾಗಿರುವ ಈ ಕಂಬಗಳಲ್ಲಿ ನರಸಿಂಹ, ಶಿವಲಿಂಗಕ್ಕೆ ಹಾಲೆರೆಯುವ ಹಸು, ವಿಷ್ಣು,

ಯತಿ, ಭೈರವಿ, ಆಂಜನೇಯ, ವೀರಭದ್ರ, ಗರುಡ ಶಿವಪಾರ್ವತಿಯರ ಉಬ್ಬುಶಿಲ್ಪಗಳಿವೆ. ಸಭಾಮಂಟಪದ ಸ್ವಲ್ಪ ಮುಂದಿನ ಭಾಗವನ್ನು ಇತ್ತೀಚೆಗೆ ಸೇರ್ಪಡೆಗೊಳಿಸಲಾಗಿದೆ. ಪ್ರವೇಶವನ್ನು ಹೊರತುಪಡಿಸಿ ಸುತ್ತಲೂ ಕಣಶಿಲೆಯಲ್ಲಿ ನಿರ್ಮಿಸಿದ ಗೋಡೆ, ದೇವಾಲಯದ ಪೂರ್ವಕ್ಕೆ ಇಟ್ಟಿಗೆ ಗಾರೆಗಳಿಂದ ಕಟ್ಟಿರುವ ದ್ವಿತಲಗಳಿಂದ ಕೂಡಿದ ದ್ವಾರ ಗೋಪುರವಿದೆ. ಈ ಗೋಪುರವು ವಿಜಯನಗರ ಶೈಲಿಯಲ್ಲಿದ್ದು, ಇದರಲ್ಲಿ ವಿವಿಧ ಬಗೆಯ ಗಾರೆಶಿಲ್ಪಗಳು, ಶಾಲ ಕೂಟಗಳಿಂದ ಅಲಂಕರಗೊಳಿಸಲಾಗಿದೆ.

೪.	ಗ್ರಾಮ	:	ಹೊಸೂರು
	ಹೆಸರು	:	ಗೋಪಾಲಕೃಷ್ಣದೇವಾಲಯ
	ಸ್ಥಳ	:	ತುಂಗಭದ್ರ ನದಿ ದಂಡೆ
	ಕಾಲ	:	ಕ್ರಿ.ಶ.೧೫ ನೇ ಶತಮಾನ
	ರಾಜವಂಶ	:	ವಿಜಯನಗರ
	ದಿಕ್ಕು	:	ಪಶ್ಚಿಮ

ಪ್ರಕಟಣೆ : ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಪು-೧೩೨

ಈ ದೇವಾಲಯದಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ಕೂಡಿದೆ. ಸಭಾಮಂಟಪದ ಪ್ರವೇಶದ ಇಕ್ಕೆಲಗಳಲ್ಲಿರುವ ಎರಡು ಕಂಬಗಳು ಉಬ್ಬುಶಿಲ್ಪಗಳಿಂದ ಕೂಡಿವೆ. ಗರ್ಭಗೃಹದ ಪ್ರವೇಶ ದ್ವಾರ ಸದಾ ಕೆತ್ತನೆಯಲ್ಲಿದ್ದು, ಲಲಾಟ ಬಿಂಬದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹದಲ್ಲಿ ಭಿತ್ತಿಶಿಲ್ಪ ಚಕ್ರ, ಶಂಖ, ಕೊಳಲು ಹಿಡಿದು ನಿಂತ ಗೋಪಾಲಕೃಷ್ಣನ ಮೂರ್ತಿಶಿಲ್ಪಗಳಿವೆ. ಕೊಳಲಿನ ನಾದವನ್ನು ಸುತ್ತಲಿರುವ ಹಸುಗಳು ಆಲಿಸುತ್ತವೆ. ಗರ್ಭಗೃಹದ ಪ್ರವೇಶದ್ವಾರದ ಲಲಾಟಬಿಂಬದಲ್ಲಿರುವ ಗಣೇಶನ ಶಿಲ್ಪವನ್ನು ಗಮನಿಸಿದರೆ, ಜೀರ್ಣೋದ್ಧಾರದ ವೇಳೆಯಲ್ಲಿ ವಿಷ್ಣುವಿನ ವಿಗ್ರಹವನ್ನು ಪ್ರತಿಷ್ಠಾಪಿಸಿದಂತೆ ಕಾಣುತ್ತದೆ.

ಜೈನ ದೇವಾಲಯಗಳು

ವೇದಕಾಲದಲ್ಲಿ ವೈದಿಕರು ಅಗ್ನಿರೂಪದಲ್ಲಿ ದೇವರನ್ನು ಪೂಜಿಸುತ್ತಿದ್ದರು. ಭಾರದಲ್ಲಿ ಮೊದಲು ಪೂಜಾಗೃಹ ನಿರ್ಮಿಸಿದ ಕೀರ್ತಿ ಬೌದ್ಧರಿಗೆ ಸಲ್ಲುತ್ತದೆ. ಬೌದ್ಧ ಸ್ತೂಪಗಳೇ ಮೊದಲು ಪೂಜ್ಯವಸ್ತುಗಳಾದವು. ಸ್ತೂಪಗಳೇ ಮುಂದೆ ಚೈತಾಲಯಗಳಾಗಿ ನಂತರ ಸ್ವಲ್ಪ ಬದಲಾವಣೆ ಆಗಿ ದೇವಾಲಯ ಜಿನಾಲಯ ಅಥವಾ ಬಸದಿ ಆಯಿತು. ಕ್ರಿ.೨-೩ನೇ ಶತಮಾನದಲ್ಲಿ ಮೊಟ್ಟ ಮೊದಲಿಗೆ ಜೈನರು ತಮ್ಮದೇ ಆದ ಪೂಜಾಲಯ ನಿರ್ಮಿಸಿದರು. ಮೊದಲು ವೇದಿಕೆಯ ಮೇಲೆ ಜಿನನ ಪಾದಗಳನ್ನಿಟ್ಟು ದೀಪ ಹಚ್ಚುತ್ತಿದ್ದರು (ಶ್ರೀನಿವಾಸನ್ ಕೆ.ಆರ್., ೧೯೭೫, ಪು:೧೬). ತೀರ್ಥಂಕರರಿಗಾಗಿ ಕಟ್ಟಿದ ದೇವಾಲಯಗಳನ್ನು ಅಥವಾ ಜಿನಾಲಯವನ್ನು ಬಸದಿ ಎಂದು ಕರೆಯಲಾಗುತ್ತದೆ. ದೇವರ ಇರುವಿಕೆಗಾಗಿ ಕಟ್ಟಿದ ದೇವಾಲಯಗಳಂತೆ, ಜಿನಮುನಿಗಳ ಇರುವಿಕೆಗಾಗಿ ಕಟ್ಟಿದ ಮಂದಿರ ಜಿನಾಲಯ ಅಥವಾ ಬಸದಿ ಎನ್ನಲಾಗುತ್ತದೆ (ಭಟ್‌ಸೂರಿ ಕೆ.ಜಿ., ೨೦೧೧, ಪುಟ-೨೮).

ಜೈನರು ಸೃಷ್ಟಿಕರ್ತ ದೇವರನ್ನು ಒಪ್ಪುವುದಿಲ್ಲ. ಜೈನರು ತೀರ್ಥಂಕರರನ್ನು ಪೂಜಿಸುತ್ತಾರೆ. ಏಕೆಂದರೆ ಇವರು ಆದರ್ಶ ಮಾನವರು, ಪೂಜನೀಯರು. ಈ ದಿವ್ಯದತ್ತವಾದ ಕಲ್ಪನೆ ಸಮಾಜದ ಮೇಲೆ ಪ್ರಭಾವ ಬೀರಿದ್ದರಿಂದ ಇದೇ ಜಿನಾಲಯ ಅಥವಾ ಬಸದಿಗಳ ರಚನೆಯಾಯಿತು. ಸಂಸ್ಕೃತದ ಈ ವಸತಿ ಶಬ್ಧ ವಸದಿಯಾಗಿ ಕಾಲ ಕ್ರಮೇಣ ಬಸದಿ ರೂಪ ಪಡೆಯಿತು (ಶೆಟ್ಟಿ ಎಸ್.ಡಿ., ೧೯೯೯, ಪು:೩). ಕರ್ನಾಟಕದಲ್ಲಿ ಬಸದಿ ಪದ ಪ್ರಯೋಗ ಮೊದಲು ಕ್ರಿ.ಶ.೮ನೇ ಶತಮಾನದ ಶ್ರವಣಬೆಳಗೊಳದ ಶಾಸನದಲ್ಲಿ ದಾಖಲಿಸಿದೆ (ಎ.ಕ.೨, ನ-೧೪೦). ಜೈನಧರ್ಮ ಉತ್ತರ ಭಾರತದಿಂದ ದಕ್ಷಿಣಕ್ಕೆ ಬರುವಾಗ ವೈವಿಧ್ಯತೆಯ ಲಕ್ಷಣಗಳನ್ನು ಒಟ್ಟುಗೂಡಿಸಿಕೊಂಡಿದ್ದವು. ಉದಾ ತೀರ್ಥಂಕರರ ಮೂರ್ತಿ ನಿರ್ಮಾಣ ಜೈತ್ಯಾಲಯ ರಚನೆ, ಯಕ್ಷ-ಯಕ್ಷಿಯರು, ಬ್ರಹ್ಮಮೂರ್ತಿ, ನಾಗಶಿಲ್ಪ ರಚನೆ ಇವೆಲ್ಲವೂ ಉತ್ತರ ಭಾರತದಲ್ಲಿ ಬೆಳೆದ ಸಂಪ್ರದಾಯಗಳೇ ಆಗಿದ್ದವು. ಆದರೂ ಈ ಸಂಪ್ರದಾಯ ಕನ್ನಡ ನಾಡಿಗೆ ಬಂದ ನಂತರ ಕನ್ನಡ ನಾಡಿನ ಪ್ರಾದೇಶಿಕತೆಗೆ ಅನುಗುಣವಾಗಿ ಇಲ್ಲಿಯ ಸಂಪ್ರದಾಯ ಅಳವಡಿಸಿಕೊಂಡು ವಾಸ್ತುಶೈಲಿಯ ದೃಷ್ಟಿಯಿಂದ ಮಹತ್ವದ ಕೊಡುಗೆ ನೀಡಿದೆ (ಶ್ರೀನಿವಾಸ ಪಾಡಿಗಾರ, ಜಿನತಿಲಕ, ಡಿಸೆಂಬರ್, ೨೦೦೪, ಜನವರಿ, ೨೦೦೫, ಪು:೧೧೪). ಪ್ರಾರಂಭದ ಹಂತದಲ್ಲಿ ಬಸದಿಯ ಕಟ್ಟಡಗಳು ಗರ್ಭಗೃಹ ಹೊಂದಿದ್ದು ಕಾಲಕ್ರಮೇಣ ಸುಕನಾಸಿ, ಮಂಟಪ, ಮುಖಮಂಟಪಗಳ ರಚನೆ ಆಯಿತು, ಬಸದಿಯ ಮುಂದೆ ವಾಸ್ತುವಿನ ಅಂಗವಾಗಿ ಮಾನಸ್ತಂಭ, ಬ್ರಹ್ಮಸ್ತಂಭಗಳು ನಿರ್ಮಾಣವಾದವು. ಮಾನಸ್ತಂಭದ ಮೇಲೆ ಚಿಕ್ಕ ಮಂಟಪಗಳು ಖಡ್ಗಾಸನದಲ್ಲಿ ಜಿನಬಿಂಬವಿದ್ದರೆ, ಬ್ರಹ್ಮಸ್ತಂಭಗಳ ಮೇಲ್ಭಾಗದಲ್ಲಿ ಕುಳಿತ ಬ್ರಹ್ಮನ ಮೂರ್ತಿ ಇರುತ್ತದೆ. ಇದು ಕರ್ನಾಟಕದಲ್ಲೇ ಜೈನ ವಾಸ್ತು ವಿಶೇಷತೆ (ಡಾ.ಕೆ.ಜಿ.ಭಟ್‌ಸೂರಿ, ೨೦೧೧, ಪು:೧೮). ಕರ್ನಾಟಕದ ಎಲ್ಲಾ ಪ್ರಮುಖವಾದ ಅರಸು ಮನೆತನಗಳು ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಜೈನಧರ್ಮವನ್ನು ಪೋಷಿಸಿದ್ದಾರೆ. ವಿಜಯನಗರ ಕಾಲದಲ್ಲಿ ಸಾಮ್ರಾಜ್ಯ ಕಟ್ಟಲು ನೆರವಾದ ವೀರರಲ್ಲಿ ಜೈನರು ಪ್ರಮುಖರೆಂಬುದನ್ನು ಮರೆಯಲಾಗದು.

ಪ್ರಸ್ತುತ ಕೊಪ್ಪಳವನ್ನು ಜೈನರ ಕಾಶಿ ಎಂದು ಕರೆದಿರುವರು (ಡಿ.ಎಸ್.ಅಶ್ವಥ್, ೨೦೧೧, ಪು:೩೫). ಈ ಪ್ರದೇಶದಲ್ಲಿ ಜೈನಧರ್ಮ ಹೆಚ್ಚು ಜನಪ್ರಿಯವಾಗಿತ್ತು. ಪ್ರಸ್ತುತ ಕೊಪ್ಪಳ ಜಿಲ್ಲೆಯಲ್ಲಿರುವ ಹುಲಿಗಿ ಪರಿಸರದಲ್ಲಿಯು ಜೈನ ಧರ್ಮ ಇತ್ತು ಎಂಬುವುದಕ್ಕೆ ಇಲ್ಲಿರುವ ಜೈನಬಸದಿಯೇ ಸಾಕ್ಷಿ ಈ ಬಸದಿಯ ವಾಸ್ತುಕಲೆಯ ವಿಶೇಷತೆಗಳನ್ನು ಅರಿಯುವ ಪ್ರಯತ್ನ ಇದಾಗಿದೆ.

ಹುಲಿಗಿ ಗ್ರಾಮದ ಪೂರ್ವಕ್ಕೆ ಜೈನಬಸದಿ ಇದೆ. ಪಶ್ಚಿಮಾಭಿಮುಖವಾಗಿ ಬಸದಿಯನ್ನು ನಿರ್ಮಿಸಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದ ತ್ರಿಕೂಟ ಬಸದಿ ಬಸದಿಯಲ್ಲಿ ಮೂರು ಗರ್ಭಗೃಹಗಳು, ಅಂತರಾಳ, ನವರಂಗ ಮತ್ತು ಸಭಾಮಂಟಪಗಳಿವೆ. ಬಸದಿಯ ಮುಂಭಾಗದಲ್ಲಿ ಮಾನಸ್ತಂಭವಿದೆ. ಬಸದಿಯ ಪಕ್ಕದಲ್ಲಿ ಎಡಭಾಗದಲ್ಲಿ ಬ್ರಹ್ಮನ ದೇವಾಲಯವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಬಸದಿಯ ಗರ್ಭಗೃಹವು ಚೌಕಾಕಾರವಾಗಿದೆ. ಗರ್ಭಗೃಹದ ಲಲಾಟ ಬಿಂಬಿದಲ್ಲಿ ಯಾವುದೇ ಕೆತ್ತನೆ ಇರದೇ ಮೂಲರೂಪದಲ್ಲಿರುವುದೇ ವಿಶೇಷತೆ. ಇತ್ತೀಚಿಗೆ ಸ್ವಸ್ತಿಕ್ ಚಿಹ್ನೆಯನ್ನು ಚಿತ್ರಿಸಲಾಗಿದೆ. ಆಯತಾಕಾರದ ಪೀಠದಲ್ಲಿ ಪಾರ್ಶ್ವನಾಥ ತೀರ್ಥಂಕರನ ಕುಳಿತ ಭಂಗಿಯಲ್ಲಿರುವ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಪಾರ್ಶ್ವನಾಥನ ಎರಡೂ ಪಕ್ಕಗಳಲ್ಲಿ ಇನ್ನೆರಡು ತೀರ್ಥಂಕರರ ಕುಳಿತ ಭಂಗಿಯ ಮೂರ್ತಿಶಿಲ್ಪಗಳಿವೆ. ಇವುಗಳನ್ನು ಸುಮಾರು ೧೯೬೦ರ ದಶಕದಲ್ಲಿ ಸ್ಥಾಪಿಸಲಾಗಿದೆ. ಪಾರ್ಶ್ವನಾಥ ತೀರ್ಥಂಕರ ಇರುವ ಪೀಠದ ಕೆಳಭಾಗದಲ್ಲಿ ಪದ್ಮಾವತಿ ಯಕ್ಷಿಯ ಮೂರ್ತಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

ಇತ್ತೀಚಿಗೆ ಪಾರ್ಶ್ವನಾಥ ಇಕ್ಕೆಲಗಳಲ್ಲಿ ಅಮೃತ ಶಿಲೆಯ ಕುಳಿತ ತೀರ್ಥಂಕರ ಮೂರ್ತಿಶಿಲ್ಪಗಳಿವೆ. ಪಾರ್ಶ್ವನಾಥನ ಮುಂಭಾಗದಲ್ಲಿ ೨೪ ತೀರ್ಥಂಕರರು ಮತ್ತು ಇಬ್ಬರೂ ಯಕ್ಷರುವ ಕಂಚಿನ ಮೂರ್ತಿಯು ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಕುಳಿತ ಭಂಗಿಯಲ್ಲಿರುವ ಜಿನನ ಮೂರ್ತಿಶಿಲ್ಪವಿದೆ. ಮೂರ್ತಿಯ ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಜಿನನ ಮೂರ್ತಿ ಶಿಲ್ಪಕ್ಕೆ ಬಂಗಾರದ ವರ್ಣವನ್ನು ಲೇಪಿಸಲಾಗಿದೆ.

ಗರ್ಭಗೃಹದ ಮುಂದೆ ಅಂತರಾಳವಿದೆ. ಇದು ಚೌಕಾಕಾರವಾಗಿದ್ದು, ಸರಳವಾಗಿ ಯಾವುದೇ ಅಲಂಕರಣೆ ಮತ್ತು ಶಿಲ್ಪಗಳನ್ನು ಹೊಂದಿಲ್ಲ. ಅಂತರಾಳದ ಛತ್ತಿನ ಭಾಗದಲ್ಲಿರುವ ಭುವನೇಶ್ವರಿಯು ಸರಳವಾಗಿ, ಅಲಂಕರಣರಹಿತವಾಗಿದೆ. ಅಂತರಾಳದ ಮುಂಭಾಗದಲ್ಲಿ ಚೌಕಾಕಾರದ ನವರಂಗವಿದೆ. ನವರಂಗದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳಿವೆ. ಅವುಗಳ ನಡುವೆ ಕಿರು ವೇದಿಕೆಯಿದೆ. ಈ ವೇದಿಕೆ ಮೇಲೆ ಶ್ರುತಸ್ಕಂದವನ್ನು ಇಡಲಾಗಿದೆ. ಜೈನ ಧರ್ಮದಲ್ಲಿ ಶ್ರುತದೇವಿಯನ್ನು ಸರಸ್ವತಿ ಎಂತಲೂ ಕರೆಯುತ್ತಾರೆ.

ನವರಂಗವು ಸುಮಾರು ೧೮ ಅಡಿ ಉದ್ದ ಮತ್ತು ೧೮ ಅಡಿ ಅಗಲದಷ್ಟು ವಿಶಾಲವಾಗಿದೆ. ನವರಂಗದಲ್ಲಿ ನಾಲ್ಕು ಸ್ತಂಭಗಳು ಹಾಗೂ ಸಭಾಮಂಟಪದಲ್ಲಿ ಆರುಸ್ತಂಭಗಳಿವೆ. ಎಲ್ಲಾ ಸ್ತಂಭಗಳು ಒಂದೇ ಮಾದರಿಯಲ್ಲಿವೆ. ಸ್ತಂಭಗಳು ಪೀಠದ ಮೇಲೆ ಚಾರಸದ ಮೇಲೆ ಲತಾ ಸುರುಳಿಯಿಂದ ಮೇಲೇರುತ್ತಾ ಬೋಧಿಗೆಗಳನ್ನೊಳಗೊಂಡಿದೆ. ಈ ಸರಳ ಶೈಲಿಯಿಂದ ಇವುಗಳು ಕಲ್ಯಾಣ ಚಾಲುಕ್ಯರ ಪ್ರಾರಂಭಿಕ ಕಾಲದ್ದೆಂದು ಗುರುತಿಸಬಹುದು. ನವರಂಗದ ಬಲಭಾಗದ ಮೂಲೆಯಲ್ಲಿ ಪಾರ್ಶ್ವನಾಥನ ಭಿನ್ನಗೊಂಡ ಮೂರ್ತಿಶಿಲ್ಪವಿದೆ.

ನವರಂಗದ ಮುಂಭಾಗದಲ್ಲಿ ಸಭಾಮಂಟಪವಿದೆ. ಅಂದರೆ ಸಭೆ ನಡೆಯುವ ಸ್ಥಳ. ಧಾರ್ಮಿಕ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಸ್ಥಳ.

ಸಭಾಮಂಟಪವು ನವರಂಗಕ್ಕಿಂತ ವಿಶಾಲಾಗಿದ್ದು, ಅದರಲ್ಲಿ ನಾಲ್ಕು ಭಾಗಗಳಲ್ಲಿ ಕಕ್ಷಾಸನವಿದೆ. ಪಶ್ಚಿಮ ಭಾಗದಲ್ಲಿರುವ ಕಕ್ಷಾಸನವು ವಿಶಾಲಾಗಿದ್ದು, ಅಲ್ಲಿನಭಿತ್ತಿಯ ಭಾಗದಿಂದ ಆರಂಭಗೊಂಡು ದಕ್ಷಿಣ ಗೋಡೆಯವರೆಗೆ ಇಂಗ್ಲೀಷ್ ಅಕ್ಷರ ಎಲ್ ನಂತೆ ತಿರುವು ಪಡೆಯುತ್ತದೆ. ಇದರ ನೇರಕ್ಕೆ ಪಶ್ಚಿಮದಿಂದ ಉತ್ತರದ ಭಿತ್ತಿಯವರೆಗೆ ಇದೇ ಆಕಾರದ ಕಕ್ಷಾಸನವಿದೆ. ಸಭಾ ಮಂಟಪದಲ್ಲಿ ಎರಡು ಗರ್ಭಗೃಹಗಳು

ಪರಸ್ಪರ ಉತ್ತರ ಮತ್ತು ದಕ್ಷಿಣಾಭಿಮುಖವಾಗಿವೆ. ಇವುಗಳನ್ನು ಒಳಭಾಗದ ನವರಂಗದ ಭಿತ್ತಿಗೆ ಅನುಗುಣವಾಗಿ ಅಂತರಾಳದ ಮುಂಭಾಗದಲ್ಲಿರುವ ನವರಂಗದಲ್ಲಿರುತ್ತವೆ. ಆದರೆ ಇಲ್ಲಿ ಸಭಾ ಮಂಟಪದಲ್ಲಿವೆ. ಇದೇ ಈ ಬಸದಿಯ ವೈಶಿಷ್ಟ್ಯ. ಉತ್ತರಾಭಿಮುಖವಾಗಿರುವ ಗರ್ಭಗೃಹದಲ್ಲಿ ಸಿಸ್ಟ್ ಶಿಲೆಯ ಪಿರಮಿಡ್ಡು ಆಕಾರದ ತ್ರಿಕಾಲ ತೀರ್ಥಂಕರರ ಉಬ್ಬುಶಿಲ್ಪವಿರುವ ಶಿಲ್ಪವಿದೆ. ಈ ಶಿಲ್ಪವನ್ನು ನೋಡಿದಾಗ ಪಿರಮಿಡ್ಡು ಅಥವಾ ದೇವಾಲಯದ ಶಿಖರ ಭಾಗದಂತೆ ಕಾಣುತ್ತದೆ.

ದಕ್ಷಿಣಾಭಿಮುಖವಾಗಿರುವ ಗರ್ಭಗೃಹವು ಆಕಾರ ಮತ್ತು ಅಳತೆಯಲ್ಲಿ ಉತ್ತರಾಭಿಮುಖ ಗರ್ಭಗೃಹದಂತಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಪೀಠದ ಮೇಲೆ ಕುಳಿತ ಮಹಾವೀರನ ಕರಿಶಿಲೆಯ ಶಿಲ್ಪವಿದೆ. ಈ ಶಿಲ್ಪವು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ (ಸಿ.ಎಸ್.ವಾಸುದೇವನ್, ಅಪ್ರಕಟಿತ ಲೇಖನ).

ದೇವಾಲಯದ ಮುಂಭಾಗದಲ್ಲಿ ಬಾಗಿಲ ಎರಡೂ ಬದಿಗಳಲ್ಲಿ ಕೆಲವು ವಾಸ್ತು ಅವಶೇಷಗಳು ಮತ್ತು ನಾಗಶಿಲ್ಪಗಳಿವೆ. ಮುಂಭಾಗದಲ್ಲಿ ಉತ್ತರದ ಮಾನಸ್ತಂಭವಿದೆ. ಈ ಮಾನಸ್ತಂಭವಿದ್ದ ಜಾಗದಲ್ಲಿ ಹಳೆಯ ಮಾನಸ್ತಂಭ ವಿತ್ತು. ಇದರಲ್ಲಿ ಕೆಳಭಾಗದಲ್ಲಿ ಜಿನ ಮೂರ್ತಿಯ ಉಬ್ಬುಶಿಲ್ಪವಿದೆ. ಈ ಮಾನಸ್ತಂಭವನ್ನು ಬೇರೆ ಕಡೆ ಸ್ಥಳಾಂತರಿಸಲಾಗಿದೆ.

ಮುಖ್ಯ ದೇವಾಲಯಕ್ಕೆ ಗರ್ಭಗೃಹದ ಮೇಲ್ಭಾಗದಲ್ಲಿ ಇತ್ತೀಚೆಗೆ ಉದ್ದನೆಯ ಅಥವಾ ರೇಖಾನಾಗರ ಶಿಖರವನ್ನು ಹೋಲುವ ಸಿಮೆಂಟ್‌ಶಿಖರಭಾಗವಿದೆ. ಉದ್ದನೆಯ ಕಮಲದ ಮೊಗ್ಗಿನ ಆಕಾರವನ್ನು ಈ ಶಿಖರ ಹೊಂದಿದೆ. ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ನವರಂಗ ಭಾಗಗಳ ಭಿತ್ತಿಯನ್ನು ಆಯತಾಕಾರದ ಕಣಶಿಲೆಯ ಕಲ್ಲಿನಿಂದ ನಿರ್ಮಿಸಲಾಗಿದೆ. ಭಿತ್ತಿಯಲ್ಲಿ ಯಾವುದೇ ಅಲಂಕರಣೆಗಳಾಗಲಿ ಅಥವಾ ಉಬ್ಬುಶಿಲ್ಪಗಳ ಕೆತ್ತನೆಗಳಾಗಲಿ ಇಲ್ಲ. ಬಸದಿಯ ಅಧಿಷ್ಠಾನ ಭಾಗವು ಅತ್ಯಂತ ಸರಳವಾಗಿದ್ದು, ಉಪಾನ, ಕಂಠ ಮತ್ತು ಜಗತಿ ಭಾಗಗಳಿವೆ. ವಾಸ್ತುಶಿಲ್ಪ ಮತ್ತು ಹೊಸ ಶೈಲಿಯ ಆಧಾರಗಳಿಂದ ಕಲ್ಯಾಣ ಚಾಲುಕ್ಯರ ಪ್ರಾರಂಭಿಕ ಕಾಲ ಅಂದರೆ ಕ್ರಿ.ಶ.೧೧-೧೨ನೇ ಶತಮಾನದ್ದೆಂದು ಗುರುತಿಸಬಹುದು.

ಬಸದಿಯ ಈಶಾನ್ಯಕ್ಕೆ ಒಂದು ಬಾವಿಯಿದೆ. ಅದರಲ್ಲಿ ನೀರು ಇದ್ದು,ಪ್ರಸ್ತುತ ಕಲ್ಮಶಗಳಿಂದ ಕೂಡಿದೆ. ಈಶಾನ್ಯ ಭಾಗದ ಮೂಲೆಯಲ್ಲಿ ನಾಗದೇವತೆಯನ್ನು ನಾಗಶಿಲ್ಪ ಪ್ರತಿಷ್ಠಾಪಿಸಿದ್ದಾರೆ (ಸಿ.ಎಸ್.ವಾಸುದೇವನ್, ಅಪ್ರಕಟಿತ ಲೇಖನ).

ಅಧ್ಯಾಯ - ಐದು

ಮೂರ್ತಿಶಿಲ್ಪಗಳು

ಅಧ್ಯಾಯ - ಐದು

ಮೂರ್ತಿಶಿಲ್ಪಗಳು

ಪೀಠಿಕೆ

ಇತಿಹಾಸದ ಹಲವು ಅಂಶಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಹುಲಿಗಿ ಪರಿಸರ ಪ್ರಾಚೀನ ಕಾಲದಿಂದಲೂ ಮೂರ್ತಿಶಿಲ್ಪಕ್ಕೆ ತನ್ನದೇ ಆದ ವೈಶಿಷ್ಟ್ಯಪೂರ್ಣ ಕೊಡುಗೆ ನೀಡಿದೆ. ಇತಿಹಾಸವನ್ನು ರಚಿಸುವ ಆಕರಗಳಲ್ಲಿ ದೇವಾಲಯಗಳಂತೆ ಮೂರ್ತಿ ಶಿಲ್ಪವೂ ಒಂದು ಆಕರ. ದೇವತಾ ಮೂರ್ತಿಗಳಲ್ಲಿ ಎದ್ದು ಕಾಣುವ ಅಸ್ವಾಭಾವಿಕ ಸ್ವರೂಪ (ರಾಮಚಂದ್ರಮೂರ್ತಿ ಎಸ್.ಕೆ., ೧೯೭೫, ಪುಟ-೫೦). ಮೂರ್ತಿ ಶಿಲ್ಪ ರೂಪದಲ್ಲಿ ಕಾಣುವುದು. ಸುಮಾರು ಕ್ರಿ.ಪೂ.೧೨೦೦ರಷ್ಟು ಹಿಂದೆಯೇ ಚೀನಾದಲ್ಲಿ ಮೂರ್ತಿಶಿಲ್ಪವು ಜನ್ಮವೆತ್ತಿದೆ (ಪಿ.ಆರ್.ತಿಪ್ಪೇಸ್ವಾಮಿ, ೧೯೯೪, ಪುಟ-೭೮). ಹರಪ್ಪಾ, ಮೆಹಂಜೋದಾರೋಗಳಲ್ಲಿ ಮಣ್ಣಿನಲ್ಲಿ, ಮರದಲ್ಲಿ ಗೊಂಬೆಗಳನ್ನು ಮಾಡಿ ಮರದ ಬುಡದಲ್ಲಿ, ಕಟ್ಟೆಯ ಮೇಲೆ ಇಟ್ಟು ತಮಗೆ ತೋರಿಬಂದ ರೀತಿಯಲ್ಲಿ ಭಾವನಾತ್ಮಕವಾಗಿ ಅಂದು ಪೂಜಿಸುತ್ತಿದ್ದರು (ಸುಂದರ ಅ., ೧೯೯೮, ಪುಟ-೭೨). ಒಂದೊಂದು ದೇವರ ಮೂರ್ತಿಯು ಒಂದೊಂದು ಆಧ್ಯಾತ್ಮಿಕ ತತ್ವವನ್ನು ಒಳಗೊಂಡಿದೆ (ಚಿದಾನಂದ ಮೂರ್ತಿ, ೧೯೭೯, ಪುಟ-೧೩). ವಾಸ್ತು ಶಿಲ್ಪ ಅಥವಾ ವಾಸ್ತು ಅವುಗಳಿಗೆ ಅನುಗುಣವಾಗಿ ಮೂರ್ತಿ ಶಿಲ್ಪ ರಚನೆ ಆಗುತ್ತಿತ್ತು. ಅಂದಿನ ಧಾರ್ಮಿಕ ಮತೀಯ ಹಿನ್ನೆಲೆಯಲ್ಲಿ ಹೇಳುವುದಾದರೆ ಪ್ರಸ್ತುತ ಗಾಣಪತ್ಯ, ಶೈವ, ವೈಷ್ಣವ, ಮೂರ್ತಿಗಳು ಜೈನ ಪ್ರತಿಮೆಗಳು ಮೂರ್ತಿಶಿಲ್ಪಗಳಿಗೆ ಉದಾಹರಣೆಗಳಾಗಿವೆ. ಮೂರ್ತಿಶಿಲ್ಪದಲ್ಲಿ ಮೂರು ವಿಧ. ೧.ಸ್ಥಾನಿಕ, ೨.ಆಸೀನ, ೩.ಶಯನ ಮೂರ್ತಿಶಿಲ್ಪಗಳು.

ಪ್ರಸ್ತುತ ಹುಲಿಗಿ ಪರಿಸರದ ಮೂರ್ತಿಗಳಿಗೆ ಸೀಮಿತಮಾಡಿಕೊಂಡು ಇವುಗಳ ಪ್ರತಿಮಾ ಲಕ್ಷಣದ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ಗಾಣಪತ್ಯ

ಗಣಪತಿಯು ಭಾರತೀಯ ಜನರಿಗೆ ಶುಭ ಸಂಕೇತ ವಿಘ್ನಕಾರಕ, ಶಿವ ಬ್ರಹ್ಮಾಂಡ, ಸ್ಕಂದ, ಬ್ರಹ್ಮ, ವೈವರ್ತ, ಮತ್ಸ ಪದ್ಮ ಪುರಾಣಗಳು ಹಾಗೂ ರೂಪಮಂಡನ ಆಗಮಗಳು ಗಣಪತಿಯನ್ನು ಉಲ್ಲೇಖಿಸುತ್ತವೆ. ಶಿವಪುರಾಣವು ಗಣಪತಿಯ ಹುಟ್ಟಿನ ಬಗ್ಗೆ ತಿಳಿಸುತ್ತವೆ. ಗಣಪತಿಯು ನಾಲ್ಕು, ಆರು ಹತ್ತು ಹಾಗೂ ಹದಿನಾರು ಕೈಗಳನ್ನು ಹೊಂದಿರುತ್ತದೆ. ಗಣಪತಿ ಹಲವು ನಾಮಗಳು ಇವು ಬಾಲಗಣಪತಿ, ತರುಣ ಗಣಪತಿ ಹೇರಂಬ ಪ್ರಸಂಬ ಗಣಪತಿ, ಬಾಲಚಂದ್ರ ಹಾಗೂ ಏಕದಂತ ಶಿಲ್ಪಗಳಲ್ಲಿ ಗಣಪತಿಯನ್ನು ಸುಖಾಸನದಲ್ಲಿ ಕುಳಿತಂತೆ, ನಿಂತಂತೆ ಮತ್ತು ನೃತ್ಯ ಭಂಗಿಯಲ್ಲಿಯೂ ಕಾಣುವ ಸಾಮಾನ್ಯವಾಗಿ ಗಣಪತಿಯ ಶಿಲ್ಪಗಳು ಕುಳಿತ ಭಂಗಿಯಲ್ಲಿದ್ದು, ಆನೆ ಮುಖ ಸುತ್ತಿದ ಸೊಂಡಿಲು ವಕ್ರತುಂಡ ದೊಡ್ಡ ಹೊಟ್ಟೆ (ಮಹೋದರ) ನಾಲ್ಕು ಕೈಗಳಿಂದ ಕೂಡಿದವನಾಗಿ ಪಾಶ ಅಂಕುಶ ಅಭಯ ಮುದ್ರೆ ಸೊಂಡಿಲಲ್ಲಿ ಮೋದಕ ಧಾರಿಯಾಗಿರುವುದು ಕಂಡುಬರುತ್ತಾನೆ. (ದತ್ತಾತ್ರೇಯ ಜಿ., ಕುಲಕರ್ಣಿ,ಪುಟ-೨೩೬, ಅಪ್ರಕಟಿತ ಪ್ರಬಂಧ)

ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟಂತೆ ಹುಲಿಗಿ ಪರಿಸರದಲ್ಲಿ ಇರುವ ಕೆಲವು ಗಣಪತಿ ಶಿಲ್ಪಗಳನ್ನು ಗುರುತಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ.

೧.	ಗ್ರಾಮ	:	ಹುಲಿಗಿ
	ಶಿಲ್ಪ	:	ಗಣೇಶ
	ಸ್ಥಳ	:	ಸೋಮೇಶ್ವರ ದೇವಾಲಯದ ಆವರಣ
	ಕಾಲ	:	ಕ್ರಿ.ಶ.೧೩ ನೇ ಶತಮಾನ
	ಅಳತೆ	:	ಮೂರು ಅಡಿ
	ಕೈಗಳು	:	ನಾಲ್ಕು
	ಆಯುಧಗಳು	:	ಅಂಕುಶ, ಪಾಶ, ಲೇಖನಿ
	ಆಭರಣ	:	ಕರಂಡ, ಮುಕುಟ
	ಮಾಧ್ಯಮ	:	ಕಪ್ಪುಶಿಲೆ

ಒಂದು ಅಡಿ ಎತ್ತರದ ಪೀಠದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಕೈಗಳಲ್ಲಿ ಅಂಕುಶ, ಪಾಶವನ್ನು, ಕೆಳಗಿನ ಕೈಗಳಲ್ಲಿ ಲೇಖನಿ ಹಾಗೂ ಮೋದಕವನ್ನು ಹಿಡಿದಿದ್ದಾನೆ. ಗಣೇಶನ ಸೊಂಡಿಲು ಮೋದಕವನ್ನು ಮೂಸುತ್ತಿರುವಂತಿದೆ. ಹೊಟ್ಟೆಯ ಭಾಗವನ್ನು ನಿಧಿಯ ಆಸೆಯಿಂದ ಭಗ್ನಗೊಳಿಸಿ, ವಿರೂಪಗೊಳಿಸಲಾಗಿದೆ. ಕೆಳಭಾಗದ ಪೀಠದಲ್ಲಿ ವಾಹನವಾದ ಇಲಿಯನ್ನು ಚಿತ್ರಿಸಲಾಗಿದೆ.

೨.	ಗ್ರಾಮ	:	ಹುಲಿಗಿ
	ಶಿಲ್ಪ	:	ಗಣೇಶ
	ಸ್ಥಳ	:	ಸೋಮೇಶ್ವರ ದೇವಾಲಯದ ಆವರಣ
	ಕಾಲ	:	ಕ್ರಿ.ಶ.೧೩ ನೇ ಶತಮಾನ

ಅಳತೆ	:	ಮೂರು ಅಡಿ
ಕೈಗಳು	:	ನಾಲ್ಕು
ಆಯುಧಗಳು	:	ಅಂಕುಶ, ಪಾಶ, ಲೇಖನಿ
ಆಭರಣ	:	ಕರಂಡ, ಮುಕುಟ
ಮಾಧ್ಯಮ	:	ಕಪ್ಪುಶಿಲೆ

ಸುಖಾಸನದಲ್ಲಿ ಗಣೇಶ ಕುಳಿತ್ತಿದ್ದು, ತನ್ನ ಎಡಕೈಗಳಲ್ಲಿ ಅಂಕುಶ, ಮೋದಕವನ್ನು ಹಾಗೂ ಬಲಗೈಗಳಲ್ಲಿ ಪಾಶ ಲೇಖನಿಯನ್ನು ಹಿಡಿದಿದ್ದಾನೆ. ಗಣೇಶನ ಸೊಂಡಿಲು ಮೋದಕವನ್ನು ಮೂಸುತ್ತಿದೆ. ಇಲಿಯು ಗಣೇಶ ಹಿಡಿದಿರುವ ಮೋದಕವನ್ನೇ ವೀಕ್ಷಿಸುತ್ತಿದೆ.

೩.	ಗ್ರಾಮ	:	ಶಿವಪುರ
	ಶಿಲ್ಪ	:	ಗಣೇಶ
	ಸ್ಥಳ	:	ಪಾಳು ಬಸವ ಮಂಟಪದ ಬಳಿ
	ಕಾಲ	:	೧೪ನೇ ಶತಮಾನ
	ಕೈಗಳು	:	ನಾಲ್ಕು ಆದರೆ ಮುರಿದಿವೆ.
	ಆಯುಧಗಳು	:	-
	ಆಭರಣ	:	ಕರಂಡ, ಮುಕುಟ
	ಮಾಧ್ಯಮ	:	ಕಪ್ಪುಶಿಲೆ

ಶಿವಪುರ ಗ್ರಾಮದ ಊರ ಹೊರಗಿರುವ ಪಾಳು ಬಸವ ಮಂಟಪದ ಬಳಿ ಗಣೇಶನ ಮೂರ್ತಿಯಿದೆ. ಮೂರು ಕೈಗಳುಮುರಿದಿವೆ. ಎಡಕೈಯಲ್ಲಿ ಮೋದಕವನ್ನು ಹಿಡಿದಿದ್ದಾನೆ. ಹೊಟ್ಟೆ ಮತ್ತು ಮುಖದ ಅರ್ಧಭಾಗಗಳು ಭಗ್ನಗೊಂಡಿವೆ. ಸೊಂಡಿಲು ಮೋದಕವನ್ನು ಮೂಸಿನೋಡುತ್ತಿದೆ. ಶಿಲ್ಪದ ಕೆಳಗಡೆ ಇಲಿಯ ಚಿಕ್ಕದಾದ ಚಿತ್ರವಿದೆ.

೪.	ಗ್ರಾಮ	:	ಶಿವಪುರ
	ಶಿಲ್ಪ	:	ಗಣೇಶ
	ಸ್ಥಳ	:	ಮಾರ್ಕಂಡೇಶ್ವರ ಲಿಂಗದ ಎಡಬದಿ
	ಕಾಲ	:	೧೪-೧೬ ನೇ ಶತಮಾನ
	ಕೈಗಳು	:	ನಾಲ್ಕು
	ಆಯುಧಗಳು	:	ಪಾಶಾಂಕುಶ, ಗದೆ
	ಆಭರಣ	:	ಕರಂಡ, ಕುಮುಟ, ಕರ್ಣಕುಂಡಲ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಮಾರ್ಕಂಡೇಶ್ವರ ಲಿಂಗದ ಎಡಬದಿಯ ಗೂಡಿನಲ್ಲಿ ಕಪ್ಪುಶಿಲೆಯ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ಗಣೇಶನು ಕುಳಿತ ಭಂಗಿಯಲ್ಲಿದ್ದಾನೆ. ಆನೆ ಮುಖ, ಸುತ್ತಿದ ಸೊಂಡಿಲು, ದೊಡ್ಡ ಹೊಟ್ಟೆ ಇದೆ. ಬಲ ಕೈಗಳಲ್ಲಿ ಗದೆ ಹಾಗೂ ಅಭಯ ಮುದ್ರೆಯಿದೆ. ಎಡ ಕೈಗಳು ಪಾಶಾಂಕುಶ, ಲಾಡುವನ್ನು ಹಿಡಿದಿವೆ.

ಶಾಕ್ತ ಮೂರ್ತಿಶಿಲ್ಪಗಳು

ಸೃಷ್ಠಿ ಕರ್ತ ಬ್ರಹ್ಮ, ಸ್ಥಿತಿ ಕರ್ತ ವಿಷ್ಣು, ಪ್ರಳಯ ಕರ್ತ ಶಿವನ ಪಾಲಾದರೆ ಸಮಸ್ತ ಸೃಷ್ಠಿಗೆ ಮೂಲಕಾರಣ ಕರ್ತ ಶಕ್ತಿ ಎಂಬುದನ್ನುಮರೆಯುವಂತಿಲ್ಲಾ ಆ ಶಕ್ತಿಯೇ ದೇವಿ, ದೇವಿ ಸೃಷ್ಠಿ ಮಾಡಲು ಮಹಾಕಾಳಿಯಾಗಿ, ಐಶ್ವರ್ಯ ನೀಡಲು ಶ್ರೀಲಕ್ಷ್ಮಿಯಾಗಿ, ಜ್ಞಾನ ನೀಡಲು ಸರಸ್ವತಿಯಾಗಿ, ಸಂಹಾರ ಮಾಡಲು ರೌದ್ರಳಾಗಿ, ಐಶ್ವರ್ಯ ನಾಶಮಾಡಲು ಜೇಷ್ಠ ದೇವಿಯಾಗುತ್ತಾಳೆ. ದೇವಿಯ ವರ್ಣನೆ ಕುರಿತು ಮಾರ್ಕಂಡೇಯ ಪುರಾಣ, ದೇವಿ ಮಹಾತ್ಮೆಯಲ್ಲೂ ಉಲ್ಲೇಖಿಸಲ್ಪಟ್ಟಿವೆ. ಮಾತೃ ದೇವತೆಯ ರೂಪದಲ್ಲಿರುವ ಶಕ್ತಿದೇವತೆಯನ್ನು ಆರಾಧಿಸುವ ಪಂಥವನ್ನು ಶಾಕ್ತ ಪಂಥವೆಂದು ಕರೆಯುತ್ತಾರೆ. ಭಾರತದಲ್ಲಿ ಶಾಕ್ತ ಪಂಥದ ಚರಿತ್ರೆಯನ್ನು ಸಿಂಧೂ ಸಂಸ್ಕೃತಿಯಿಂದ ಗುರುತಿಸುತ್ತೇವೆ.ವೈದಿಕ ಕಾಲದ ನಂತರ ಶಕ್ತಿ ದೇವತೆ ಬೆಳವಣಿಗೆ ಪ್ರಮುಖವಾಗಿ ಕಂಡುಬರುತ್ತದೆ. ಶಾಕ್ತರ ಆರಾಧ್ಯ ದೇವತೆಯೇ ಶಕ್ತಿ ದೇವತೆ. ಇವರುಗಳನ್ನು ಆದಿಶಕ್ತಿ, ಪರಶಕ್ತಿ, ಮಹಾಶಕ್ತಿ ಮುಂತಾಗಿ ಹೆಸರಿಸುತ್ತಾರೆ. ಈ ಕಾಲದ ದೇವತೆಗಳನ್ನು ಗೃಹಸೂತ್ರಗಳು, ಸ್ಮೃತಿಗಳು, ಉಪನಿಷತ್ತುಗಳು ಪುರಾಣಗಳು ಮುಂತಾಗಿ ಸಾಹಿತ್ಯ ಆಕರಗಳು ಉಲ್ಲೇಖಿಸುತ್ತವೆ. ಆಯಾ ಬುಡಕಟ್ಟು ನೆಲೆಸಿರುವ ಸ್ಥಳಗಳಲ್ಲಿ ಶಕ್ತಿದೇವತೆಯ ಆರಾಧನೆಯನ್ನು ಕಾಣಬಹುದು (ಮಹಾಂತೇಶ ಎನ್.ಎಸ್., ೨೦೦೮, ಪುಟ-೧೦೭).

ಶಕ್ತಿ ಪೂಜೆ ಅಥವಾ ಮಾತೃದೇವತೆ ಉಪಾಸನೆಯನ್ನು ಪ್ರಾಚೀನ ಸಿಂಧೂ ಸಂಸ್ಕೃತಿಯಲ್ಲಿ ಕಂಡುಬಂದಿದೆ. ಅಲ್ಲಿ ದೊರೆತ ಸ್ತ್ರೀ ವಿಗ್ರಹಗಳನ್ನು ಮಾತೃ ದೇವತೆಯ ವಿಗ್ರಹಗಳೆಂದು ಗುರುತಿಸಲಾಗುತ್ತದೆ. ಪ್ರಸ್ತುತ ಅಧ್ಯಯನ ಹುಲಿಗಿ ಪರಿಸರದ ಶಾಕ್ತ ಮೂರ್ತಿ ಶಿಲ್ಪಗಳದ್ದಾಗಿವೆ. ಹುಲಿಗೆಮ್ಮದೇವಿ, ಮುದ್ದಮ್ಮದೇವಿ, ಮಾತಂಗಿ, ಬನ್ನಿಮಾಕಾಳಮ್ಮ, ಪದ್ಮಾವತಿ ಮುಂತಾದ ಶಕ್ತಿ ದೇವತೆಗಳನ್ನು ಕಾಣಬಹುದು. ಹುಲಿಗಿಯಲ್ಲಿ ಗ್ರಾಮದೇವತೆಗಳ ಆರಾಧನೆಯಿಂದ ಇಷ್ಟಾರ್ಥ ಸಿದಿಯಾಗುತ್ತದೆ. ಜೊತೆಗೆ ಕಾಯಿಲೆಗಳು, ವಿಘ್ನಗಳು ದೂರವಾಗುತ್ತವೆ ಎಂಬ ಪ್ರತೀತಿ ಇದೆ. ಹೀಗಾಗಿ ಈ ದೇವತೆಗಳ ಆರಾಧನೆಗೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ಕೆಲವು ಕಡೆಗಳಲ್ಲಿ ಸಪ್ತ ಮಾತೃಕೆಯರ ಮೂರ್ತಿಗಳು ಹುಲಿಗಿ ಪರಿಸರದಲ್ಲಿ ದೊರೆತಿವೆ.

೧.	ಗ್ರಾಮ	:	ಹುಲಿಗಿ
	ಶಿಲ್ಪ	:	ಸಪ್ತಮಾತೃಕೆಯರು
	ಸ್ಥಳ	:	ಸೋಮೇಶ್ವರ ದೇವಾಲಯದ ಸಭಾಮಂಟಪದಲ್ಲಿ
	ಕಾಲ	:	೧೩ನೇ ಶತಮಾನ

ಕೈಗಳು	:	ನಾಲ್ಕು
ಆಯುಧಗಳು	:	ಖಡ್ಗ, ಶಂಖ
ಸ್ಥಿತಿ	:	ಕನಿಷ್ಠ
ಮಾಧ್ಯಮ	:	ಕಪ್ಪುಶಿಲೆ

ಸಪ್ತಮಾತೃಕೆಯರ ಪಟ್ಟಿಯಲ್ಲಿ ಏಳು ದೇವತೆಗಳಿದ್ದು, ಇವುಗಳ ಬಲಭಾಗದಲ್ಲಿ ವೀರಭದ್ರ ಮತ್ತು ಎಡಭಾಗದಲ್ಲಿ ಗಣೇಶರ ಉಬ್ಬುಶಿಲ್ಪಗಳಿವೆ. ಇದರಲ್ಲಿ ವೀರಭದ್ರ ಶಿಲ್ಪವು ಭಿನ್ನವಾಗಿದೆ. ಸಪ್ತಮಾತೃಕೆಯರಲ್ಲಿ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿ, ಶಿಲ್ಪಗಳಿವೆ. ಸಪ್ತಮಾತೃಕೆ ಪಟ್ಟಿಕೆಯ ಕೆಳಭಾಗದಲ್ಲಿ ಹಂಸ, ನಂದಿ, ನವಿಲು, ಗರುಡ, ಆನೆ, ಇಲಿ ಮೊದಲಾದ ಆಯಾಮ ದೇವತೆಗಳಿಗೆ ಸಂಬಂಧಿಸಿದ ವಾಹನಗಳನ್ನು ಕಾಣುತ್ತೇವೆ.

೨.	ಗ್ರಾಮ	:	ಹುಲಿಗಿ
	ಶಿಲ್ಪ	:	ಹುಲಿಗೆಮ್ಮ ದೇವಿ
	ಸ್ಥಳ	:	ಗ್ರಾಮದ ಪೂರ್ವಕ್ಕೆ
	ಕಾಲ	:	೧೬-೧೭ನೆಯ ಶತಮಾನ
	ಕೈಗಳು	:	ಬರೀ ರುಂಡ ಮಾತ್ರ ಇದೆ.
	ಆಭರಣ	:	ಮುತ್ತಿನ ಹಾರ, ಮೂಗುತಿ
	ಸ್ಥಿತಿ	:	ಉತ್ತಮ
	ಮಾಧ್ಯಮ	:	ಸಾಲಿಗ್ರಾಮ ಗುಂಡುಕಲ್ಲು

ಮೂಲತಃ ಇದು ಒಂದು ಗುಂಡು ಕಲ್ಲಾಗಿದ್ದು ಅದಕ್ಕೆ ಲೋಹದ ಮುಖವಾಡ ಮತ್ತಿತರ ಭಾಗಗಳನ್ನು ತೊಡಿಸಲಾಗಿದೆ. ಗ್ರಾಮದೇವತೆಯಾದ ಹುಲಿಗೆಮ್ಮ ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಾಳೆ. ಈಕೆ ಉರಿಯ ದೇವತೆ, ಆಕೆಯ ಕಣ್ಣುಗಳು ಕೆಂಡವನ್ನೇ ಕಾರುತ್ತವೆ ಎಂಬ ನಂಬಿಕೆ ಜನರಲ್ಲಿದೆ. ಆಕೆ ಸಿಟ್ಟಾಗಿ ಕಣ್ತೆರೆದರೆ, ಊರೆಲ್ಲ ಭಸ್ಮವಾಗುತ್ತದೆ. ಊರಿಗೆ ಬರಗಾಲ ಬರುತ್ತದೆ, ಜನರಲ್ಲಿ ವಿವಿಧ ತರದ ಖಾಯಿಲೆಗಳು ಕಾಣಿಸಿಕೊಳ್ಳುತ್ತವೆ ಎಂದು ಜನ ಭಾವಿಸುತ್ತಾರೆ. ಇದಕ್ಕಾಗಿ ದೈವದ ಕಣ್ಣಿಗೆ ಎರಡು ಬೆಳ್ಳಿಯ ಕಣ್ಣ ಪಟ್ಟಿಗಳನ್ನು ಅಡ್ಡಲಾಗಿ ಇಟ್ಟಿದ್ದಾರೆ. ಇದರಿಂದ ದೈವದ ಉರಿಗಣ್ಣು ನೇರವಾಗಿ ಜನರನ್ನು ತಾಕುವುದಿಲ್ಲ ಎಂದು ಭಾವಿಸಲಾಗಿದೆ. ಇದರ ಜೊತೆಗೆ ದೈವವು ಸದಾ ಶಾಂತವಾಗಿರುವಂತೆ ಮಾಡಲು ಆಗಾಗ ಭಕ್ತರು ಕೆಲವು ವಿಶೇಷ ಹರಕೆಗಳನ್ನು ನೀಡುತ್ತಾರೆ (ಪುರುಷೋತ್ತಮ ಬಿಳಿಮಲೆ, ೧೯೯೯, ಪುಟ-೩).

೩.	ಗ್ರಾಮ	:	ಹುಲಿಗಿ
	ಶಿಲ್ಪ	:	ಪದ್ಮಾವತಿ
	ಸ್ಥಳ	:	ಜೈನ ಬಸದಿ
	ಕಾಲ	:	೧೧-೧೨ನೇ ಶತಮಾನ

ಕೈಗಳು : ನಾಲ್ಕು

ಆಯುಧಗಳು : ಪಾಶ, ಗದೆ

ಆಭರಣ : ಕಿರೀಟ, ಕಿವಿಯೋಲೆ, ಕೈಬಳೆ, ಮಾಂಗಲ್ಯ, ಮುತ್ತಿನಹಾರ

ಸ್ಥಿತಿ : ಮಾಧ್ಯಮ,

ಮಾಧ್ಯಮ : ಕಪ್ಪುಶಿಲೆ

ಹುಲಿಗಿಯ ಜೈನ ಬಸದಿಯಲ್ಲಿ ಪದ್ಮಾವತಿ ಮೂರ್ತಿ ಇದೆ. ಪದ್ಮದ ಮೇಲೆ ಸಮಭಂಗಿಯಲ್ಲಿ ಕುಳಿತಿದೆ. ತಲೆಯ ಮೇಲೆ ಏಳು ಹೆಡೆಯ ಕುಕ್ಕುಟ ಸರ್ಪವಿದೆ. ಬಲಗೈ ಗದೆ ಹಿಡಿದು ಅಭಯ ಮುದ್ರೆಯಲ್ಲಿದೆ. ಎಡಗೈ ಪಾಶ ಹಿಡಿದಿದ್ದು, ಕುಂಬವನ್ನು ಹಿಡಿದಿದ್ದಾಳೆ. ತಲೆಯಲ್ಲಿ ಕಿರೀಟ, ಸೌಮ್ಯ ಮುಖಭಾವ, ಕಿವಿಯೋಲೆ, ಕೈಬಳೆ, ಹಾಗೂ ಕಣ್ಣುಗಳಿಗೆ ಬೆಳ್ಳಿಯ ಪಟ್ಟಿಯನ್ನು ಹಾಕಲಾಗಿದೆ. ತೀರ್ಥಂಕರರ ಮುಂದೆ ಪದ್ಮಾವತಿಯನ್ನು ಪ್ರತಿಷ್ಠಾಪಿಸಿದ್ದಾರೆ.

೪. ಗ್ರಾಮ : ಹುಲಿಗಿ

ಶಿಲ್ಪ : ಮುದ್ದಮ್ಮ ದೇವಿ

ಸ್ಥಳ : ಹುಲಿಗೆಮ್ಮ ದೇವಸ್ಥಾನದ ಪ್ರಧಾನದ್ವಾರ ಮತ್ತು ಎರಡನೇ ದ್ವಾರದ ನಡುವೆ

ಕಾಲ : ೧೬ ೧೭ನೆ ಶತಮಾನ

ಕೈಗಳು : ಬರೀ ರುಂಡ

ಆಭರಣಗಳು : ಮಾಂಗಲ್ಯ

ಸ್ಥಿತಿ : ಕನಿಷ್ಠ

ಮಾಧ್ಯಮ : ಮುಖವಾಡ

ಈಕೆಯನ್ನು ಹುಲಿಗೆಮ್ಮನ ತಾಯಿ ಎಂಬ ನಂಬಿಕೆ ಇಲ್ಲಿನ ಜನಪದರಲ್ಲಿದೆ. ಹುಲಿಗಿ ದೇವಾಸ್ಥಾನದ ಪ್ರಧಾನ ದ್ವಾರ ಮತ್ತು ಎರಡನೇ ದ್ವಾರದ ನಡುವೆ ಆಲದ ಮರದ ಕೆಳಗೆ ಮುದ್ದಮ್ಮನ ವಿಗ್ರಹವಿದೆ. ಭಕ್ತರು ಮುದ್ದಮ್ಮನಿಗೂ ಹುಲಿಗೆಮ್ಮನಂತೆಯೇ ಪೂಜಾ ಭಾವದಿಂದ ನೋಡುತ್ತಾರೆ.

೫. ಗ್ರಾಮ : ಹುಲಿಗಿ

ಶಿಲ್ಪ : ಮಾತಂಗಿ

ಸ್ಥಳ : ಹುಲಿಗೆಮ್ಮ ಗುಡಿಯ ಎದುರಿಗೆ

ಕಾಲ : ೨೦ನೇ ಶತಮಾನ

ಕೈಗಳು : ಎರಡು

ಆಯುಧಗಳು : ಡಮರುಗ, ತ್ರಿಶೂಲ

ಆಭರಣ	:	ಮಾಂಗಲ್ಯ, ಕೊರಳಹಾರ, ಮೂಗುತಿ
ಸ್ಥಿತಿ	:	ಕನಿಷ್ಠ
ಮಾಧ್ಯಮ	:	ಕಪ್ಪುಶಿಲೆ

ಹುಲಿಗೆಮ್ಮನ ಗುಡಿಯ ಎದುರಿಗೆ ಮಾತಂಗಿಯ ಗುಡಿ ಇದೆ. ಗರ್ಭಗೃಹದಲ್ಲಿರುವ ಮೂರ್ತಿಯನ್ನು ಈಚೆಗೆ ಹೊಸದಾಗಿ ಮಾಡಿಸಲಾಗಿದೆ. ಮಾತಂಗಿಯನ್ನು ಆದಿಕರ್ನಾಟಕ ಜಾತಿಯ ಹೆಂಗಸು ಪೂಜೆ ಮಾಡುತ್ತಾಳೆ. ಹುಲಿಗೆಮ್ಮನ ಪೂಜೆ ನಂತರ ಈಕೆಯ ಪೂಜೆ ಮಾಡುತ್ತಾರೆ. ಹುಲಿಗೆಮ್ಮನ ಭಕ್ತರು ಈ ದೇವಿಯ ಗುಡಿಗೆ ಕೈ ಮುಗಿದು ಪ್ರಸಾದ ಸ್ವೀಕರಿಸುತ್ತಾರೆ. ಮುತ್ತಿನ ಕಿರೀಟ, ಪಂಚಲೋಹದ ಕಣ್ಣುಗಳನ್ನು ಇಡಲಾಗಿದೆ. ಐದು ಎಡೆಯ ಸರ್ಪ ತಲೆಯ ಮೇಲೆ ಇದೆ.

೩.	ಗ್ರಾಮ	:	ಹೊಸೂರು
	ಶಿಲ್ಪ	:	ಹೊಸೂರಮ್ಮ ದೇವಿ
	ಸ್ಥಳ	:	ಗ್ರಾಮದ ಪೂರ್ವಕ್ಕೆ
	ಕಾಲ	:	ಕ್ರಿ.ಶ.ಸು.೧೫ನೆಯ ಶತಮಾನ
	ಕೈಗಳು	:	ರುಂಡ ಮಾತ್ರ ಇದೆ.
	ಆಭರಣ	:	ಮಾಂಗಲ್ಯ, ಮೂಗುತಿ, ಕಿರೀಟ
	ಸ್ಥಿತಿ	:	ಉತ್ತಮ
	ಮಾಧ್ಯಮ	:	ಕಲ್ಲುಗುಂಡು

ಈ ದೇವಾಲಯವು ಸುಮಾರು ೧೬ನೆಯ ಶತಮಾನದ್ದೆಂದು ಶಾಸನವೊಂದು ತಿಳಿಸುತ್ತದೆ (**ARSIA, 1922-23,**ಸಂ: ೧೯೨೨ರ ೬೯೧). ಈ ದೇವಸ್ಥಾನವು ಉತ್ತರಾಭಿಮುಖವಾಗಿದ್ದು, ಗರ್ಭಗುಡಿಯಲ್ಲಿರುವ ಹೊಸೂರಮ್ಮನ ಮೂಲ ವಿಗ್ರಹ ಎರಡು ಅಡಿ ಎತ್ತರವಾದ ಒಂದು ದುಂಡುಕಲ್ಲಿನದಾಗಿದೆ. ಹೊಸೂರಮ್ಮ ದೇವಿಗೆ ಸ್ಪಷ್ಟವಾದ ಆಕಾರವಿಲ್ಲ. ಕಲ್ಲು ಗುಂಡನ್ನೇ ದುರ್ಗಾದೇವಿಯ ಲಿಂಗವೆಂದು ನಂಬಲಾಗಿದೆ. ದುರ್ಗೆಯನ್ನು ಲಿಂಗದ ರೂಪದಲ್ಲಿ ಆರಾಧನೆ ಮಾಡುವ ಸಂಪ್ರದಾಯ ಪ್ರಾಚೀನದಲ್ಲಿ ಇತ್ತು ಎಂಬುದಕ್ಕೆ ಆಧಾರಗಳು ಸಿಗುತ್ತವೆ (ತಾರೀಹಳ್ಳಿ, ಹನುಮಂತಪ್ಪ, ೨೦೧೦, ಪುಟ-೬) ಹೊಸೂರಮ್ಮನನ್ನು ದುರ್ಗಾದೇವಿಯ ಲಿಂಗಾಕೃತಿಯೆಂದು, ಚಾಮುಂಡಿ ರೂಪವೆಂದು ಕರೆಯಲಾಗುತ್ತಿದೆ. ಹೆಣ್ಣು ದೇವತೆಗಳಿಗೆ ಇರುವಂತೆ ಕೈ, ಕಾಲು, ಮೂಗು, ಕಣ್ಣು ಇತ್ಯಾದಿ ಈ ದೇವತೆಗೆ ಕಂಡುಬರುವುದಿಲ್ಲ. ಇತ್ತಿಚೀಗೆ ಹೊಸ ಮುಖವಾಡ ಹಾಕಲಾಗಿದೆ. ಶಾಂತಿಯ ಚೇತನ ಮೂರ್ತಿಯಾಗಿ ನಂಬಿದ ಭಕ್ತರನ್ನು ಆಕರ್ಷಿಸುತ್ತಿದ್ದಾಳೆ.

ಹೊಸೂರಮ್ಮ ದೇವಿಯ ಕಣ್ಣುಗಳ ಜಾಗದಲ್ಲಿ ಸಾಲಿ ಗ್ರಾಮಗಳು ಕಂಡು ಬರುತ್ತವೆ. ವಾಸುದೇವ ಸಾಲಿಗ್ರಾಮ ಮತ್ತು ಲಕ್ಷ್ಮಿ ನರಸಿಂಹ ಸಾಲಿ ಗ್ರಾಮಗಳು ಈಗ ಬೆಳ್ಳಿಯ ಮೂರ್ತಿ, ಬೆಳ್ಳಿಯ ಕಿರೀಟವನ್ನು

ಧರಿಸಲಾಗಿದೆ. ಭಕ್ತರ ಮನಸ್ಸಿನಲ್ಲಿ ಅಡಗಿರುವ ದುಃಖ ದುಮ್ಮಾನ, ರೋಗ ರುಜಿನಿಗಳಂತ ಕಾಯಿಲೆಗಳನ್ನು ದೂರ ಮಾಡಲು ಸಹಾಯಕ ಕೇಂದ್ರವಾಗಿ ನಿಲ್ಲುತ್ತದೆ. ಈ ಕ್ಷೇತ್ರ.

೭.	ಗ್ರಾಮ	:	ಹೊಸೂರು
	ಶಿಲ್ಪ	:	ಮುದ್ದಮ್ಮ ದೇವಿ
	ಸ್ಥಳ	:	ಮುಖ್ಯ ದೇವಾಲಯದ ಪಶ್ಚಿಮ ಭಾಗದಲ್ಲಿ
	ಕಾಲ	:	೧೫ನೆಯ ಶತಮಾನ
	ಕೈಗಳು	:	ರುಂಡ ಮಾತ್ರ
	ಆಭರಣ	:	ಕೊರಳಹಾರ
	ಸ್ಥಿತಿ	:	ಕನಿಷ್ಠ

ಮುಖ್ಯ ದೇವಾಲಯದ ಪಶ್ಚಿಮ ಭಾಗದಲ್ಲಿ ಮುದ್ದಮ್ಮ ದೇವಿಯ ಗುಡಿಯಿದೆ. ಗರ್ಭಗುಡಿಯ ಮಧ್ಯಭಾಗದಲ್ಲಿ ಸುಮಾರು ೧೦ ಅಡಿ ಎತ್ತರವಾದ ಏಳು ಹೆಡೆಯ ಸರ್ಪವು ಈ ದೇವತೆಯನ್ನು ಸುತ್ತುವರಿದುಕೊಂಡಿದೆ. ಏಳು ಹೆಡೆಯ ಸರ್ಪ ಹಾಗೂ ಒಬ್ಬ ಸ್ತ್ರೀ ದೇವತೆಯ ಕೆತ್ತನೆ ಶಿಲ್ಪ ಉಗ್ರಸ್ವರೂಪದ್ದಾಗಿದೆ. ಭಕ್ತರಿಗೆ ಭಯವನ್ನುಂಟು ಮಾಡುವ ರೀತಿಯಲ್ಲಿ ಈ ವಿಗ್ರಹ ಮೂಡಿ ಬಂದಿದೆ. ಹೊಸೂರಮ್ಮನ ತಾಯಿಯೇ ಮುದ್ದಮ್ಮ ಎಂಬ ನಂಬಿಕೆ ಇಲ್ಲಿನ ಜನಪದರಲ್ಲಿದೆ.

ದೇವಸ್ಥಾನದ ಮುಂಭಾಗದಲ್ಲಿ ಎರಡು ಕಂಬಗಳಿದ್ದು ಒಂದರಲ್ಲಿ ಹಾವಿನ ಕೆತ್ತನೆಯ ಉಬ್ಬು ಚಿತ್ರ ಬೇಡರ ಕಣ್ಣಪ್ಪನ ಉಬ್ಬು ಚಿತ್ರಗಳು ಕಂಡುಬರುತ್ತವೆ (ತಾರಿಹಳ್ಳಿ ಹನುಮಂತಪ್ಪ, ೨೦೧೦, ಪುಟ-೧೦).

೮.	ಗ್ರಾಮ	:	ಶಿವಪುರ
	ಶಿಲ್ಪ	:	ಮಹಿಷಾಸುರ ಮರ್ದಿನಿ
	ಸ್ಥಳ	:	ಸೋಮನಾಥನ ಬೆಟ್ಟ
	ಕಾಲ	:	೧೧ನೇ ಶತಮಾನ
	ಆಯುಧಗಳು	:	ತ್ರಿಶೂಲ, ಖಡ್ಗ
	ಆಭರಣ	:	ಕೊರಳಹಾರ, ಮೂಗುತಿ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಣಶಿಲೆ

ಶಿವಪುರದ ಈಶಾನ್ಯ ದಿಕ್ಕಿನಲ್ಲಿರುವ ಸೋಮನಾಥ ಬೆಟ್ಟದಲ್ಲಿನ ಉತ್ತರ ದಿಕ್ಕಿನಲ್ಲಿ ಮಹಿಷಾಸುರ ಮರ್ದಿನಿ ಶಿಲ್ಪವಿದೆ. ಗರ್ಭಗುಡಿ ಗೂಢಿನಾಕಾರದಲ್ಲಿ ಮಹಿಷಾಸುರನನ್ನು ವಧೆ ಮಾಡುವ ದೃಶ್ಯದಲ್ಲಿ ಈ ಮೂರ್ತಿ ಶಿಲ್ಪವಿದೆ. ಎಂಟು ಕೈಗಳಿವೆ. ತ್ರಿಶೂಲ, ಖಡ್ಗ, ಪದ್ಮ, ಡಮರು, ಬಿಲ್ಲು, ಬಾಣ ಕೈಯಲ್ಲಿ

ಬಟ್ಟಲು ಇವೆಲ್ಲವನ್ನು ಹಿಡಿದಿದ್ದಾಳೆ. ಕಣ್ಣುಗಳಿಗೆ ಬೆಳ್ಳಿಯ ಪಟ್ಟಿಯನ್ನು ಹಾಕಲಾಗಿದೆ. ಮೂಗುತಿ ಧರಿಸಿದ್ದಾಳೆ. ಮಹಿಷಾಸುರನನ್ನು ವಧೆ ಮಾಡುವಾಗ ಮಹಿಷಾಸುರನ ಜುಟ್ಟನ್ನು ಹಿಡಿದು ತ್ರಿಶೂಲ ಮತ್ತು ಕತ್ತಿಗಳಿಂದ ಮಹಿಷನನ್ನು ತಿವಿಯುತ್ತಿದ್ದಾಳೆ. ಪ್ರಾಣಿರೂಪದ ಮಹಿಷನ ಕುತ್ತಿಗೆ ಭಾಗದಿಂದ ಮಾನವ ರೂಪದ ಮಹಿಷ ಹೊರಬರುತ್ತಿದ್ದಾನೆ. ಒಟ್ಟಾರೆಯಾಗಿ ಈ ಮೂರ್ತಿ ಶಿಲ್ಪ ನೋಡುವವರಿಗೆ ಭಯಹುಟ್ಟಿಸುವಂತಿದೆ.

ವೈಷ್ಣವ ಮೂರ್ತಿಶಿಲ್ಪಗಳು

ಯಜ್ಞಯಾಗಾಧಿಗಳಿಗೆ ವರ್ಣಾಶ್ರಮಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದ ಧರ್ಮ ವೈಧಿಕ ಧರ್ಮ, ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದು. ಅನೇಕ ರಾಜಮನೆತನಗಳು ಈ ಧರ್ಮವನ್ನು ಪೋಷಿಸಿವೆ. ಈ ಧರ್ಮದ ದಾನ ಶಾಸನಗಳ ಮೇಲೆ ಸಾಮಾನ್ಯವಾಗಿ ಶಂಖ, ಚಕ್ರದ ಚಿತ್ರಣವಿದ್ದು, ಕೆಲವು ಶಾಸನಗಳಲ್ಲಿ ವೈಷ್ಣವ ದೇವತೆಗಳು, ಗರುಡ ಮೊದಲಾದ ಶಿಲ್ಪಗಳೂ ಇರುತ್ತವೆ.

ವೈಷ್ಣವ ಶಿಲ್ಪಗಳಲ್ಲಿ ಮುಖ್ಯವಾಗಿ ವಿಷ್ಣು ಶಿಲ್ಪವನ್ನು ಕಾಣುತ್ತೇವೆ. ವೇದಗಳಲ್ಲಿಯೇ ವಿಷ್ಣುವಿನ ಉಲ್ಲೇಖ ಬರುತ್ತದೆ. ಐದಾರು ಸೂಕ್ತಗಳಲ್ಲಿ ವಿಷ್ಣುವರ್ಣನೆ ಇದೆ. ಇವನು ಮೂರು ಹೆಜ್ಜೆಗಳಲ್ಲಿ ಪೃಥ್ವಿ ಅಂತರಿಕ್ಷ ಆಕಾಶಗಳನ್ನು ಕ್ರಮಿಸುವವನು. ಇವನಿಗೆ ಉರುಗಾಯಿ, ಉರುಕ್ರಮ ಎಂಬ ಹೆಸರುಗಳು ಇವೆ. ಬ್ರಾಹ್ಮಣಕಗಳ ಕಾಲದಲ್ಲಿ ವಿಷ್ಣುವಿನ ಪ್ರಾಧಾನ್ಯತೆ ಹೆಚ್ಚುತ್ತಾ ಹೋಯಿತು (ದತ್ತಾತ್ರೇಯ ಜಿ. ಕುಲಕರ್ಣಿ, ೨೦೦೬, ಪುಟ-೨೩೫, ಅಪ್ರಕಟಿತ ಪ್ರಬಂಧ).

ವಿಷ್ಣುವಿಗೆ ಹಲವಾರು ಹೆಸರುಗಳು ಇವೆ. ಕೇಶವ ನಾರಾಯಣ, ಮಾಧವ, ಗೋವಿಂಧ, ವಿಷ್ಣು ಮಧುಸೂಧನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರ, ವಾಸುದೇವ, ಸಂಕರ್ಷಣ ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧ್ಯೋಕ್ಷಜ, ನರಸಿಂಹ, ಜನಾರ್ಧನ, ಉಪೇಂದ್ರ, ಹರಿ ಮತ್ತು ಕೃಷ್ಣ, ಪಂಚರಾತ್ರಾಗಮವು ಕೇಶವಾದಿ, ಚತುರ್ವಿಂಶಲೆ ಮೂರ್ತಿಗಳ ಹೆಸರಿನಲ್ಲಿ ವೈವಿಧ್ಯತೆ ಇದ್ದರೂ ಶಕ್ತಿ ಒಂದೇ. ಪ್ರಸ್ತುತ ಹುಲಿಗಿ ಪರಿಸರದಲ್ಲಿರುವ ವೈಷ್ಣವ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೧.	ಗ್ರಾಮ	:	ಹೊಸೂರು
	ಶಿಲ್ಪ	:	ಗೋಪಾಲಕೃಷ್ಣ ದೇವಾಲಯ
	ಸ್ಥಳ	:	ತುಂಗಭದ್ರಾ ನದಿ ದಂಡೆ
	ಕಾಲ	:	ಕ್ರಿ.ಶ.ಸು.೧೫ನೆಯ ಶತಮಾನ
	ಆಯುಧಗಳು	:	ಎರಡು ಕೈಗಳು
	ಆಭರಣ	:	ಕೊರಳಹಾರ, ಕೊಳಲು, ಶಂಖ, ಚಕ್ರ
	ಸ್ಥಿತಿ	:	ಮಧ್ಯಮ
	ಮಾಧ್ಯಮ	:	ಕಪ್ಪುಶಿಲೆ

ಗರ್ಭಗೃಹದಲ್ಲಿ ಗೋಡೆಗೆ ಹೊಂದಿಕೊಂಡು ಚಕ್ರ, ಶಂಖ, ಕೊಳಲು ಹಿಡಿದು ನಿಂತ ಗೋಪಾಲಕೃಷ್ಣನ ವಿಗ್ರಹವಿದೆ. ಕೊಳಲಿನ ನಾದವನ್ನು ಸುತ್ತಲಿರುವ ಹಸುಗಳು ಆಲಿಸುತ್ತವೆ. ಗರ್ಭಗೃಹದ ಪ್ರವೇಶದ್ವಾರದ ಲಲಾಟ ಬಿಂಬದಲ್ಲಿರುವ ಗಣೇಶನ ಶಿಲ್ಪವನ್ನು ಗಮನಿಸಿದರೆ, ಜೀರ್ಣೋದ್ಧಾರದ ವೇಳೆಯಲ್ಲಿ ವಿಷ್ಣುವಿನ ವಿಗ್ರಹವನ್ನು ಪ್ರತಿಷ್ಠಾಪಿಸಿದಂತೆ ಕಾಣುತ್ತದೆ.

೨. ಗ್ರಾಮ : ಹುಲಿಗಿ
ಶಿಲ್ಪ : ಆಂಜನೇಯ
ಸ್ಥಳ : ಜೈನ ಬಸದಿಯ ಹತ್ತಿರ
ಕಾಲ : ೧೭ ೧೮ನೇ ಶತಮಾನ
ಕೈಗಳು : ಎರಡು
ಆಯುಧಗಳು : ಗದೆ
ಆಭರಣ : ಕೊರಳಹಾರ
ಸ್ಥಿತಿ : ಕನಿಷ್ಠ
ಮಾಧ್ಯಮ : ಬಂಡೆಗಲ್ಲು

ಜೈನ ಬಸದಿಯ ಹತ್ತಿರ ಹಾಳೂರು ಆಂಜನೇಯ ದೇವಾಲಯವಿದೆ. ದೇವಸ್ಥಾನದ ಗರ್ಭ ಗುಡಿಯಲ್ಲಿ ಆಂಜನೇಯ ಶಿಲ್ಪವಿದೆ. ಈತನಿಗೆ ಎರಡು ಕೈಗಳಿದ್ದು, ಒಂದು ಕೈಯಲ್ಲಿ ಗದೆಯನ್ನು ಹಿಡಿದಿದ್ದು, ಇನ್ನೊಂದು ಕೈಯು ಅಭಯ ಮುದ್ರೆಯಲ್ಲಿದೆ. ಈ ದೇವರಿಗೆ ನಾಲ್ಕು ಎಕರೆ ತರಿ ಭೂಮಿ ಇದೆ. ಈ ದೇವಾಲಯದ ಅರ್ಚಕರು ಭೂಮಿಯನ್ನು ಉಪಯೋಗಿಸುತ್ತಾರೆ (ಬಿ.ಆರ್.ದೇಸಾಯಿ, ಪು-೨೧).

೩. ಗ್ರಾಮ : ಹುಲಿಗಿ
ಶಿಲ್ಪ : ಪರಶುರಾಮ
ಸ್ಥಳ : ಹುಲಿಗೆಮ್ಮ ದೇವಾಲಯದ ಪ್ರವೇಶದ್ವಾರದ ಬಲಬದಿಯಲ್ಲಿ
ಕಾಲ : ೧೮ನೇ ಶತಮಾನ
ಕೈಗಳು : ಎರಡು
ಆಯುಧಗಳು : ಪರಶು
ಆಭರಣ : ಕೊರಳಹಾರ
ಸ್ಥಿತಿ : ಕನಿಷ್ಠ
ಮಾಧ್ಯಮ : ಕಪ್ಪುಶಿಲೆ

ಹುಲಿಗೆಮ್ಮ ದೇವಾಲಯದ ಮುಖ್ಯ ದ್ವಾರವನ್ನು ಪ್ರವೇಶಿಸುತ್ತಿರುವಂತೆ ಬಲಬದಿಯಲ್ಲಿ ಪರಶುರಾಮನ ಗುಡಿಯಿದೆ. ಗರ್ಭಗೃಹದಲ್ಲಿ ಪರಶುರಾಮನ ಸುಂದರ ಮೂರ್ತಿಯಿದೆ. ಈತನಿಗೆ ಎರಡು ಕೈಗಳಿದ್ದು, ಒಂದು

ಕೈಯಲ್ಲಿ ಪರಶುವಿದೆ, ಇನ್ನೊಂದು ಕೈಯಲ್ಲಿ ರುದ್ರಾಕ್ಷಿಮಣಿಯಿದೆ. ಕಣ್ಣು, ಮೀಸೆಗೆ ಬೆಳ್ಳಿಯ ಪಟ್ಟಿ ಹಾಕಲಾಗಿದೆ. ಜೊತೆಗೆ ಹಣೆಗೂ ಬೆಳ್ಳಿಯ ವಿಭೂತಿ ಪಟ್ಟಿಯನ್ನು ಹಾಕಲಾಗಿದೆ. ಮೂರು ಅಡಿ ಎತ್ತರದ ವಿಗ್ರಹ. ಪರಶುರಾಮನು ಎಲ್ಲಮ್ಮನ ಮಗನೆಂಬ ನಂಬಿಕೆ ಇದೆ.

೪.	ಗ್ರಾಮ	:	ಕಿಡಿದಾಳು
	ಶಿಲ್ಪ	:	ಆಂಜನೇಯ
	ಸ್ಥಳ	:	ಊರಿನ ಪ್ರಾರಂಭದಲ್ಲಿಯೇ
	ಕೈಗಳು	:	ಎರಡು
	ಆಯುಧಗಳು	:	ಗದೆ
	ಆಭರಣ	:	ಕೊರಳಹಾರ, ಕಿವಿಯೋಲೆ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಕಿಡದಾಳು ಗ್ರಾಮದ ಪ್ರವೇಶದಲ್ಲಿಯೇ ಆಂಜನೇಯ ದೇವಾಲಯವಿದೆ. ಗರ್ಭಗುಡಿಯಲ್ಲಿ ಆಂಜನೇಯ ಮೂರ್ತಿ ಶಿಲ್ಪವಿದೆ. ಈತನಿಗೆ ಎರಡು ಕೈಗಳಿದ್ದು, ಒಂದು ಕೈಯಲ್ಲಿ ಗದೆ, ಇನ್ನೊಂದು ಕೈಯು ಅಭಯ ಮುದ್ರೆಯಲ್ಲಿದೆ. ಕಾಲುಗಳಲ್ಲಿ ಕಡಗ ಧರಿಸಿದ್ದಾನೆ. ಎಡಗಾಲಿನಲ್ಲಿ ಶನೀಶ್ವರನನ್ನು ತುಳಿಯುತ್ತಿದ್ದಾನೆ.

೫.	ಗ್ರಾಮ	:	ಶಿವಪುರ
	ಶಿಲ್ಪ	:	ಆಂಜನೇಯ
	ಸ್ಥಳ	:	ಮಾರ್ಕಂಡೇಶ್ವರ ದೇವಾಲಯದ ಪ್ರವೇಶದ್ವಾರದ ಬಲಗಡೆ
	ಕೈಗಳು	:	ಎರಡು
	ಆಯುಧಗಳು	:	ಗದೆ
	ಆಭರಣ	:	ಕಿವಿಯೋಲೆ, ಕೊರಳಹಾರ, ನಡುಪಟ್ಟಿ, ಕೈಕಡಗ, ಕಾಲುಕಡಗ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಹುಲಿಗಿ ಸಮೀಪದ ಶಿವಪುರ ಗ್ರಾಮದಲ್ಲಿ ಆಂಜನೇಯ ಶಿಲ್ಪವನ್ನು ಕಾಣುತ್ತೇವೆ. ಶಿವಪುರ ಗ್ರಾಮದಿಂದ ೧ ಕಿ.ಮೀ. ದೂರದಲ್ಲಿ ಶ್ರೀ ಮಾರ್ಕಂಡೇಶ್ವರ ದೇವಾಲಯವಿದೆ. ಪ್ರವೇಶದ್ವಾರದ ಬಲಬದಿಯಲ್ಲಿ ಆಂಜನೇಯನ ಶಿಲ್ಪವನ್ನು ಪ್ರತಿಷ್ಠಾಪಿಸಿದ್ದಾರೆ. ನೋಡಲು ಆಕರ್ಷಣೀಯವಾಗಿದೆ. ಈ ಶಿಲ್ಪಕ್ಕೆ ಎರಡು ಕೈಗಳಿದ್ದು, ಬಲಗೈಯು ಅಭಯ ಮುದ್ರೆಯಲ್ಲಿದೆ. ಎಡಗೈಯು ವಸ್ತ್ರವನ್ನು ಹಿಡಿದಿದೆ. ಕಿರೀಟವನ್ನು ಧರಿಸಿದ್ದಾನೆ. ದಪ್ಪದಾದ ಕಂಠಹಾರ, ಕಿವಿಯೋಲೆ, ಕೈಕಡಗ ಹಾಗೂ ಕಾಲು ಕಡಗವನ್ನು

ಧರಿಸಿದ್ದಾನೆ. ಶನೀಶ್ವರ ಆಂಜನೇಯನ ಶಕ್ತಿಯಿಂದ ಅಸೂಯೆಗೊಂಡು ಅವನ ಶಕ್ತಿಯನ್ನು ಧ್ವಂಸ ಮಾಡಲು ಬರುತ್ತಾನೆ. ಆದರೆ ಆಂಜನೇಯ ಶನಿದೇವನ ಸೊಕ್ಕನ್ನೇ ಮುರಿದು, ಅವನನ್ನು ತನ್ನ ಎಡಗಾಲಿನಿಂದ ತುಳಿಯುತ್ತಾನೆ. ಈ ದೃಶ್ಯದ ಚಿತ್ರವನ್ನು ಶಿಲ್ಪದಲ್ಲಿ ಕೆತ್ತಲಾಗಿದೆ. ಶಿಲ್ಪದ ಹಿಂದೆ ಪ್ರಭಾವಳಿಯು ಹೂವುಗಳಿಂದ ಅಲಂಕೃತಗೊಂಡಿದೆ. ಕುಂಕುಮ, ವಿಭೂತಿ ಹಚ್ಚಿ ಇದನ್ನು ಇನ್ನು ಆಕರ್ಷಕವಾಗಿ ಮಾಡಿದ್ದಾರೆ.

ಜೈನ ಮೂರ್ತಿಶಿಲ್ಪಗಳು

ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಜೈನ ಮೂರ್ತಿ ಶಿಲ್ಪಗಳ ಕೊಡುಗೆ ಅಪಾರ. ಜೈನ ತೀರ್ಥಂಕರರು ಉತ್ತರ ಭಾರತದಲ್ಲಿ ಜನಿಸಿದರೂ ಜೈನಶಾಸ್ತ್ರ ಗ್ರಂಥಗಳನ್ನು ರಚಿಸಿದ ಆಚಾರ್ಯರು ಹೆಚ್ಚಿನವರು ಕರ್ನಾಟಕದವರು. ಪ್ರಾಚೀನ ಕರ್ನಾಟಕದಲ್ಲಿ ಶ್ರವಣಬೆಳಗೊಳ, ಬನವಾಸಿ, ಕೊಪ್ಪಳ, ಹಲಸಿ, ಹುಂಚ ಮುಂತಾದ ಕಡೆಗಳಲ್ಲಿ ಜೈನ ಕೇಂದ್ರಗಳು ಪ್ರವರ್ಧಮಾನಕ್ಕೆ ಬಂವು. ಕ್ರಿ.ಶ.ಆರಂಭದ ಕಾಲದಲ್ಲಿ ರಾಜಾಶ್ರಯದೊರೆತಿದ್ದರಿಂದ ಜೈನ ಧರ್ಮ ಹೆಚ್ಚು ಪ್ರವರ್ಧಮಾನಕ್ಕೆ ಬಂತು. ಜೈನಧರ್ಮವು ಅಭಿವೃದ್ಧಿಯಾಯಿತು. ಅದಕ್ಕೆ ಸಂಬಂಧಿಸಿದಂತೆ ಮೂರ್ತಿ ಶಿಲ್ಪ, ಚಿತ್ರಕಲೆ, ಮುಂತಾದವುಗಳು ಪ್ರಾರಂಭವಾದವು. ಜೈನಧರ್ಮವನ್ನು ಬೋಧಿಸಿದ ತೀರ್ಥಂಕರರು ದಿವ್ಯ ದೃಷ್ಟಿಯನ್ನು ಪಡೆದು ಮಾನವರಾದರೂ ದೇವತಾ ಪುರುಷರಂತೆ ಆರಾಧಿಸಲ್ಪಟ್ಟರು (ಚಿದಾನಂದ ಮೂರ್ತಿ ಎಂ., ೧೯೭೯, ಪುಟ-೭೩).

ಪ್ರಸ್ತುತ ಅಧ್ಯಯನವನ್ನು ಹುಲಿಗಿ ಪರಿಸರದ ಜೈನಶಿಲ್ಪಕ್ಕೆ ಸೀಮಿತ ಮಾಡಿಕೊಂಡು ಪ್ರತಿಮಾ ಲಕ್ಷಣಗಳನ್ನು ಅಧ್ಯಯನ ಮಾಡಲಾಗಿದೆ.

೧.	ಗ್ರಾಮ	:	ಹುಲಿಗಿ
	ಶಿಲ್ಪ	:	ಪಾರ್ಶ್ವನಾಥ (೧)
	ಸ್ಥಳ	:	ಜೈನಬಸದಿ
	ಕೈಗಳು	:	ಎರಡು
	ಆಭರಣಗಳು	:	ನಿರಾಭರಣ
	ಸ್ಥಿತಿ	:	ಮಧ್ಯಮ
	ಮಾಧ್ಯಮ	:	ಕಪ್ಪುಶಿಲೆ
	ಆಸನ	:	ಪರ್ಯಂಕಾಸನ (ಕುಳಿತ ಭಂಗಿ)
	ಕಾಲ	:	೧೧-೧೨ನೇ ಶತಮಾನ

ಹುಲಿಗಿ ಗ್ರಾಮದ ಪೂರ್ವ ದಿಕ್ಕಿನಲ್ಲಿ ಈ ಜೈನಬಸದಿ ಇದೆ. ಪಾರ್ಶ್ವನಾಥ ಮೂರ್ತಿಶಿಲ್ಪವನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಪಾರ್ಶ್ವನಾಥ ಮೂರ್ತಿ ಪದ್ಮಾಸೀನದಲ್ಲಿದೆ. ಇಲ್ಲಿ ತೀರ್ಥಂಕರನ

ಕಣ್ಣು ನೇರವಾಗಿ ಆತನ ನಾಸಿಕಾಗ್ರ ನೋಡುತ್ತಿರುವುದು. ಇದನ್ನು ಧ್ಯಾನ ಮುದ್ರೆ ಎಂತಲೂ ಕರೆಯುತ್ತಾರೆ. ಮೂರ್ತಿ ನಗ್ನವಾಗಿದೆ. ನಿರಾಭರಣ, ಉದ್ದಕಿವಿ, ಗುಂಗುರುಕೂದಲು ತಲೆಯ ಮೇಲೆ ಏಳು ಎಡೆಯ ಸರ್ಪವಿದೆ. ತೀರ್ಥಂಕರ ಹೆಸರುಗಳನ್ನು ಅವರ ಲಾಂಛನದಿಂದ ಗುರುತಿಸುತ್ತಾರೆ. ಪಾರ್ಶ್ವನಾಥನ ಲಾಂಛನ ಸರ್ಪ.

೨.	ಗ್ರಾಮ	:	ಹುಲಿಗಿ
	ಶಿಲ್ಪ	:	ಪಾರ್ಶ್ವನಾಥ (೨)
	ಸ್ಥಳ	:	ಜೈನಬಸದಿ
	ಕೈಗಳು	:	ಎರಡು
	ಆಭರಣಗಳು	:	ನಿರಾಭರಣ
	ಸ್ಥಿತಿ	:	ಮಧ್ಯಮ
	ಮಾಧ್ಯಮ	:	ಕಪ್ಪುಶಿಲೆ
	ಆಸನ	:	ಕಾರ್ಯೋತ್ಸರ್ಗ (ನಿಂತಿರುವ ಭಂಗಿ)
	ಕಾಲ	:	೧೧-೧೨ನೇ ಶತಮಾನ

ಹುಲಿಗಿ ಗ್ರಾಮದ ಪೂರ್ವದಿಕ್ಕಿನಲ್ಲಿ ಈ ಜೈನಬಸದಿ ಇದೆ. ನಿಂತ ಭಂಗಿಯಲ್ಲಿ ಪಾರ್ಶ್ವನಾಥನ ಮೂರ್ತಿಶಿಲ್ಪ ಇದೆ. ಎರಡೂ ಕೈಗಳು ನೀಳವಾಗಿ ಕೆಳಗೆ ಬಿಡಲ್ಪಟ್ಟಿವೆ. ಗುಂಗುರು ಕೂದಲು, ಉದ್ದಕಿವಿ, ಸ್ವಲ್ಪ ಉಬ್ಬು ಕಪೋತಗಳಿವೆ. ತಲೆಯ ಮೇಲೆ ಏಳು ಹೆಡೆಯ ಸರ್ಪವಿದೆ. ಮೇಲಿನ ಮುಕ್ಕೊಡೆ ಜೈನ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ಎಡ ಬಲಗಳಲ್ಲಿ ಧರಣೇಂದ್ರ ಯಕ್ಷ, ಪದ್ಮಾವತಿ ಯಕ್ಷಿಯರಿದ್ದಾರೆ. ಪ್ರಸ್ತುತ ಈ ಮೂರ್ತಿಶಿಲ್ಪ ಮುರಿದಿದೆ.

೩.	ಗ್ರಾಮ	:	ಹುಲಿಗಿ
	ಶಿಲ್ಪ	:	ಮಹಾವೀರ
	ಸ್ಥಳ	:	ಜೈನಬಸದಿ
	ಕೈಗಳು	:	ಎರಡು
	ಆಭರಣಗಳು	:	ನಿರಾಭರಣ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಅಮೃತಶಿಲೆ
	ಆಸನ	:	ಪರ್ಯಂಕಾಸನ
	ಕಾಲ	:	ಕಲ್ಯಾಣ ಚಾಲುಕ್ಯರ ಕಾಲ

ಹುಲಿಗಿ ಗ್ರಾಮದ ಪೂರ್ವ ದಿಕ್ಕಿಗಿರುವ ಜೈನನಬಸದಿಯಲ್ಲಿ ಮಹಾವೀರ ಮೂರ್ತಿಶಿಲ್ಪವನ್ನು ನೋಡಬಹುದು. ಈ ಮೂರ್ತಿ ಶಿಲ್ಪಕ್ಕೆ ಎರಡು ಕೈಗಳಿದ್ದು, ನಿರಾಭರಣವಾಗಿ ಕುಳಿತು ಧ್ಯಾನಮುದ್ರೆಯಲ್ಲಿದೆ. ಅಮೃತಶಿಲೆಯಲ್ಲಿ ತೀರ್ಥಂಕರ ಮೂರ್ತಿಯನ್ನು ಮಾಡಲಾಗಿದೆ. ಇದೇ ಈ ಮೂರ್ತಿಯ ವೈಶಿಷ್ಟ್ಯ.

೪.	ಗ್ರಾಮ	:	ಹುಲಿಗಿ
	ಶಿಲ್ಪ	:	ಮಹಾವೀರ
	ಸ್ಥಳ	:	ಜೈನಬಸದಿಯ ಸಭಾಮಂಟಪದಲ್ಲಿ
	ಕೈಗಳು	:	ಎರಡು
	ಆಭರಣಗಳು	:	ನಿರಾಭರಣ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ
	ಆಸನ	:	ಪರ್ಯಂಕಾಸನ
	ಕಾಲ	:	ಕಲ್ಯಾಣ ಚಾಲುಕ್ಯರ ಕಾಲ

ಜೈನ ಬಸದಿಯ ಪ್ರವೇಶ ದ್ವಾರದ ಎಡಗಡೆ ಮಹಾವೀರ ಮೂರ್ತಿಯನ್ನು ಇಡಲಾಗಿದೆ. ಪರ್ಯಂಕಾಸನ ಅಥವಾ ಪದ್ಮಾಸನದಲ್ಲಿದೆ. ಮಹಾವೀರ ಕಣ್ಣು ನೇರವಾಗಿ ನಾಸಿಕಾಗ್ರ ನೋಡುವಂತಿದೆ. ಮೂರ್ತಿ ನಗ್ನವಾಗಿರುವುದು ಹಾಗೂ ನಿರಾಭರಣವಾಗಿದೆ. ಮಹಾವೀರ ಎಡ ಮತ್ತು ಬಲಬದಿಗಳಲ್ಲಿ ಯಕ್ಷ ಯಕ್ಷಿಣಿಯರು ಪ್ರತಿಬಿಂಬಿತವಾಗಿದ್ದಾರೆ. ಇವರುಗಳ ಕೈಗಳಲ್ಲಿ ಚಾಮರವನ್ನು ಹಿಡಿದಿರುವರು. ಈ ಮೂರ್ತಿ ಭಗ್ನಗೊಂಡಿದೆ. ತಲೆಯ ಮೇಲಿನ ಮುಕ್ಕೊಡೆ ಜೈನ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ.

೫.	ಗ್ರಾಮ	:	ಹುಲಿಗಿ
	ಶಿಲ್ಪ	:	ಬ್ರಹ್ಮ (ಜೈನಬ್ರಹ್ಮ)
	ಸ್ಥಳ	:	ಜೈನಬಸದಿಯಲ್ಲಿ
	ಕೈಗಳು	:	ನಾಲ್ಕು
	ಆಭರಣಗಳು	:	ಬ್ರಹ್ಮಕರಂಡ, ಮುಕುಟ, ಕಿವಿಯೋಲೆ, ಕೈಬಳೆ, ಕಿರೀಟ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಈ ಮೂರ್ತಿ ಕುದುರೆಯ ಮೇಲೆ ಕುಳಿತು ಸವಾರಿ ಮಾಡುವಂತಿದೆ. ಅಲಂಕೃತವಾದ ಕುದುರೆ ತನ್ನ ಎರಡೂ ಕಾಲುಗಳನ್ನು ಎತ್ತಿ ತೀವ್ರಗತಿಯಲ್ಲಿ ಹೊರಟಿರುವ ಭಾವ ವ್ಯಕ್ತವಾಗುತ್ತದೆ. ಪ್ರಭಾವಳಿಯ ಮೇಲೆ ಹೂಗಳ ಅಲಂಕರಣವಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ಕಣ್ಣುಗಳಿಗೆ ಬೆಳ್ಳಿಯ ಪಟ್ಟಿಯನ್ನು ಹಾಕಲಾಗಿದೆ. ಜೈನಧರ್ಮದಲ್ಲಿ ಬ್ರಹ್ಮ ಯಕ್ಷನಿಗೆ ವಿಶೇಷ ಸ್ಥಾನವಿತ್ತೆಂಬುದು ಗಮನಾರ್ಹ.

೬. ಶ್ರುತಸ್ಕಂದ ಫಲಕ

ಶ್ರುತಸ್ಕಂದದ ಪೂಜೆ ಜೈನ ಆಗಮ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಜೈನ ಧರ್ಮದಲ್ಲಿ ಶ್ರುತದೇವಿಯನ್ನು 'ಸರಸ್ವತಿ' ಎಂದು ಕರೆಯುತ್ತಾರೆ. 'ಶ್ರುತ' ಎಂದರೆ 'ಜಿನಾಗಮ' ಅಥವಾ ಶಾಸ್ತ್ರ ಎಂದಾಗುತ್ತದೆ. ಜೈನ ಮತೀಯರ ಸರಸ್ವತಿಯ ಹೊರತಾಗಿ ಹದಿನೇಳು ಜನ ವಿದ್ಯಾದೇವಿಯರನ್ನು ಆರಾಧಿಸುತ್ತಾರೆ. ಪ್ರಜ್ಞಪ್ತಿ, ವಜ್ರಶ್ರಂಖಲಾ, ವಜ್ರಾಂಕುಶ, ಜಂಬುನಾಥ, ಪುರುಷ ದತ್ತಾ, ಕಾಳಿ, ಮಹಾಕಾಳಿ, ಗೌರಿ, ಗಂಧಾರಿ, ಜ್ವಾಲಮಾಲಿನಿ, ಮಾನವಿ, ವೈರೂಟಿ, ಮಹಾಮಾನನಿ ಹೀಗೆ ಹದಿನೇಳು ಜನ ದೇವಿಯರಲ್ಲಿ ಹದಿಮೂರು ಜನ ಬೇರೆ ಬೇರೆ ತೀರ್ಥಂಕರರ ಯಕ್ಷಿಯರೂ ಆಗಿದ್ದಾರೆಂಬುದು ಕುತೂಹಲಕಾರಿ (ನಾಗರಾಜಯ್ಯ ಹಂಪ, ೧೯೭೬, ಪುಟ-೫೧-೭೧).

ಕಂಚು, ತಾಮ್ರದಿಂದ ತಯಾರಿಸಿದ ಫಲಕದ ಶ್ರುತಸ್ಕಂದದ ಮೇಲೆ ಲೋಕದ ವಿವರ ಮತ್ತು ಶಾಸ್ತ್ರವನ್ನು ಬರೆದಿರುತ್ತಾರೆ. ಶ್ರುತಸ್ಕಂದ ಫಲಕದ ಮೇಲ್ಭಾಗದಲ್ಲಿ ಚೈತ್ಯದ ಚಿತ್ರವನ್ನು ಬಿಡಿಸಲಾಗಿದೆ.

ಪ್ರಸ್ತುತ ಹುಲಿಗಿಯ ಜೈನಬಸದಿಯಲ್ಲಿ ಶ್ರುತಸ್ಕಂದ ಫಲಕ ಇದೆ. ದಿನನಿತ್ಯ ಪೂಜೆ ಮಾಡಿ ಸರಸ್ವತಿಯನ್ನು ಪ್ರಾರ್ಥಿಸುತ್ತಾರೆ.

೭. ನಂದೀಶ್ವರ ದ್ವೀಪ

ನಂದೀಶ್ವರ ದ್ವೀಪ ಆಷಾಡ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳ ಶುಕ್ಲಪಕ್ಷ ಅಷ್ಟಮಿಯಂದು ಹುಣ್ಣಿಮೆಯವರೆಗೆ ದೇವತೆಗಳು ನಂದೀಶ್ವರ ದ್ವೀಪಕ್ಕೆ ಹೋಗಿ ಪೂಜಿಸುತ್ತಾರೆಂಬ ನಂಬಿಕೆ ಜೈನರಲ್ಲಿ ಇದೆ. ಈ ಸ್ಮರಣೆಗಾಗಿ ಶ್ರಾವಕರು ಬಸದಿಗಳಲ್ಲಿ ನಂದೀಶ್ವರ ಬಿಂಬವನ್ನು ಅಥವಾ ಪ್ರತಿಕೃತಿಯನ್ನಿಟ್ಟು ಪೂಜಿಸುತ್ತಾರೆ. ಪ್ರಾಚೀನ ಗ್ರಂಥಗಳಾದ ತ್ರಿಲೋಕ ಪ್ರಜ್ಞಾಪ್ತಿ ತಿಲೋಯಪುಣ್ಣತ್ತಿಗಳಲ್ಲಿ ಮೇಲಿನ ದ್ವೀಪದ ವಿವರಗಳು ಸಿಗುತ್ತವೆ. ಜೈನ ವಾಸ್ತು ಮತ್ತು ಮೂರ್ತಿಶಿಲ್ಪದಲ್ಲಿ ನಂದೀಶ್ವರ ದ್ವೀಪಕ್ಕೆ ವಿಶೇಷ ಸ್ಥಾನವಿದೆ. ನಾಲ್ಕು ದಿಕ್ಕುಗಳಲ್ಲಿ ವಲಯ ಸೀಮೆಗಳ ಮಧ್ಯ ನಾಲ್ಕು ಅಂಜನಗಿರಿ ಪರ್ವತಗಳಿವೆ. ಒಂದೊಂದು ದಿಕ್ಕಿನಲ್ಲಿ ಒಂದು ಅಂಜನ ಗಿರಿ, ನಾಲ್ಕು ದಧಿ ಮುಖ ಮತ್ತು ಎಂಟು ರತಿಕರ ಈ ಪ್ರಕಾರ ಒಟ್ಟು ಕೂಡಿ ೧೩ ಪರ್ವತಗಳಾದವು. ಆದರೆ ನಾಲ್ಕು ದಿಕ್ಕುಗಳಲ್ಲಿ ಒಟ್ಟು ೫೨ ಪರ್ವತಗಳಾಗುತ್ತವೆ. ಇವುಗಳ ಮೇಲೆ ಒಂದೊಂದು ಜಿನ ಮಂದಿರ ಸ್ಥಾಪಿತ ಆಗಿರುವುದರಿಂದ, ಇದೇ ನಂದೀಶ್ವರ ದ್ವೀಪದ ೫೨ ಜಿನಮಂದಿರಗಳಾಗಿವೆ. ಈ ಪರಿಕಲ್ಪನೆಯಲ್ಲಿ ಇದರ ಪ್ರತಿಕೃತಿ ಮಾಡಿ ಪೂಜಿಸಲಾಗುತ್ತದೆ (ಹೀರಾಲಾಲ ಜೈನ್ (ಲೇ), ಮಿರ್ಜಿ ಅಣ್ಣಾರಾಯ (ಅನು), ೧೯೭೧, ಪುಟ-೩೬೨).

ಪ್ರಸ್ತುತ ನಂದೀಶ್ವರ ದ್ವೀಪ ಹುಲಿಗಿಯ ಜೈನ ಬಸದಿಯಲ್ಲಿ ಕಾಣುತ್ತೇವೆ. ಮೇಲಿನ ಲಕ್ಷಣಗಳಿಗಿಂತ ವಿಶಿಷ್ಟವಾಗಿದೆ.

ಇಲ್ಲಿ ನಂದೀಶ್ವರರ ದ್ವೀಪ ಪ್ರತಿಕೃತಿಯಲ್ಲಿ ಹದಿನೆಂಟು ಜಿನರ ಸಮೂಹ ಐದು ಸ್ಥರಗಳಲ್ಲಿ ಇದೆ. ಪೀಠದ ಮೇಲೆ ತಳದ ಮೊದಲ ಸ್ಥಳದಲ್ಲಿ ಎಂಟು ದಿಕ್ಕುಗಳಲ್ಲಿ ಜಿನರು ಪದ್ಮಾಸನದಲ್ಲಿ ಕುಳಿತು ಧ್ಯಾನಸ್ಥರಾಗಿದ್ದು, ಪದ್ಮಾಸನದಲ್ಲಿ ಕುಳಿತು ಎರಡೂ ಕೈ ಹಸ್ತಗಳು ಕಾಲ ಪಾದದ ಮೇಲೆ ಒಂದರ ಮೇಲೊಂದಿದೆ. ಎರಡನೇ ಸ್ಥರದಲ್ಲಿ ಐದು ಜಿನ ತೀರ್ಥಂಕರರು ನಾಲ್ಕು ದಿಕ್ಕುಗಳಲ್ಲಿ ಇದೇ ಆಸನದಲ್ಲಿ ಕುಳಿತಿದ್ದಾರೆ. ಮೂರನೇ ಸ್ಥರದಲ್ಲಿ ನಾಲ್ಕು ಜಿನ ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿದ್ದಾರೆ. ನಾಲ್ಕನೇ ಸ್ಥರದಲ್ಲಿ 'ಇಬ್ಬರು' ಜಿನ ತೀರ್ಥಂಕರ ಮಧ್ಯ ಅಂಜನಾ ಪರ್ವತವಿದೆ. ಐದನೇ ತಳದಲ್ಲಿ ವರ್ತುಲಾಕಾರದ ಪೀಠವಿದ್ದು, ಅದರ ಮೇಲೆ ಜೀನ ಮೂರ್ತಿಯೂ ಇದೆ. ಇದೇ ನಿಯಮದ ಪ್ರಕಾರ ಹಿಂದೆಯೂ ಇದೆ. ಇಲ್ಲಿ ಒಟ್ಟು ೧೮ (೧೮x೨) ತೀರ್ಥಂಕರ ಬಿಂಬಗಳಿದ್ದು, ಎಡಕ್ಕೆ ಬಲಕ್ಕೆ ಒಟ್ಟು ೮ (೮x೨) ತೀರ್ಥಂಕರ ಬಿಂಬಗಳು ಒಟ್ಟಾರೆಯಾಗಿ ೫೨ ಜಿನ ಮಂದಿರಗಳ ಪರಿಕಲ್ಪನೆಯಲ್ಲಿ ಪೂಜಿಸಲಾಗುತ್ತದೆ. ಎಲ್ಲಾ ನಂದೀಶ್ವರ ದೀರ್ಪಕ್ಕಿಂತಲೂ ಎರಡು ಸ್ತರ ಹೆಚ್ಚಾಗಿ ಇದೆ. ಇದೇ ಇದರ ವೈಶಿಷ್ಟ್ಯತೆ.

೮. ಚವ್ವೀಶ ತೀರ್ಥಂಕರ ಮೂರ್ತಿ

ಗ್ರಾಮ	:	ಹುಲಿಗಿ
ಶಿಲ್ಪ	:	ಚವ್ವೀಶ್ ತೀರ್ಥಂಕರ ಮೂರ್ತಿ
ಆಭರಣಗಳು	:	ನಿರಾಭರಣ
ಮಾಧ್ಯಮ	:	ಪಂಚಲೋಹದ ಫಲಕ
ಆಸನ	:	ಪದ್ಮಾಸನ

ಹುಲಿಗಿ ಗ್ರಾಮದ ಪೂರ್ವದಿಕ್ಕಿನಲ್ಲಿರುವ ಜೈನಬಸದಿಯ ಗರ್ಭಗೃಹದಲ್ಲಿ ಪಾರ್ಶ್ವನಾಥನ ಮೂರ್ತಿಯ ಮುಂದೆ ಈ ಚವ್ವೀಶ ತೀರ್ಥಂಕರ ಮೂರ್ತಿಯನ್ನು ಇಡಲಾಗಿದೆ. ಆದಿನಾಥ, ಅಜಿತ, ಶಾಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವನಾಥ, ಚಂದ್ರಪ್ರಭ, ಸುವಿಧಿ/ಪುಷ್ಪದಂತ, ಶೀತಲನಾಥ, ಶ್ರೇಯಾಂಸನಾಥ, ವಾಸುಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರ, ಮಲ್ಲಿನಾಥ, ಸುವ್ರತನಾಥ, ನಮಿ/ನೇಮಿನಾಥ, ಅರಿಷ್ಠನೇಮಿ, ಪಾರ್ಶ್ವನಾಥ, ಮಹಾವೀರ ಈ ೨೪ ತೀರ್ಥಂಕರರನ್ನು ಮೂರ್ತಿಯಲ್ಲಿ ಕಾಣಬಹುದು (ಕೆ.ಜಿ.ಭಟ್‌ಸೂರಿ, ೧೯೯೬, ಪುಟ-೨೦-೨೩).

ಶೈವ ಮೂರ್ತಿಗಳು

ಶೈವ ಪಂಥ ಪ್ರಾಚೀನ ಪಂಥವೆಂಬುದಂತೂ ಸ್ಪಷ್ಟ, ಶೈವ ಮೂರ್ತಿಗಳು ಸರ್ವತ್ರ ವ್ಯಾಪಸಿದೆ. ತ್ರಿಮೂರ್ತಿಗಳಲ್ಲಿ ಮೂರನೆಯವ ಶಿವ ಮೂರ್ತಿ ರೂಪಕ್ಕಿಂತ ಅಮೂರ್ತವಾದ ಲಿಂಗರೂಪದಲ್ಲಿಯೇ ಹೆಚ್ಚಿನ ಮಟ್ಟಿಗೆ ಶಿವನನ್ನು ಪೂಜಿಸುವ ಸಂಪ್ರದಾಯವಿದೆ. ಶಿವಪೂಜೆ ಎಂದರೆ ಲಿಂಗಪೂಜೆಯೇ. (ಸ್ವಾಮಿ ಹರ್ಷಾನಂದ, ೧೯೫೨, ಪುಟ-೫೯).

ಪ್ರಸ್ತುತ ಅಧ್ಯಾಯದ ಶೈವ ಶಿಲ್ಪಗಳಲ್ಲಿ ಪ್ರಮುಖವಾಗಿ ಸೋಮನಾಥ, ಸೋಮೇಶ್ವರ, ಈಶ್ವರ, ಬಸವೇಶ್ವರ, ಮಾರ್ಕಂಡೇಯ, ಪಂಪಾಪತಿ, ನಂದಿಶಿಲ್ಪಗಳನ್ನು ಕಾಣುತ್ತೇವೆ. ಈ ಹುಲಿಗಿ ಪರಿಸರದಲ್ಲಿ ಹೆಚ್ಚಾಗಿ ಶೈವ ಧರ್ಮಕ್ಕೆ ಅನ್ವಯಿಸುವ ಮೂರ್ತಿ ಶಿಲ್ಪಗಳು ಕಂಡುಬರುತ್ತವೆ.

೧. ಗ್ರಾಮ : ಹುಲಿಗಿ
ಶಿಲ್ಪ : ಸೋಮೇಶ್ವರ
ಸ್ಥಳ : ಗ್ರಾಮದ ಪೂರ್ವಕ್ಕೆ
ಕಾಲ : ಕ್ರಿ.ಶ.೧೦೮೮
ಸ್ಥಿತಿ : ಮಧ್ಯಮ
ಮಾಧ್ಯಮ : ಕಪ್ಪುಶಿಲೆ

ಹುಲಿಗಿ ಗ್ರಾಮದ ಪೂರ್ವ ದಿಕ್ಕಿನಲ್ಲಿ ಸೋಮೇಶ್ವರ ದೇವಾಲಯ ಇದೆ. ಆಯತಾಕಾರದ ಗರ್ಭಗೃಹದಲ್ಲಿ ವಿಶಾಲವಾದ ಪಾನಮಟ್ಟದ ಮೇಲೆ ಉದ್ಭವ ಲಿಂಗವನ್ನು ಪ್ರತಿಷ್ಠಾಪಿಸಿರುವರು. ಈ ದೇವಾಲಯವನ್ನು ಕ್ರಿ.ಶ.೧೦೮೮ರಲ್ಲಿ ಸೋಮನಾಥನು ನಿರ್ಮಿಸಿ ಈ ಶಿವಲಿಂಗವನ್ನು ಪ್ರತಿಷ್ಠಾಪಿದ್ದಾನೆ. ಲಿಂಗದ ತಲೆಯ ಮೇಲೆ ತಾಮ್ರದ ಧಾರಾಪಾತ್ರೆ ಇದ್ದು, ನಿರಂತರವಾಗಿ ಶಿವಲಿಂಗಕ್ಕೆ ನೀರನ್ನು ಸುರಿಸುತ್ತಿರುವ ದೃಶ್ಯವಿದೆ. ಶಿವಲಿಂಗದ ಪಕ್ಕದಲ್ಲಿಯೇ ಇತ್ತೀಚಿಗೆ ಮಾಡಿಸಿದ ಪಂಚಲೋಹದ ಶಿವಮೂರ್ತಿ ಇದೆ. ತಲೆಯಲ್ಲಿ ಗಂಗೆ ಹಾಗೂ ಸರ್ಪವಿದೆ. ಅಂತರಾಳದಲ್ಲಿ ಸಪ್ತಮಾತೃಕೆಯರ ಶಿಲ್ಪ ಪಟ್ಟಿಕೆಯಿದೆ. ಲಿಂಗದ ಎದುರಿನಲ್ಲಿ ಮೂರು ಅಡಿಯ ನಂದಿ ಶಿಲ್ಪವಿದೆ.

೨. ಗ್ರಾಮ : ಹುಲಿಗಿ
ಶಿಲ್ಪ : ನಂದಿ
ಸ್ಥಳ : ಸೋಮೇಶ್ವರ ದೇವಾಲಯದ ಗರ್ಭಗುಡಿಯ ಎದುರಿಗೆ
ಕಾಲ : ೧೨-೧೩ನೇ ಶತಮಾನ
ಸ್ಥಿತಿ : ಕನಿಷ್ಠ
ಮಾಧ್ಯಮ : ಕಪ್ಪು ಶಿಲೆ
ಅಳತೆ : ೩x೪ (ಎತ್ತರxಅಗಲ)

ಸೋಮೇಶ್ವರ ದೇವಾಲಯದ ಗರ್ಭಗುಡಿಯ ಮುಂಭಾಗದಲ್ಲಿ ಸಭಾ ಮಂಟಪದ ಮಧ್ಯಭಾಗದಲ್ಲಿ ಮೂರು ಅಡಿ ಎತ್ತರ ಹಾಗೂ ನಾಲ್ಕು ಅಡಿ ಉದ್ದದ ನಂದಿಯ ಶಿಲ್ಪವಿದೆ. ಸೋಮೇಶ್ವರನ ಕಾವಲುಗಾರ ನಂತೆ ಕಾಣುತ್ತದೆ. ನಂದಿಯ ಮುಖವು ರೌದ್ರವಾಗಿದೆ. ಹಣೆಪಟ್ಟಿ, ಗಂಟೆಸರ, ಕೊರಳಸರಗಳಿಂದ ನಂದಿಯನ್ನು ಅಲಂಕರಿಸಿರುವರು. ಈ ಮೂರ್ತಿಯು ಸಹ ಲಿಂಗದಷ್ಟೇ ಪ್ರಾಚೀನವಾದದ್ದು.

೩. ಗ್ರಾಮ : ಹುಲಿಗಿ

ಶಿಲ್ಪ : ಈಶ್ವರ

ಸ್ಥಳ : ಸೋಮೇಶ್ವರ ದೇವಾಲಯದ ಬಳಿ

ಕಾಲ : ಕ್ರಿ.ಶ.ಸು.೧೨-೧೩ನೆಯ ಶತಮಾನ

ಸ್ಥಿತಿ : ಕನಿಷ್ಠ

ಮಾಧ್ಯಮ : ಕಪ್ಪುಶಿಲೆ

ಸೋಮೇಶ್ವರ ದೇವಾಲಯದ ಬಳಿ ಚಿಕ್ಕದಾದ ಈಶ್ವರ ದೇವಾಲಯವಿದೆ. ಚಚ್ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಭುವನೇಶ್ವರಿಯಲ್ಲಿ ಪದ್ಮವನ್ನು ಕಡೆಯಲಾಗಿದೆ. ಗರ್ಭಗೃಹ, ಅಂತರಾಳ ಇವೆ. ಆದರೆ ಈಗ ಸಂಪೂರ್ಣವಾಗಿ ದೇವಾಲಯವು ಭಗ್ನಗೊಂಡಿರುವುದನ್ನು ಕಾಣಬಹುದು.

೪. ಗ್ರಾಮ : ಹುಲಿಗಿ

ಶಿಲ್ಪ : ಈಶ್ವರ

ಸ್ಥಳ : ಸೋಮೇಶ್ವರ ದೇಗುಲದ ದಕ್ಷಿಣಕ್ಕೆ

ಕಾಲ : ಕ್ರಿ.ಶ.ಸು.೧೨-೧೩ನೆಯ ಶತಮಾನ

ಸ್ಥಿತಿ : ಕನಿಷ್ಠ

ಮಾಧ್ಯಮ : ಕಪ್ಪುಶಿಲೆ

ಸೋಮೇಶ್ವರ ದೇವಾಲಯದ ದಕ್ಷಿಣಕ್ಕೆ ಈಶ್ವರ ದೇವಾಲಯವಿದೆ. ಗರ್ಭಗೃಹದಲ್ಲಿ ಎತ್ತರದ ಪೀಠದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಆದರೆ ಈಗ ಶಿವಲಿಂಗದ ಮೇಲ್ಭಾಗ ಉಳಿದಿಲ್ಲ.

೫. ಗ್ರಾಮ : ಶಿವಪುರ

ಶಿಲ್ಪ : ಮಾರ್ಕಂಡೇಶ್ವರ

ಸ್ಥಳ : ಗ್ರಾಮದ ಪೂರ್ವಕ್ಕೆ

ಕಾಲ : ೧೨-೧೩

ಸ್ಥಿತಿ : ಮಧ್ಯಮ

ಮಾಧ್ಯಮ : ಕಪ್ಪುಶಿಲೆ

ಶಿವಪುರ ಗ್ರಾಮದ ಪೂರ್ವಕ್ಕೆ ೧.ಕಿ.ಮೀ ದೂರದಲ್ಲಿ ತುಂಗಭದ್ರಾನದಿ ದಂಡೆಯ ಮೇಲೆ ಮಾರ್ಕಂಡೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿ ದೇವಾಲಯವಿದೆ. ಸಣ್ಣ ಗರ್ಭಗೃಹ, ಶುಕನಾಶಿ, ನವರಂಗಗಳನ್ನು ಒಳಗೊಂಡಿದೆ. ಆಯತಾಕಾರದ ಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಲಿಂಗದ ಹಿಂದೆ ತ್ರಿಶೂಲವನ್ನು ನೆಟ್ಟಿದ್ದಾರೆ. ಲಿಂಗದ ಮೇಲೆ ಧಾರಾಪಾತ್ರೆಯನ್ನು ಕಟ್ಟಲಾಗಿದೆ. ಪಂಚಲೋಹದ

ವಿಭೂತಿ, ಕಣ್ಣು, ಮೀಸೆ, ಇವುಗಳ ಪಟ್ಟಿಯನ್ನು ಇಡಲಾಗಿದೆ. ಶುಕನಾಶಿಯಲ್ಲಿ ಕಲ್ಲಿನ ನಂದಿ ವಿಗ್ರಹವಿದೆ. ಈ ದೇವಾಲಯಕ್ಕೆ ಮಾವಿನ ತೋಪು ಮತ್ತು ಎಂಟು ಎಕರೆ ಗದ್ದೆಯು ಆಸ್ತಿಯಾಗಿದೆ. (ಸ್ಥಳೀಯ ಮಾಹಿತಿ) ಪ್ರತಿವರ್ಷ ಶಿವರಾತ್ರಿಯ ದಿವಸ ಜಾತ್ರೆ ನಡೆಯುತ್ತದೆ.

೬.	ಗ್ರಾಮ	:	ಶಿವಪುರ
	ಶಿಲ್ಪ	:	ಸೋಮನಾಥ
	ಸ್ಥಳ	:	ಶಿವಪುರದ ಈಶಾನ್ಯಕ್ಕೆ ಇರುವ ಬೆಟ್ಟದಲ್ಲಿ
	ಕಾಲ	:	೧೧ನೇ ಶತಮಾನ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಶಿವಪುರದ ಈಶಾನ್ಯಕ್ಕೆ ಇರುವ ಬೆಟ್ಟದಲ್ಲಿ ಸೋಮೇಶ್ವರ ದೇವಾಲಯವಿದೆ. ಕ್ರಿ.ಶ.೧೧ನೇ ಶತಮಾನದಲ್ಲಿ ನಿರ್ಮಿಸಲಾದ ದೇವಾಲಯವಿದು. ದೇವಾಲಯ ಸ್ವಾಭಾವಿಕ ಗುಹಾಲಯ ಬೃಹತ್ ಬಂಡೆಗಲ್ಲಿನ ಕೆಳಗೆ ಸುಮಾರು ೨೦ ಅಡಿ ಅಗಲ ಮತ್ತು ೨೦ ಅಡಿಗಳಷ್ಟು ವಿಸ್ತಾರವಾದ ಗುಹೆಯಲ್ಲಿ ಕಪ್ಪುಶಿಲೆಯ ನಯವಾದ ಹೊಳಪಿನ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವರು. ತಲೆಯ ಮೇಲೆ ಧಾರಾಪಾತ್ರೆ ಯಾವಾಗಲೂ ನೀರನ್ನು ಸುರಿಸುತ್ತಿರುತ್ತದೆ. ಲಿಂಗದ ಮುಂದೆ ನಂದಿಯ ಶಿಲ್ಪವಿದೆ. ತ್ರೈಲೋಕ್ಯಮಲ್ಲನ ಕಾಲದಲ್ಲಿ ಕ್ರಿ.ಶ.೧೦೩೩ರಲ್ಲಿ ಈ ದೇವರಿಗೆ ಮಹಾಸಾಮಂತ ಪಂಪರಸ ಸೂರ್ಯಗ್ರಹಣ ನಿಮಿತ್ತಾಗಿ ೫೦ ಮತ್ತರು ಭೂಮಿ ದಾನ ನೀಡಿದ್ದುದು ಇಲ್ಲಿನ ಬಂಡೆಗಲ್ಲಿನ ಮೇಲಿರುವ ಶಾಸನದಿಂದ ತಿಳಿಯುತ್ತದೆ. ಈ ದೇವಾಲಯದ ಮುಂಭಾಗದಲ್ಲಿ ನಂದಿಯ ದೊಡ್ಡದಾದ ಶಿಲ್ಪವಿದೆ. ಜೊತೆಗೆ ನಾಗಶಿಲ್ಪ, ಗಣೇಶ ಶಿಲ್ಪಗಳೂ ಇವೆ.

೭.	ಗ್ರಾಮ	:	ಪಂಪಾಸರೋವರ
	ಶಿಲ್ಪ	:	ಈಶ್ವರ
	ಸ್ಥಳ	:	ತುಂಗಭದ್ರಾನದಿ ಎಡದಂಡೆ
	ಕಾಲ	:	ಕ್ರಿ.ಶ.ಸು.೧೬ನೆಯ ಶತಮಾನ
	ಸ್ಥಿತಿ	:	ಮಧ್ಯಮ
	ಮಾಧ್ಯಮ	:	ಕಪ್ಪುಶಿಲೆ

ಎತ್ತರದ ಜಗತಿಯ ಮೇಲಿರುವ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗದೆ. ಮುಖಮಂಟಪದಲ್ಲಿ ನಂದಿ, ಮಹಿಷಮರ್ದಿನಿ, ವೀರಭದ್ರ, ಭೈರವ ಮತ್ತಿತರ ಶಿಲ್ಪಗಳಿವೆ. ಜೀರ್ಣೋದ್ಧಾರ ಗೊಳಿಸಿರುವ ಈ ದೇವಾಲಯ ಮೊದಲಿನ ರೂಪ ಕಳೆದುಕೊಂಡಿದೆ.

೮.	ಗ್ರಾಮ	:	ಹೊಸೂರು
	ಶಿಲ್ಪ	:	ಈಶ್ವರ
	ಸ್ಥಳ	:	ತುಂಗಭದ್ರಾನದಿ ಬಲದಂಡೆ
	ಕಾಲ	:	ಕ್ರಿ.ಶ.ಸು.೧೫ನೆಯ ಶತಮಾನ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಹೊಸೂರು ಗ್ರಾಮದ ತುಂಗಭದ್ರಾನದಿ ಬಲದಂಡೆಯ ಹತ್ತಿರ ಈಶ್ವರ ದೇವಾಲಯವಿದೆ. ಇದು ಪಶ್ಚಿಮಾಭಿಮುಖವಾಗಿದೆ. ಗರ್ಭಗೃಹದಲ್ಲಿ ಈಗ ಶಿವಲಿಂಗ ಇಲ್ಲಾ. ದೇವಾಲಯದಲ್ಲಿ ಹಾಳಾದ ನಂದಿ ಮತ್ತು ಪಾಣಿಪೀಠಗಳಿರುವುದರಿಂದ ಇದು ಈಶ್ವರ ದೇವಾಲಯವಾಗಿರಬಹುದು (ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ).

೯.	ಗ್ರಾಮ	:	ಶಿವಪುರ
	ಶಿಲ್ಪ	:	ಮೃತ್ಯುಂಜಯೇಶ
	ಸ್ಥಳ	:	ಸೋಮನಾಥ ಬೆಟ್ಟ
	ಕಾಲ	:	೧೧ನೇ ಶತಮಾನ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಕಪ್ಪುಶಿಲೆ

ಶಿವಪುರದ ಈಶಾನ್ಯಕ್ಕೆ ಇರುವ ಬೆಟ್ಟದಲ್ಲಿ ಸೋಮೇಶ್ವರ ಲಿಂಗದ ಬಲಗಡೆಯಲ್ಲಿ ಚಿಕ್ಕ ಬಂಡೆಗಲ್ಲಿನ ಮೇಲೆ ಈ ಮೃತ್ಯುಂಜಯೇಶ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ತಲೆಯ ಮೇಲೆ ಧಾರಾ ಪಾತ್ರೆಯಿದೆ. ಸೋಮನಾಥನ ಜೊತೆಗೆ ಈ ಲಿಂಗಕ್ಕೂ ಪೂಜೆ ಮಾಡಲಾಗುತ್ತದೆ.

೧೦.	ಗ್ರಾಮ	:	ಶಿವಪುರ
	ಶಿಲ್ಪ	:	ನಂದಿಶಿಲ್ಪ
	ಸ್ಥಳ	:	ಶಿವಪುರದ ಈಶಾನ್ಯಕ್ಕೆ ಇರುವ ಬೆಟ್ಟದಲ್ಲಿ
	ಕಾಲ	:	೧೧ನೇ ಶತಮಾನ
	ಸ್ಥಿತಿ	:	ಕನಿಷ್ಠ
	ಮಾಧ್ಯಮ	:	ಬಂಡೆಗಲ್ಲು

ಶಿವಪುರದ ಈಶಾನ್ಯಕ್ಕೆ ಇರುವ ಬೆಟ್ಟದ ಸೋಮನಾಥ ಬೆಟ್ಟ ಈ ದೇವಾಲಯದ ಮುಂಭಾಗದಲ್ಲಿ ನಂದಿಯ ದೊಡ್ಡದಾದ ಶಿಲ್ಪವಿದೆ. ಇದರ ಶಿರಭಾಗವನ್ನು ಭಗ್ನಗೊಳಿಸಲಾಗಿದೆ. ತಲೆಯ ಮೇಲ್ಭಾಗದಲ್ಲಿ

ಲಿಂಗದ ಶಿಲ್ಪವಿದೆ. ಕೊರಳಹಾರ, ಕೊರಳ ಗಂಟೆ, ಕಾಲುಗೆಜ್ಜೆ, ಹಣೆಪಟ್ಟಿಗಳನ್ನು ನಂದಿಗೆ ಹಾಕಲಾಗಿದೆ. ಈ ನಂದಿ ಸೋಮೇಶ್ವರನ ಕಾವಲುಗಾರನಂತೆ ಗೋಚರಿಸುತ್ತದೆ. ಶಿಲ್ಪ ನೋಡುಗರಿಗೆ ಆನಂದವನ್ನು ಉಂಟುಮಾಡುತ್ತದೆ.

೧೧. ಗ್ರಾಮ : ಶಿವಪುರ
ಶಿಲ್ಪ : ವೀರಭದ್ರ
ಸ್ಥಳ : ಮಾರ್ಕಂಡೇಶ್ವರ ದೇವಾಲಯ
ಕಾಲ : ೧೩ನೇ ಶತಮಾನ
ಸ್ಥಿತಿ : ಕನಿಷ್ಠ
ಮಾಧ್ಯಮ : ಕಪ್ಪುಶಿಲೆ

ಮಾರ್ಕಂಡೇಶ್ವರ ಲಿಂಗದ ಬಲಗಡೆಯ ಗೂಡಿನಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ. ಕಪ್ಪು ಶಿಲೆಯಲ್ಲಿ ಈ ಶಿಲ್ಪಿಯನ್ನು ಕೆತ್ತಲಾಗಿದೆ. ನಾಲ್ಕು ಕೈಗಳು ಇವೆ ಬಲಬದಿಯ ಕೈಗಳಲ್ಲಿ ಖಡ್ಗ, ಧನಸ್ಸು, ಎಡಬದಿಯ ಕೈಗಳಲ್ಲಿ ತ್ರಿಶೂಲ, ಕಮಂಡಲವನ್ನು ಹಿಡಿದಿದ್ದಾನೆ. ಕೊರಳಲ್ಲಿ ರುದ್ರಾಕ್ಷಿ ಹಾರ, ರುದ್ರಾಕ್ಷಿ ಕಿವಿಯೋಲೆಯನ್ನು ಧರಿಸಿದ್ದಾನೆ. ಶಿವನ ಇನ್ನೊಂದು ಅವತಾರವೇ ವೀರಭದ್ರ.

೧೨. ಗ್ರಾಮ : ಶಿವಪುರ
ಶಿಲ್ಪ : ನಂದಿ
ಸ್ಥಳ : ಪಾಳು ಬಸವ ಮಂಟಪ
ಕಾಲ : ೧೧-೧೨ನೇ ಶತಮಾನ
ಸ್ಥಿತಿ : ಕನಿಷ್ಠ
ಮಾಧ್ಯಮ : ಕಪ್ಪುಶಿಲೆ

ಶಿವಪುರ ಗ್ರಾಮದ ಊರ ಹೊರಗೆ ಪಾಳು ಬಸವ ಮಂಟಪವಿದೆ. ಈ ಮಂಟಪದಲ್ಲಿ ನಂದಿ ಶಿಲ್ಪವಿದೆ. ಇದು ಭಗ್ನಗೊಂಡಿದೆ. ಕೈ, ಕಾಲು, ಮುಖ, ಕಿವಿಗಳು ಭಗ್ನಗೊಂಡಿವೆ. ಬರೀ ದೇಹ ಮಾತ್ರ ಇದೆ.

ಅಧ್ಯಾಯ - ಆರು

ಉಪಸಂಹಾರ

ಅಧ್ಯಾಯ - ಆರು

ಉಪಸಂಹಾರ

ಕರ್ನಾಟಕ ಸಂಸ್ಕೃತಿ ಪುರಾತನವಾದದ್ದು, ಕರ್ನಾಟಕವು ಐತಿಹಾಸಿಕ ಮಹತ್ವ ಪಡೆದ ಪ್ರಾಚೀನ ನಾಡಾಗಿದೆ. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕ ದರ್ಶನದ ದಿವ್ಯದೃಷ್ಟಿ, ಸಾಹಿತ್ಯಸೃಷ್ಟಿ, ಶಿಲ್ಪಕಲೆ ಆದಿಯಾಗಿ ಕಲೋಪಾಸನೆಯಲ್ಲಿ ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಕರ್ನಾಟಕದ ಸಾಧನೆ ಸಾರ್ಥಕತೆಯನ್ನು ಪಡೆದಿದೆ. ಅತೀ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಉಜ್ವಲ ಪರಂಪರೆ ಇದ್ದು. ಅದನ್ನು ಬೆಳೆಸಿಕೊಂಡು ಬಂದಿದೆ ಹಾಗೂ ಸರ್ವಧರ್ಮ ಸಮನ್ವಯವನ್ನು ಸ್ಥಾಪಿಸಿದ ಭೂಮಿ ಇದಾಗಿದೆ. ಇಂತಹ ಹಿನ್ನಲೆಯನ್ನು ಪಡೆದ ಕೊಪ್ಪಳ ಜಿಲ್ಲೆಯಲ್ಲಿ ಹುಲಿಗಿಯೂ ಒಂದು ಗ್ರಾಮವನ್ನು ಸೀಮಿತ ಮಾಡಿಕೊಂಡ ಮಾಡಿದ ಅಧ್ಯಯನ ಇದಾಗಿದೆ.

ಶಾಸನಗಳು ಮತ್ತು ದೇವಾಲಯಗಳು ಸಮಕಾಲೀನ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ವಿಷಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ಮುಖ್ಯ ಆಕರಗಳಾಗಿವೆ. ಈ ಹಿನ್ನಲೆಯಲ್ಲಿ ಹುಲಗಿ ಪರಿಸರದಲ್ಲಿ ಕ್ಷೇತ್ರಕಾರ್ಯ ಮಾಡಿ ಶಾಸನಗಳು,ದೇವಾಲಯಗಳು ಮತ್ತು ಶಿಲ್ಪಗಳನ್ನು ಒಂದೆಡೆಗೆ ಸಂಗ್ರಹಿಸಿ ವಸ್ತುನಿಷ್ಠವಾಗಿ ಪುನರಚಿಸುವ ಉದ್ದೇಶದೊಂದಿಗೆ ಪ್ರಾರಂಭವಾದ ಈ ಅಧ್ಯಯನದಲ್ಲಿ ಅನೇಕ ಮಹತ್ವದ ಹೊಸ ಹೊಸ ವಿಚಾರಗಳು ತಿಳಿಯುವಂತಾಗಿದೆ. ಹುಲಿಗಿ ಪರಿಸರದ ಇತಿಹಾಸ ಮತ್ತು ವೈಭವ ಸಂಸ್ಕೃತಿಯನ್ನು ತಿಳಿಯುವಲ್ಲಿ ಶಾಸನಗಳು, ದೇವಾಲಯಗಳು ಪ್ರಮುಖ ಆಕರಗಳಾಗಿ ಕಲೆಗೆ ದೊರೆತ ಪ್ರೋತ್ಸಾಹವನ್ನು, ಕಲಾಶೈಲಿಯನ್ನು ಹಾಗೂ ಧಾರ್ಮಿಕ ಸ್ಥಿತಿಯನ್ನು ತಿಳಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಈ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯ ಮಾಡಿ ಪ್ರಕಟಿತ ಮತ್ತು ಅಪ್ರಕಟಿತ ಮಾಹಿತಿಗಳೊಂದಿಗೆ ಮಾಡಿದ ಪ್ರಯತ್ನ ಇದಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಭೂ ಭೌಗೋಳಿಕ ಪರಿಸರ, ಇಲ್ಲಿತನಕ ನಡೆದ ಪೂರ್ವಾಧ್ಯಾಯಗಳ ಸಮೀಕ್ಷೆ, ಅಧ್ಯಯನದ ವಿಧಿ ವಿಧಾನಗಳನ್ನು ಹೇಳಲಾಗಿದೆ. ಸಾಹಿತ್ಯಿಕ ಪುರಾತತ್ವ ಆಕರಗಳನ್ನು ಒಂದೆಡೆ ಸೆರೆ ಹಿಡಿದು,ಆಕರಗಳ ಪರಿಚಯವನ್ನು ಇಲ್ಲಿ ಹೇಳಲಾಗಿದ್ದು ಅಧ್ಯಯನದ ಅವಶ್ಯಕತೆಯನ್ನು ಹೇಳಲಾಗಿದೆ. ಈ ಪರಿಸರದಲ್ಲಿ ಕಂಡುಬಂದ ದೇವಾಲಯಗಳ, ಶಾಸನಗಳ ಮತ್ತು ಮೂರ್ತಿಶಿಲ್ಪಗಳ ಮಜಲುಗಳನ್ನು ಗುರುತಿಸಿ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವುದು ಈ ಅಧ್ಯಯನವಾಗಿದೆ.

ಅಧ್ಯಾಯ ಎರಡರಲ್ಲಿ ಶಾಸನಗಳ ಆಧಾರಿತ ಐತಿಹಾಸಿಕ ಹಿನ್ನಲೆಯಲ್ಲಿ ಹುಲಿಗಿ ಪರಿಸರದ ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಮತ್ತು ಧಾರ್ಮಿಕ ವ್ಯವಸ್ಥೆ ಕುರಿತು ಹೇಳಲಾಗಿದೆ. ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಚರ್ಚಿಸುವಾಗ ಒಟ್ಟಾರೆ ಇಲ್ಲಿ ದೊರೆತ ಪ್ರಾಚ್ಯ ವಸ್ತುಗಳ ಆಧಾರವನ್ನು ಮುಖ್ಯವಾಗಿ ಪರಿಗಣನೆಗೆ ತೆಗೆದುಕೊಂಡಾಗ ಶೈವಧರ್ಮ ಹೆಚ್ಚು ಮುಂಚೂಣಿಯಲ್ಲಿ ಇತ್ತೆಂಬುದು ಸ್ಪಷ್ಟ ಕೃಷಿ ಪದ್ಧತಿಯನ್ನು ಹೇಳುವಾಗ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಭೂಮಿಯನ್ನು ಅಳೆಯವುದಕ್ಕೆ ಮತ್ತರು ಎಂಬುವುದಾಗಿಯೂ, 'ಮತ್ತರು' ಎಂದರೆ ೯೦೦ ಕುಂಭಗಳು ಎಂದರ್ಥ, ಜೊತೆಗೆ ಖಂಡುಗ, ಕೊಳ, ಗದ್ಯಾಣ, ಕುಂಭ, ಹಿರೇಕೋಲು, ತಮ್ಮ, ಪಣ, ಮಾನ ಮುಂತಾದ ಅಳತೆ ಮಾಪನಗಳನ್ನು ಬಳಸುತ್ತಿದ್ದರು ಎನ್ನುವುದಕ್ಕೆ ಶಾಸನಗಳ ಉಲ್ಲೇಖವಿದೆ. ಒಟ್ಟಾರೆ ಈ ಪರಿಸರದಲ್ಲಿ ಕಂಡುಬಂದ ಪ್ರಾಚ್ಯ ವಸ್ತುಗಳ ಆಧಾರಿತ ಐತಿಹಾಸಿಕ ಹಿನ್ನಲೆ ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಾಯ ಮೂರರಲ್ಲಿ ಶಾಸನಗಳ ವೈವಿಧ್ಯತೆಯ ಬಗ್ಗೆ ಚರ್ಚಿಸಲಾಗಿದೆ. ಅಂದರೆ ಹೊಸೂರು, ಪಂಪಾಸರೋವರ, ಕಿಡದಾಳು ಹಾಗೂ ಹಿರೇಕಾಸಿನಕಂಡಿ ಶಾಸನಗಳಲ್ಲಿ ದಾನಶಾಸನ, ವೀರಗಲ್ಲು ಶಾಸನ ಮತ್ತು ಮಾಸ್ತಿಗಲ್ಲು ಹೀಗೆ ವೈವಿಧ್ಯತೆ ಇಲ್ಲಿದೆ. ಹೆಚ್ಚಿನ ಮಟ್ಟಿಗೆ ಇಲ್ಲಿನ ಶಾಸನಗಳು ಕಲ್ಯಾಣ ಚಾಲುಕ್ಯರ ಮತ್ತು ವಿಜಯನಗರ ದೊರೆಗಳ ಕಾಲಕ್ಕೆ ಸೇರಿದವುಗಳಾಗಿವೆ. ಇಲ್ಲಿನ ಸ್ಮಾರಕ ಶಾಸನಗಳು ಅಂದಿನ ಸಾಮಾಜಿಕ, ಧಾರ್ಮಿಕ ಪರಂಪರೆಯನ್ನು ಬಿಂಬಿಸಿವೆ. ದೊರೆತ ಶಾಸನಗಳಲ್ಲಿ ಬಹಳಷ್ಟು ಶಾಸನಗಳು ದಾನಶಾಸನಗಳಾಗಿವೆ. ಹುಲಿಗಿಯ ಸೋಮೇಶ್ವರ ದೇವಾಲಯದ ಆವರಣದಲ್ಲಿ ಮತ್ತು ಅಗಳಕೇರಿ ಗ್ರಾಮದಲ್ಲಿ ವೀರ ಮಹಾಸತಿಗಲ್ಲುಗಳು ದೊರೆತಿವೆ.

ಈ ವೀರಮಹಾಸತಿ ಕಲ್ಲಿನಲ್ಲಿ ವೀರ ಮತ್ತು ಮಹಾಸತಿಯಾದ ಮಹಿಳೆಯ ಶಿಲ್ಪವಿದೆ. ಇದರಿಂದ ಹುಲಿಗಿ ಪರಿಸರದಲ್ಲಿ ಮಹಾಸತಿ ಆಚರಣೆಗಳು ಇರುವುದು ಸ್ಪಷ್ಟ. ಅದೇ ರೀತಿಯಾಗಿ ಹುಲಿಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿಯಸಭಾಮಂಟಪದಲ್ಲಿ ಐದುವೀರಗಲ್ಲುಗಳಿವೆ. ಇವುಗಳಲ್ಲಿ ಎರಡು ವೀರಗಲ್ಲುಗಳನ್ನು ಈ ಪರಿಸರದಲ್ಲಿ ನಾಗಜೋಗಿ ಮತ್ತು ಬಸವಜೋಗಿಯೆಂದು ಕರೆಯುವರು. ಇಲ್ಲಿನ ಸೀಳುನಾಲೆಯನ್ನು ನಿರ್ಮಿಸುವಲ್ಲಿ ಪ್ರಮುಖ ಕಾರಣಕರ್ತರು. ಇದರ ಸಾಧನೆಗಾಗಿ ಇವರ ಸ್ಮರಣಾರ್ಥ ವೀರಗಲ್ಲನ್ನು ಹಾಕಿಸಲಾಗಿದೆ. ಇದರಿಂದ ಹುಲಿಗಿ ಪರಿಸರದಲ್ಲಿ ವೀರರ ನೆನಪಿಗಾಗಿ ವೀರಗಲ್ಲನ್ನು ನಿಲ್ಲಿಸುತ್ತಿದ್ದರೆಂಬ ವಿಷಯ ಸ್ಪಷ್ಟವಾಗುತ್ತದೆ.

ಅಧ್ಯಾಯ ನಾಲ್ಕರಲ್ಲಿ ಹುಲಿಗಿ ಪರಿಸರ ಅಂದರೆ ಹುಲಿಗಿ, ಪಂಪಾಸರೋವರ, ಹೊಸೂರು, ಕಿಡಿದಾಳುಗಳ ದೇವಾಲಯಗಳ ವಾಸ್ತುಕಲೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಹುಲಿಗಿ ಪರಿಸರದಲ್ಲಿನ ದೇವಾಲಯಗಳು ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರ ದೊರೆಗಳ ಕಾಲಕ್ಕೆ ಸೇರಿದವುಗಳಾಗಿವೆ. ಎತ್ತರವಾದ ಅಧಿಷ್ಠಾನವನ್ನು ಹೊಂದಿದ್ದು, ಅಧಿಷ್ಠಾನದ ಮೇಲಾಗದಲ್ಲಿ ಕಪೋತ ಭಾಗ ಸಾಮಾನ್ಯ ಲಕ್ಷಣವಾಗಿದೆ.ಇಲ್ಲಿಚಿಕ್ಕ ಆಕಾರ ದೇವಾಲಯಗಳಲ್ಲಿ ಭಿತ್ತಿಗಳು ಸರಳವಾಗಿದ್ದರೆ ದೊಡ್ಡ ದೇವಾಲಯಗಳ ಭಿತ್ತಿಗಳು ಅಲಂಕೃತವಾಗಿರುತ್ತವೆ. ಅಂದರೆ ಭಿತ್ತಿಗಳಲ್ಲಿ ಹಲವಾರು ಮೂರ್ತಿಶಿಲ್ಪಗಳು ಇವೆ. ಒಟ್ಟಾರೆ ಕಲ್ಯಾಣ ಮಂಟಪ, ಮೂರ್ತಿಗಳು, ಗೋಪುರಗಳು, ಇಟ್ಟಿಗೆಯನ್ನು ಶಿಖರಕ್ಕೆ ಬಳಸಿರುವುದು ಇವೆಲ್ಲವೂ ಹುಲಿಗಿ ಪರಿಸರದ ದೇವಾಲಯಗಳಲ್ಲಿ ಕಂಡು ಬಂದ ವೈಶಿಷ್ಟ್ಯತೆಗಳಾಗಿವೆ. ಇಲ್ಲಿ ಶೈವ ಪಂಥ, ವೈಷ್ಣವ ಪಂಥ ಮತ್ತು ಜೈನ ಪಂಥಕ್ಕೆ ಸೇರಿದ ದೇವಾಲಯಗಳಿವೆ.ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ, ಹುಲಿಗಿ ಪರಿಸರದಲ್ಲಿ ಶೈವ ಪಂಥಕ್ಕೆ ಸೇರಿದ ದೇವಾಲಯಗಳು ಹೆಚ್ಚಾಗಿವೆ. ಆದರೂ ಉಳಿದ ಧರ್ಮವನ್ನು ಕಡೆಗಣಿಸಿರಲಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಗಮನಾರ್ಹ ಅಶವಾಗಿದೆ. ಉದಾಹರಣೆಗಾಗಿ ಹುಲಿಗಿ ಗ್ರಾಮದ ಪೂರ್ವಕ್ಕೆ ಜೈನ ಬಸದಿಯಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲ ಅಂದರೆ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ್ದಾಗಿದೆ.

ದೇವಾಲಯಗಳು ಆಡಳಿತ ಕೇಂದ್ರವಾಗಿ, ನೌಕರಿ ಕೊಡುವ ಸ್ಥಾನವಾಗಿ, ಶೈಕ್ಷಣಿಕ ಕೇಂದ್ರವಾಗಿ, ಮಠವಾಗಿ, ವಾಸಸ್ಥಾನವಾಗಿ, ಆಹಾರ ಛತ್ರವಾಗಿ ಮತ್ತು ನ್ಯಾಯಾಲಯದ ಕೇಂದ್ರವಾಗಿ ಹೆಚ್ಚು ಮಹತ್ವ ಪಡೆದಿವೆ ಎಂಬುದರ ಪ್ರಸ್ತಾವನೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ಐದು ಮೂರ್ತಿಶಿಲ್ಪಗಳ ಕುರಿತಾಗಿವೆ. ಮೂರ್ತಿ ಶಿಲ್ಪಗಳು ಗಾಣಪತ್ಯ, ಶಾಕ್ತ, ವೈಷ್ಣವ, ಶೈವ, ಜೈನ ಪಂಥಕ್ಕೆ ಸೇರಿದವುಗಳಾಗಿವೆ. ಮೂರ್ತಿಶಿಲ್ಪಗಳು ಅಂದಿನ ಧಾರ್ಮಿಕ ಪರಂಪರೆಯನ್ನು ಬಿಂಬಿಸುತ್ತವೆ. ಹುಲಿಗಿ ಪರಿಸರದಲ್ಲಿ ಮೂರ್ತಿಶಿಲ್ಪಗಳಲ್ಲೂ ವೈವಿಧ್ಯತೆಯನ್ನು ಕಾಣಬಹುದು. ಗಾಣಪತ್ಯ, ಶಾಕ್ತಮೂರ್ತಿಗಳು, ಸಪ್ತಮಾತೃಕೆಯರು, ಹುಲಿಗೆಮ್ಮ, ಹೊನೂರಮ್ಮ, ಜಯಲಕ್ಷ್ಮೀ, ವೈಷ್ಣವ ಶಿಲ್ಪಗಳಾದ ಗೋಪಾಲಕೃಷ್ಣ, ಆಂಜನೇಯ ಹೀಗೆ ಮೂರ್ತಿ ಶಿಲ್ಪಗಳಲ್ಲಿ ವೈವಿಧ್ಯತೆಯನ್ನು ಕಂಡರೂ "ಏಕಂ ಸತ್ ವಿಪ್ರಃ ಬಹುಧಾ ವದಂತಿ" ನಾಮ ಹಲವು ಶಕ್ತಿ ಒಂದೇ ಎಂಬುದನ್ನು ಸಾಬೀತುಪಡಿಸಿವೆ. ಹುಲಿಗಿ ಗ್ರಾಮದ ಪೂರ್ವಕ್ಕೆ ಒಂದೇ ಜೈನ ಬಸದಿ ಇದ್ದರೂ ಅಲ್ಲಿ ನಾಲ್ಕೈದು ತೀರ್ಥಂಕರ ಮೂರ್ತಿಶಿಲ್ಪಗಳು ಕಂಡುಬಂದಿರುವುದರಿಂದ ಇಲ್ಲಿ ಜೈನ ಧರ್ಮವು ಅಸ್ತಿತ್ವದಲ್ಲಿತ್ತೆಂಬುದು ಸ್ಪಷ್ಟವಾಗಿದೆ. ಹೀಗಾಗಿ ಪ್ರಸ್ತುತ ಕಿರು ಪ್ರಬಂಧದಲ್ಲಿ ಹುಲಿಗಿ ಪರಿಸರದಲ್ಲಿ ದೊರೆತ ಮೂರ್ತಿಶಿಲ್ಪಗಳ ವೈಶಿಷ್ಟತೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಒಟ್ಟಾರೆ ಇಲ್ಲಿ ದೊರೆತ ಶಾಸನಗಳಿಂದ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ಇಲ್ಲಿನ ಸಾಂಸ್ಕೃತಿಕ ಮಜಲುಗಳನ್ನು ತಿಳಿಯಲು ಪೂರಕವಾದ ಆಕರಗಳಾಗಿವೆ. ಹೀಗೆ ಹುಲಿಗಿ ಪರಿಸರದ ಶಾಸನಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ಪ್ರಾದೇಶಿಕವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ

ಮುಖಗಳ ಅಧ್ಯಯನಕ್ಕೆ ಕೊಡುಗೆ ಸಲ್ಲಿಸಿವೆ. ಈ ಹಿನ್ನಲೆಯಲ್ಲಿ ಶ್ರೀ ಸಾಮಾನ್ಯರು ಇದರ ಅರಿವು ಮೂಡಿಸಿಕೊಳ್ಳುವ ಅವಶ್ಯಕತೆ ಇದೆ.

ಹೊಸ ಚಿಗುರು, ಹೂ-ಹಣ್ಣುಗಳನ್ನು ಅರಳಿಸುತ್ತಾ ಆಯಾ ಯುಗದ ಅವಶ್ಯಕತೆಗೆ ಅನುಗಣವಾಗಿ ಹೊಸದನ್ನು ಅಳವಡಿಸಿಕೊಳ್ಳಲು ಅಕ್ಷರ ಶಕ್ತಿಯನ್ನು ವೃದ್ಧಿಸುತ್ತವೆ. ಬೆಲ್ಲದ ಸಿಹಿ ಸವಿದವನೇ ಬಲ್ಲ ಎಂಬ ನಾಣ್ಣುಡಿಯಂತೆ ಇದರ ಅಧ್ಯಯನ ಮಾಡತೊಡಗಿದರೆ ಇದರ ಸತ್ವದ ಬೆಳಕಿನ ಮಹತ್ವದ ಅರಿವಾಗುತ್ತದೆ. ತಳದಲ್ಲಿರುವ ತಾಯಿ ಬೇರಿನ ಸತ್ವದಿಂದ ಆ ಸತ್ವವನ್ನು ಕಂಡುಕೊಳ್ಳುವ ಪ್ರಯತ್ನ ಇದಾಗಿದೆ.

ಅನುಬಂಧಗಳು

೧. ಆಕರ ಗ್ರಂಥಗಳು
೨. ಹುಲಿಗಿಯ ನಕಾಶೆ
೩. ಛಾಯಾಚಿತ್ರಗಳು

ಆಕರ ಗ್ರಂಥಗಳು

೦೧. ಅಪರ್ಣ ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೨. ಭಟ್‌ಸೂರಿ ಕೆ.ಜಿ., ೧೯೯೬, ಗೇರುಸೊಪ್ಪೆಯ ಜೈನ ವಾಸ್ತು ಮತ್ತು ಮೂರ್ತಿಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೩. ಭಟ್‌ಸೂರಿ ಕೆ.ಜಿ., ೨೦೧೧, ಹಾಡುವಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೪. ಚಿದಾನಂದ ಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೦೫. ಸಿದ್ಧಲಿಂಗಪ್ಪ ಕೊಟ್ನೆಕಲ್, ೨೦೧೦, ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಮೇಘನಾ ಪ್ರಕಾಶನ, ಕೊಪ್ಪಳ

೦೬. ದತ್ತಾತ್ರೇಯ ಜಿ., ೨೦೦೯, ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೭. ದೇಸಾಯಿ ಬಿ.ಆರ್., ಶ್ರೀ ಹುಲಿಗಿ ರೇಣುಕಾಂಬಾ ಸ್ಥಳ ಚರಿತ್ರೆ, ಹುಲಿಗಿ, ಮುನಿರಾಬಾದ್

೦೮. ಹಿರಾಲಾಲ ಜೈನ್, ಮಿರ್ಜಿ ಅಣ್ಣಾರಾಯ (ಲೇ), ಸೇಡಬಾಳ (ಅನು), ೧೯೮೧, ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ, ಲಾಲಾಚಂದ ಹಿರಾಚಂದ ದೋಶಿ, ಜೈನ ಸಂಸ್ಕೃತಿ, ಸಂರಕ್ಷಕ ಸಂಘ, ಸೊಲ್ಲಾಪುರ

೦೯. ಹಿರೇಮಠ ಎಸ್.ಎಸ್., ೨೦೦೦, ಕೊಪ್ಪಳ ಜಿಲ್ಲೆಯ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೧೦. ಮಹಾದೇವ ಸಿ., ೨೦೦೯, ಧಾರವಾಡ ಜಿಲ್ಲೆಯ ದೇವಾಲಯ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೧. ನರಸಿಂಹ ಮೂರ್ತಿ ಎ.ವಿ., ೧೯೭೨, ಕರ್ನಾಟಕದ ಶಾಸನ ಸಂಪತ್ತು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೨. ನರಸಿಂಹ ಮೂರ್ತಿ ಎ.ವಿ., ೧೯೭೩, ಕರ್ನಾಟಕ ಶಾಸನ ಸಂಪತ್ತು ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೩. ನಾಗರಾಜಯ್ಯ ಹಂಪ, ೧೯೭೬, ಯಕ್ಷಯಕ್ಷಿಯರು, ಚಂದ್ರಸಾಗರ ವರ್ಣೀಗ್ರಂಥ ಮಾಲೆ, ಬೆಂಗಳೂರು

೧೪. ಪ್ರಭಾಕರ್ ಎಂ.ಎನ್., ೨೦೧೧, ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಪ್ರಭಾಕರ್ ಎಂ.ಎನ್., ೨೦೦೦, ದೇವಾಲಯಗಳ ವಾಸ್ತುಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. ಪಾಟೀಲ್ ಎಚ್.ಎಸ್., ಸಾಹಿತ್ಯ ಸಂಸ್ಕೃತಿ ಪರಂಪರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ

೧೮. ಪುರುಷೋತ್ತಮ ಬಿಳಿಮಲೆ, ೧೯೯೯, ಹುಲಿಗೆಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಶೇಷಶಾಸ್ತ್ರೀ ಆರ್., ೧೯೮೨, ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೦. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೧. ಶೇಷಶಾಸ್ತ್ರೀ ಆರ್., ೨೦೦೫, ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨೨. ಸುಂದರ ಅ., ೧೯೯೪, ದೇವಾಲಯ ಮೂರ್ತಿಶಿಲ್ಪ ಚೈತ್ಯಾಲಯ ಒಂದು ವಿಶ್ಲೇಷಣೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೩. ಸುರೇಶ್ ಕೆ.ಎಂ., ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೪. ಸೂರ್ಯನಾಥ ಯು.ಕಾಮತ್, ೧೯೮೬, ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-೩

೨೫. ಸೋಮಶೇಖರ್ ಎಸ್.ವೈ., ಸೋಮೇಶ್ವರ ದೇವಾಲಯ, ಅಪ್ರಕಟಿತ ಲೇಖನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೬. ತಾರಿಹಳ್ಳಿ ಹನುಮಂತಪ್ಪ, ೨೦೧೦, ಹೊಸೂರಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೭. ವಾಸುದೇವನ್ ಸಿ.ಎಸ್., ೨೦೧೦, ಹಂಪಿ ಪರಿಸರದ ಅಪರೂಪದ ಪಂಚಮುಖ ಲಿಂಗಗಳು, ಸಂಪುಟ-೧೫, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ವಾಸುದೇವನ್ ಸಿ.ಎಸ್., ಹುಲಿಗಿಯ ಜೈನ ಬಸದಿ ಅಪ್ರಕಟಿತ ಲೇಖನ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಆಂಗ್ಲ ಭಾಷಾ ಗ್ರಂಥಗಳು

01. Ajith Prasad, 1996, Jainism in Dharawad Region (Unpublished Ph.D Thesis), Department of Ancient Indian History and Epigraphy
02. Robert Sewell, 1983, The Historical Inscription of Southern India, New Delhi
03. Desai P.B., 1957, Jainism in South India and Some Jain Epigraphs, Kolhapur

ಶಾಸನ ಸಂಪುಟಗಳು


1. Andhra Pradesh Government Archeological Series –III (1959-60)
2. Annual Reports of Indian Epigraphy 1964-64 No-B
3. Epigraphic Indica, volutes
4. Indian Antiquary
5. IK Vol-iii
6. Kannada University Epigraphical Series Vol-2
7. Karnataka Inscriptions
8. Mysore Archaeological reports
9. Quarterly Journal of Mythic Society Vol-vii
10. Vijayanagar Progress Reports

೨. ಹುಲಿಗಿಯ ನಕಾಶೆ

ಕರ್ನಾಟಕ ನಕ್ಷೆ






ಕೊಪ್ಪಳ ತಾಲೂಕು

೩. ಛಾಯಾಚಿತ್ರಗಳು

ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳು ಛಾಯಾಚಿತ್ರಗಳು

ಮೂರ್ತಿಶಿಲ್ಪಗಳು

ಗಣಪತಿ

೨೦. ಶಿವಪುರ ಗಣಪತಿ

೨೧. ಶಿವಪುರ ಮಾರ್ಕಂಡೇಶ್ವರ ದೇವಾಲಯದಲ್ಲಿನ ಗಣಪತಿ

೨೨. ಹೊಸೂರು ಗಣೇಶ

ಶೈವ ಮೂರ್ತಿಶಿಲ್ಪಗಳು

೨೩. ಹುಲಿಗಿ ಸೋಮೇಶ್ವರ

೨೪. ಹುಲಿಗಿ ನಂದಿಶಿಲ್ಪ

೨೫. ಹುಲಿಗಿ ಶಾಸನಶಿಲ್ಪ

೨೬. ಶಿವಪುರ ನಂದಿಶಿಲ್ಪ

೨೭. ಶಿವಪುರ ವೀರಭದ್ರೇಶ್ವರ

೨೮. ಶಿವಪುರ ಮಾರ್ಕಂಡೇಶ್ವರ

೨೯. ಬೆಟ್ಟದ ಸೋಮನಾಥ ನಂದಿಶಿಲ್ಪ

೩೦. ಅಗಳಕೇರಿ ಪಾಳು ನಂದಿ ಶಿಲ್ಪ

೩೧. ಹೊಸೂರು ದ್ವಾರಪಾಲಕ ೧

೩೨. ಹೊಸೂರು ದ್ವಾರಪಾಲಕ ೨

ಶಾಕ್ತ ಮೂರ್ತಿ ಶಿಲ್ಪಗಳು

೩೩. ಸೋಮನಾಥ ಬೆಟ್ಟ ಮಹಿಷಾಸುರ ಮರ್ದಿನಿ

೩೪. ಹುಲಿಗಿ ಹುಲಿಗೆಮ್ಮ

೩೫. ಹೊಸೂರು ಹೊಸೂರಮ್ಮ

೩೬. ಹೊಸೂರು ಪಾರ್ವತಿ

೩೭. ಹೊಸೂರು ಸಪ್ತಮಾತೃಕೆಯರು

೩೮. ಹೊಸೂರು ನಾಗದೇವತೆ

೩೯. ಸೋಮನಾಥ ಬೆಟ್ಟ ಗಜಲಕ್ಷ್ಮೀ

೪೦. ಹುಲಿಗಿ ಪಾರ್ವತಿ

೪೧. ಹುಲಿಗಿ ಮಾತಂಗೆಮ್ಮ

೪೨. ಹುಲಿಗಿ ಮುದ್ದಮ್ಮ

ವೈಷ್ಣವ ಮೂರ್ತಿಶಿಲ್ಪಗಳು

೪೩. ಹುಲಿಗಿ ಪರಶುರಾಮ

೪೪. ಹುಲಿಗಿ ಆಂಜನೇಯ

೪೫. ಹೊಸೂರು ದತ್ತಾತ್ರೇಯ

೪೬. ಹೊಸೂರು ಜಮದಗ್ನಿ ರೇಣುಕಾ

೪೭. ಶಿವಪುರ ಆಂಜನೇಯ

೪೮. ಕಿಡದಾಳು ಆಂಜನೇಯ

ಜೈನ ಮೂರ್ತಿಗಳು

೪೯. ಹುಲಿಗಿ ಜೈನ ಬಸದಿ ಪಾರ್ಶ್ವನಾಥ ೧

೫೦. ಹುಲಿಗಿ ಜೈನ ಬಸದಿ ಪಾರ್ಶ್ವನಾಥ ೨

೫೧. ಹುಲಿಗಿ ಜೈನ ಬಸದಿ ಮಹಾವೀರ

೫೨. ಹುಲಿಗಿ ಜೈನ ಬಸದಿ ಪದ್ಮಾವತಿ

೫೩. ಹುಲಿಗಿ ಜೈನ ಬಸದಿ ಬ್ರಹ್ಮದೇವ

೫೪. ಹುಲಿಗಿ ಜೈನ ಬಸದಿ ಅಮೃತಶಿಲೆಯಲ್ಲಿ ತೀರ್ಥಂಕರು

೫೫. ಹುಲಿಗಿ ಜೈನ ಬಸದಿ ಚೌವೀಸ್ ತೀರ್ಥಂಕರರ ಕಂಚಿನ ಫಲಕ

೫೬. ಹುಲಿಗಿ ಜೈನ ಬಸದಿ ಶ್ರುತಸ್ಕಂದ ಫಲಕ

೫೭. ಹುಲಿಗಿ ಜೈನ ಬಸದಿ ನಂದೀಶ್ವರ ದೀಪ

ಸ್ಮಾರಕ ಶಿಲ್ಪಗಳು

ವೀರಗಲ್ಲುಗಳು

೫೮. ಹುಲಿಗಿ ವೀರಗಲ್ಲು

೫೯. ಹುಲಿಗಿ ವೀರಗಲ್ಲು

೬೦. ಶಿವಪುರ ವೀರಗಲ್ಲು

ವೀರ ಮಹಾಸತಿಗಲ್ಲು

ಜಾನಪದೀಯ ಶಿಲ್ಪಗಳು

ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಛಾಯಾಚಿತ್ರಗಳು



ಹುಲಿಗಿ ಸೋಮೇಶ್ವರ ದೇವಾಲಯದ ಪೂರ್ವಾಭಿಮುಖ



ಹುಲಿಗಿ ಸೋಮೇಶ್ವರ ದೇವಾಲಯದ ಸಾಮಾನ್ಯ ನೋಟ







ಹುಲಿಗಿ ಸೋಮೇಶ್ವರ ದೇವಾಲಯ ಸಭಾಮಂಟಪದ ನೋಟ



ಹುಲಿಗಿ ಈಶ್ವರ ದೇವಾಲಯದ ಸಭಾ ಮಂಟಪ








ಹುಲಿಗಿ ಹುಲಿಗೆಮ್ಮ ದೇವಾಲಯದ ಸಾಮಾನ್ಯ ನೋಟ



ಹುಲಿಗಿ ಜೈನ ಬಸದಿಯ ಸಾಮಾನ್ಯ ನೋಟ








ಹುಲಿಗಿ ಜೈನ ಬಸದಿಯ ಸಭಾ ಮಂಟಪ



ಸೋಮನಾಥ ಬೆಟ್ಟದ ಸೋಮೇಶ್ವರ ದೇವಾಲಯದ ಸಾಮಾನ್ಯ ನೋಟ



ಸೋಮನಾಥ ಬೆಟ್ಟದ ಸೋಮೇಶ್ವರ ದೇವಾಲಯದ ಸಭಾಮಂಟಪ ಹಾಗೂ ಗರ್ಭಗೃಹ





ಹುಲಿಗಿ ಹುಲಿಗೆಮ್ಮ ದೇವಾಲಯದ ಪ್ರವೇಶದ್ವಾರ ಮತ್ತು ಶಿಖರ









ಶಿವಪುರ ಪಾಳು ಬಸವ ಮಂಟಪ



ಶಿವಪುರ ಮಾರ್ಕಂಡೇಶ್ವರ ದೇವಾಲಯದ ಸಾಮಾನ್ಯ ನೋಟ








ಹೊಸೂರು ಹೊಸೂರಮ್ಮ ದೇವಾಲಯದ ಸಾಮಾನ್ಯ ನೋಟ



ಹೊಸೂರು ಹೊಸೂರಮ್ಮ ದೇವಾಲಯದ ಸಭಾಮಂಟಪ





ಮಂಟಪಗಳ ವೈವಿಧ್ಯತೆ





ಶಿವಪುರದ ಮಂಟಪಗಳು





ಸ್ತಂಭಗಳ ವೈವಿಧ್ಯತೆ



















ಸೋಮೇಶ್ವರ ಬೆಟ್ಟದಲ್ಲಿನ ಕೋಟೆ ಸಾಮಾನ್ಯ ನೋಟ




ಮೂರ್ತಿಶಿಲ್ಪಗಳು

ಗಣಪತಿ



ಹುಲಿಗಿಯ ಗಣಪತಿ



ಸೋಮನಾಥ ಬೆಟ್ಟದಲ್ಲಿನ ಗಣಪತಿ







ಶಿವಪುರದ ಗಣಪತಿ



ಶಿವಪುರ ಮಾರ್ಕಂಡೇಶ್ವರ ದೇವಾಲಯದಲ್ಲಿನ ಗಣಪತಿ







ಹೊಸೂರು ಗಣಪತಿ



ಶೈವ ಮೂರ್ತಿಗಳು



ಹುಲಿಗಿ ಸೋಮೇಶ್ವರ



ಹುಲಿಗಿ ನಂದಿ ಶಿಲ್ಪ







ಹುಲಿಗಿ ಶಾಸನ ಶಿಲ್ಪ



ಶಿವಪುರದ ನಂದಿ ಶಿಲ್ಪ







ಶಿವಪುರದ ವೀರಭದ್ರೇಶ್ವರ



ಶಿವಪುರದ ಮಾರ್ಕಂಡೇಶ್ವರ







ಬೆಟ್ಟದ ಸೋಮನಾಥ ನಂದಿಶಿಲ್ಪ




ಅಗಳಕೇರಿ ಪಾಳು ನಂದಿ ಶಿಲ್ಪ










ಹೊಸೂರು ದ್ವಾರಪಾಲಕರು

ಶಾಕ್ತ ಮೂರ್ತಿ ಶಿಲ್ಪಗಳು



ಸೋಮನಾಥ ಬೆಟ್ಟದ ಮಹಿಷಾಸುರ ಮರ್ದಿನಿ




ಹುಲಿಗಿ ಹುಲಿಗೆಮ್ಮ








ಹೊಸೂರು ಹೊಸೂರಮ್ಮ



ಹೊಸೂರು ನವಮಾತೃಕೆಯರು







ಹೊಸೂರು ನಾಗದೇವತೆ




ಸೋಮನಾಥ ಬೆಟ್ಟದ ಗಜಲಕ್ಷ್ಮೀ







ಹುಲಿಗಿ ಪಾರ್ವತಿ



ಹುಲಿಗಿ ಮಾತಂಗೆಮ್ಮ








ಹುಲಿಗಿ ಮುದ್ದಮ್ಮ



ವೈಷ್ಣವ ಮೂರ್ತಿಶಿಲ್ಪಗಳು




ಹುಲಿಗಿ ಪರಶುರಾಮ



ಹುಲಿಗಿ ಆಂಜನೇಯ







ಹೊಸೂರು ದತ್ತಾತ್ರೇಯ



ಶಿವಪುರ ಆಂಜನೇಯ








ಕಿಡದಾಳು ಆಂಜನೇಯ



ಜೈನ ಮೂರ್ತಿಗಳು



ಹುಲಿಗಿ ಜೈನ ಬಸದಿ ಪಾರ್ಶ್ವನಾಥ–1



ಹುಲಿಗಿ ಜೈನ ಬಸದಿ ಪಾರ್ಶ್ವನಾಥ–2







ಹುಲಿಗಿ ಜೈನ ಬಸದಿಯ ಮಹಾವೀರ



ಹುಲಿಗಿ ಜೈನ ಬಸದಿಯ ಪದ್ಮಾವತಿ







ಹುಲಿಗಿ ಜೈನ ಬಸದಿಯ ಬ್ರಹ್ಮದೇವ



ಹುಲಿಗಿ ಜೈನ ಬಸದಿಯ ಅಮೃತಶಿಲೆಯಲ್ಲಿನ ತೀರ್ಥಂಕರು







ಹುಲಿಗಿ ಜೈನ ಬಸದಿ ಚೌವೀಸ್ ತೀರ್ಥಂಕರರ ಕಂಚಿನ ಫಲಕ



ಹುಲಿಗಿ ಜೈನ ಬಸದಿ ಶ್ರುತಸ್ಕಂದ ಫಲಕ



ಹುಲಿಗಿ ಜೈನ ಬಸದಿ ನಂದೀಶ್ವರ ದ್ವೀಪ



ಸ್ಮಾರಕ ಶಿಲ್ಪಗಳು

ವೀರಗಲ್ಲುಗಳು



ಹುಲಿಗಿ ವೀರಗಲ್ಲು



ಹುಲಿಗಿ ವೀರಗಲ್ಲು







ಶಿವಪುರದ ವೀರಗಲ್ಲು

ವೀರಮಹಾಸತಿಗಲ್ಲುಗಳು




ಹುಲಿಗಿಯ ವೀರಮಹಾಸತಿಗಲ್ಲು



ಹುಲಿಗಿಯ ವೀರಮಹಾಸತಿಗಲ್ಲು







ಅಗಳಕೇರಿ ವೀರಮಹಾಸತಿಗಲ್ಲು


ಜಾನಪದೀಯ ಶಿಲ್ಪಗಳು



ಹರಕೆ ಕಲ್ಲು ಹುಲಿಗಿ



ಹುಲಿಗಿ ಹುಲಿಗೆಮ್ಮನ ಪಾದ







ಹುಲಿಗಿ ಹುಲಿಗೆಮ್ಮನ ಅಗ್ನಿಕುಂಡ



ಹೊಸೂರು ಹರಕೆ ಬಳೆಗಳು









ಹೊಸೂರು ಹೊಸೂರಮ್ಮನ ಪಾದ



ಹೊಸೂರು ಅಗ್ನಿಕುಂಡ





ಶಾಸನಶಾಸ್ತ್ರ ವಿಭಾಗ